ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಆಗಸ್ಟ್ 14 ಬುಧವಾರ 2024

ಸಂಪುಟ: 45 | ಸಂಚಿಕೆ: 120 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕೇಂದ್ರ ಸ್ವಾಮ್ಯದ ಕೈಗಾರಿಕೆಗಳ ಅಭಿವೃದ್ಧಿ, ಪುನಶ್ಚೇತನಕ್ಕೆ

ರಾಜ್ಯ ಸರ್ಕಾರ ಸಹಕರಿಸುತ್ತಿಲ್ಲ



● ನಾನು ಕೇಂದ್ರದ ಮಂತ್ರಿಯಾಗಿರುವುದು ಸಿದ್ದರಾಮಯ್ಯ ಸರ್ಕಾರಕ್ಕೆ ಇಷ್ಟವಿಲ್ಲ ● ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ

ಬೆಂಗಳೂರು, ಆ.13(ಕೆಎಂಶಿ)– ಕೇಂದ್ರ ಸ್ವಾಮ್ಯದ ಕೈಗಾರಿಕೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನಕ್ಕೆ ರಾಜ್ಯ ಸರ್ಕಾರ ಸಹಕಾರ ನೀಡುತ್ತಿಲ್ಲ ಎಂದು ಕೇಂದ್ರ ಕೈಗಾರಿಕೆ ಮತ್ತು ಗಣಿ ಸಚಿವ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯ ಮತ್ತು ಕೇಂದ್ರದ ಸಂಪನ್ಮೂಲ ಹೆಚ್ಚಿಸಿ ಉದ್ಯೋಗ ಸೃಷ್ಟಿಗೆ ನಾವು ಮಾಡುತ್ತಿರುವ ಎಲ್ಲಾ ಪ್ರಯತ್ನಗಳಿಗೆ ರಾಜ್ಯ ಸರ್ಕಾರ ಅಡ್ಡಿ ಮಾಡುತ್ತಿದೆ ಎಂದು ಆರೋಪಿಸಿದ್ದಾರೆ. ನಾನು ಕೇಂದ್ರ ಸಚಿವನಾಗಿ ಕಾರ್ಯನಿರ್ವಹಿಸುವುದೇ ಸಿದ್ದರಾಮಯ್ಯ ಸರ್ಕಾರಕ್ಕೆ ಇಷ್ಟ ಇದ್ದಂತಿಲ್ಲ, ಭದ್ರಾವತಿಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಕುದುರೆಮುಖ ಹಾಗೂ ಎಚ್‌ಎಂಟಿ ಕಾರ್ಖಾನೆಗಳ ಪುನಶ್ಚೇತನಕ್ಕೆ ಅಲ್ಪಾವಧಿಯಲ್ಲೇ ನಮ್ಮ ಇಲಾಖೆ ಕಾರ್ಯಕ್ರಮ ರೂಪಿಸುತ್ತಿದ್ದಂತೆ ರಾಜ್ಯ ಸರ್ಕಾರ ಅದರ ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿದೆ.

ಅಷ್ಟೇ ಅಲ್ಲ, ಕೇಂದ್ರ ಸ್ವಾಮ್ಯದ ಅಡಿ ಬರುವ ಕೈಗಾರಿಕೆಗಳ ನೂರಾರು ಎಕರೆ ಭೂಮಿಯನ್ನು ಅನ್ಯ ಮಾರ್ಗದಲ್ಲಿ ವಶಪಡಿಸಿಕೊಂಡು ಖಾಸಗಿ ಬಿಲ್ಡರ್‌ಗಳಿಗೆ ಸಹಾಯ ಮಾಡಲು ಹೊರಟಿದೆ ಎಂದು ದೂರಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದ ಒಬ್ಬರೇ ಒಬ್ಬ ಸಚಿವರು ಇದುವರೆಗೂ ನನ್ನನ್ನು ಭೇಟಿ ಮಾಡಿ, ಕರ್ನಾಟಕಕ್ಕೆ ಆಗಬೇಕಿರುವ ಕೆಲಸ ಮಾಡಿಕೊಡುವಂತೆ ಕೇಳಿಲ್ಲ. ಅವರು ಬರುವುದು ಬೇಡ, ನಿರುದ್ಯೋಗಿಗಳಿಗೆ ಉದ್ಯೋಗ ಕೊಡಲು ನಾನು ಹಾಕುವ ಯೋಜನೆಗಳಿಗೂ ಸಿದ್ದರಾಮಯ್ಯ ಸರ್ಕಾರ ಅಡ್ಡಿ ಉಂಟು ಮಾಡುತ್ತಿದೆ.

ಹಾಲಿ ಕೈಗಾರಿಕೆಗಳ ವಿಸ್ತರಣೆ ಮತ್ತು ಪುನಶ್ಚೇತನಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಎಷ್ಟು ಕೋಟಿ ರೂ.ಗಳನ್ನು ಬೇಕಾದರೂ ನೀಡಲು ಸಿದ್ಧರಿದ್ದಾರೆ, ಅದನ್ನು ಬಳಸಿಕೊಂಡು ನಮ್ಮ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಮುಂದಾಗಿರುವುದನ್ನೂ ಇವರು ಸಹಿಸಿಕೊಳ್ಳುತ್ತಿಲ್ಲ.

ಕೇಂದ್ರ ಸಚಿವನಾಗಿ ನಾಲ್ಕೈದು ದಿನದಲ್ಲೇ ಕುದುರೆಮುಖ ಕಂಪನಿಗೆ ಕೇಂದ್ರ ಸರ್ಕಾರದ ಆರ್ಥಿಕ ಗ್ಯಾರಂಟಿ ಕೇಳಿದ್ದೆ, ಆದರೆ, ಕುಮಾರಸ್ವಾಮಿ, ಪರಿಸರ ಹಾಳು ಮಾಡಲು ಹೊರಟಿದ್ದಾರೆ ಎಂದು ಗಣಿಗಾರಿಕೆಗೆ ಅವಕಾಶ ನೀಡುವುದಿಲ್ಲ ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿತು. ಇದೇ ಸಿದ್ದರಾಮಯ್ಯ ಸರ್ಕಾರ ಸಂಡೂರಿನ ದೇವದಾರದಲ್ಲಿ ಗಣಿಗಾರಿಕೆಗೆ ಅನುಮತಿ ನೀಡಿದೆ. ನಾನು ಕೇಳಿದ ಪ್ರದೇಶಗಳಲ್ಲಿ ಮರಗಳಿಲ್ಲ, ನಾವು ಪರಿಸರ ಸಂರಕ್ಷಣೆಗಾಗಿ ಹಣ ನೀಡಿದರೂ ಸಮ್ಮತಿ ಕೊಡಲಿಲ್ಲ ಎಂದರು.

ಸರ್ಕಾರ ಇದೇ ರೀತಿ ತನ್ನ ಧೋರಣೆ ಮುಂದುವರೆಸಿದರೆ ಸಾವಿರಾರು ಕುಟುಂಬಗಳು ಬೀದಿಗೆ ಬರಲಿವೆ, ಅಲ್ಲದೆ, ಎಚ್‌ಎಂಟಿ ಕಾರ್ಖಾನೆ ಭೂಮಿಯನ್ನು ಅರಣ್ಯ ಜಾಗವೆಂದು ವಶಪಡಿಸಿಕೊಳ್ಳಲು ಸಿದ್ದರಾಮಯ್ಯ ಸರ್ಕಾರ ಹೊಸ ನಖರಾ ಶುರು ಮಾಡಿದೆ. ಕಾರ್ಖಾನೆ 1964ರಲ್ಲೇ ಉಳುಮೆದಾರರಿಂದ ನೇರವಾಗಿ ಭೂಮಿ ಖರೀದಿಸಿದೆ, ಆದರೆ ಇದೀಗ, ಅಲ್ಲಿ ಮರಗಳು ಬೆಳೆದಿರುವ ನೂರಾರು ಎಕರೆ ಅರಣ್ಯ ■ 6ನೇ ಪುಟಕ್ಕೆ

ಮುಡಾ ಪ್ರಕರಣ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಎರಡು ಅರ್ಜಿ ವಿಚಾರಣೆ ಮುಂದೂಡಿಕೆ

ಬೆಂಗಳೂರು, ಆ.13(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ನಿವೇಶನ ಪಡೆದಿರುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಎರಡು ಪ್ರತ್ಯೇಕ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ಮುಂದೂಡಿದೆ.



ಸಿದ್ದರಾಮಯ್ಯ

ಸ್ನೇಹಮಯಿ ಕೃಷ್ಣ ಹಾಗೂ ಟಿ.ಜೆ. ಅಬ್ರಹಾಂ ಸಲ್ಲಿಸಿರುವ ಖಾಸಗಿ ಅರ್ಜಿಗಳ ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಾಧೀಶ ಸಂತೋಷ್ ಗಜಾನನ ಭಟ್ ಅವರು, ಸ್ನೇಹಮಯಿ ಕೃಷ್ಣ ಅವರ ಅರ್ಜಿ ವಿಚಾರಣೆಯನ್ನು ಆಗಸ್ಟ್ 20 ಹಾಗೂ ಅಬ್ರಹಾಂ ಅರ್ಜಿ ವಿಚಾರಣೆಯನ್ನು 21ಕ್ಕೆ ಮುಂದೂಡಿದರು.

ಎರಡೂ ಅರ್ಜಿಗಳ ಪರ ಸುದೀರ್ಘ ವಾದ–ಪ್ರತಿವಾದ ಆಲಿಸಿದ ನಂತರ ಆಗಸ್ಟ್ 20ರಂದು ಸ್ನೇಹಮಯಿ ಕೃಷ್ಣ ಅವರ ಅರ್ಜಿ ಸ್ವೀಕರಣೆ ಸಂಬಂಧ ಆದೇಶ ನೀಡುವುದಾಗಿಯೂ ತಿಳಿಸಿದರು. ಆದರೆ, 21ಕ್ಕೆ ಅಬ್ರಹಾಂ ಅರ್ಜಿ ವಿಚಾರಣೆ ಮುಂದುವರೆಯಲಿದೆ.

ಇದಕ್ಕೂ ಮುನ್ನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಕುಟುಂಬಕ್ಕೆ 14 ಬಿಡಿ ನಿವೇಶನಗಳನ್ನು ತೆಗೆದುಕೊಂಡಿರುವ ಪ್ರಕರಣವನ್ನು ಭ್ರಷ್ಟಾಚಾರ ತಡೆ ಕಾಯಿದೆ 19ರಡಿ ದೂರು ದಾಖಲಿಸಿಕೊಂಡು ತನಿಖೆಗೆ ಆದೇಶಿಸುವಂತೆ ದೂರುದಾರ ಸ್ನೇಹಮಯಿ ಕೃಷ್ಣ ಪರ ವಕೀಲರು ನ್ಯಾಯಾಲಯಕ್ಕೆ ಮನವಿ ಮಾಡಿದ್ದಾರೆ.

ಸೆಕ್ಷನ್ 17ರಡಿ ಖಾಸಗಿ ದೂರು ಸಲ್ಲಿಸಿದರೆ ಮಾತ್ರ ರಾಜ್ಯಪಾಲರ ಅನುಮತಿ ಬೇಕು, ಆದರೆ, 19ರಡಿ ನೀವೇ ಯಾವುದಾದರೂ ರೀತಿಯಲ್ಲಿ ತನಿಖೆಗೆ ಆದೇಶ ನೀಡಬಹುದೆಂದು ವಕೀಲರಾದ ಲಕ್ಷ್ಮಿ ಅಯ್ಯಂಗಾರ್ ಬಲವಾಗಿ ವಾದ ಮಂಡಿಸಿದರು. ಈ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿದ ಜನಪ್ರತಿನಿಧಿಗಳ ನ್ಯಾಯಾಲಯದ ನ್ಯಾಯಾಧೀಶ ■ 9ನೇ ಪುಟಕ್ಕೆ



ಪ್ಲಾಸ್ಟಿಕ್ ಚೇರ್‌ನಲ್ಲಿ ವೃದ್ಧೆ ರೋಗಿಯನ್ನು ಹೊತ್ತೊಯ್ಯುತ್ತಿರುವ ಸಂಬಂಧಿಕರು.

ಕೆ.ಆರ್.ಆಸ್ಪತ್ರೆಯಲ್ಲಿ ವ್ಹೀಲ್‌ಚೇರ್ ಇಲ್ಲದೇ ರೋಗಿಗಳ ಪರದಾಟ

ಪ್ಲಾಸ್ಟಿಕ್ ಚೇರ್‌ನಲ್ಲಿ ವೃದ್ಧೆಯನ್ನು ಹೊತ್ತೊಯ್ದ ಸಂಬಂಧಿಕರು

■ ಆಸ್ಪತ್ರೆಗೆ ದೌಡಾಯಿಸಿ ವೈದ್ಯಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಶಾಸಕ ಕೆ.ಹರೀಶ್‌ಗೌಡ ■ ಹೊರ ಗುತ್ತಿಗೆ ನೌಕರರ ಅವಾಂತರದಿಂದ ರೋಗಿಗಳಿಗೆ ಸಂಕಷ್ಟ

ಮೈಸೂರು, ಆ.13– ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ವ್ಹೀಲ್‌ಚೇರ್ ಇಲ್ಲದೇ ರೋಗಿಗಳು ಪರದಾಡುವ ದೃಶ್ಯ ಸರ್ವೇಸಾಮಾನ್ಯವಾಗಿದೆ. ಮಂಗಳವಾರ ವೃದ್ಧ ರೋಗಿಯೊಬ್ಬರ ಸಂಬಂಧಿಕರು ವ್ಹೀಲ್‌ಚೇರ್ ದೊರೆಯದೇ ವೃದ್ಧ ಮಹಿಳೆಯನ್ನು ಪ್ಲಾಸ್ಟಿಕ್ ಚೇರ್‌ನಲ್ಲಿ ಹೊತ್ತೊಯ್ದ ಕರುಣಾಜನಕ ಘಟನೆ ನಡೆದಿದೆ.

ಮೈಸೂರಿನ ಬನ್ನಿಮಂಟಪ ನಿವಾಸಿ 76 ವರ್ಷ ವಯೋವೃದ್ಧ ಸುಮತಿ ಅವರು ಅನಾರೋಗ್ಯಕ್ಕೀಡಾಗಿದ್ದು, ಅವರನ್ನು ಕುಟುಂಬಸ್ಥರು ಕೆ.ಆರ್.ಆಸ್ಪತ್ರೆಗೆ ಕರೆತಂದಿದ್ದರು. ಎಮರ್ಜೆನ್ಸಿ ವಾರ್ಡ್‌ನಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿದ ನಂತರ ಕೆಲವು ಟೆಸ್ಟ್‌ಗಳಿಗಾಗಿ ಬೇರೆ ವಾರ್ಡ್‌ಗಳಿಗೆ ಕರೆದೊಯ್ಯಲು ವ್ಹೀಲ್‌ಚೇರ್ ಲಭ್ಯವಿರಲಿಲ್ಲ. ಆದರೂ ಕಷ್ಟಪಟ್ಟು ಆಕೆಯನ್ನು ಹೊತ್ತೊಯ್ದು ವಿವಿಧ ಟೆಸ್ಟ್‌ಗಳನ್ನು ನಡೆಸಿದ ನಂತರ ಇಎನ್‌ಟಿ ವಾರ್ಡ್‌ಗೆ ಕರೆದೊಯ್ಯಲು ವ್ಹೀಲ್‌ಚೇರ್ ಅವಶ್ಯಕತೆ ಇತ್ತು.

ವಿಚಿತ್ರವೆಂದರೆ ಇದ್ದ ಒಂದು ವ್ಹೀಲ್ ಚೇರ್ ಅನ್ನು ಅಲ್ಲಿನ ಸಿಬ್ಬಂದಿ ಮಂಚಕ್ಕೆ ಚೈನ್ ಹಾಕಿ ಕಟ್ಟಿಹಾಕಿದ್ದರು. ವೈದ್ಯರು ರೋಗಿಗೆ ವ್ಹೀಲ್ ಚೇರ್ ವ್ಯವಸ್ಥೆ ಮಾಡುವಂತೆ ನರ್ಸ್‌ಗೆ ಹೇಳಿದರಾದರೂ, ಆಕೆ ಎಷ್ಟೇ ಪ್ರಯತ್ನಿಸಿದರೂ ವ್ಹೀಲ್ ಚೇರ್ ಅಂತೂ ಲಭ್ಯವಾಗಿಲ್ಲ. 30 ನಿಮಿಷಕ್ಕೂ ಹೆಚ್ಚು ಕಾಲ ಕಾಯ್ದು ಬಸವಳಿದ ಸಂಬಂಧಿಕರು, ಕೊನೆಗೆ ವೈದ್ಯರ ಬಳಿ ಇದ್ದ ಪ್ಲಾಸ್ಟಿಕ್ ಚೇರ್ ಅನ್ನು ಕೊಡುವಂತೆ ಕೇಳಿಕೊಂಡಾಗ ವೈದ್ಯರು ಸ್ಪಂದಿಸಿದರು. ಬೇರೆ ದಾರಿ ಇಲ್ಲದೇ ಪ್ಲಾಸ್ಟಿಕ್ ಚೇರ್‌ನಲ್ಲಿ ವೃದ್ಧೆ ಯನ್ನು ಕೂರಿಸಿಕೊಂಡು ಸಂಬಂಧಿಕರು ಮೆಟ್ಟಿಲು ಮೂಲಕ ಹತ್ತಿ ಇಎನ್‌ಟಿ ವಾರ್ಡ್ ತಲುಪಬೇಕಾಯಿತು.

ಶಾಸಕ ಹರೀಶ್‌ಗೌಡ ದೌಡು: ಈ ಕರುಣಾಜನಕ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದ ■ 9ನೇ ಪುಟಕ್ಕೆ



► ಕೆ.ಆರ್.ಆಸ್ಪತ್ರೆಗೆ ಪ್ರತೀ ದಿನ 2 ಸಾವಿರ ಹೊರ ರೋಗಿಗಳು ಹಾಗೂ 200 ಒಳರೋಗಿಗಳು ಬರುತ್ತಿದ್ದಾರೆ. ಅವರಿಗೆ ಉತ್ತಮ ಚಿಕಿತ್ಸೆ ದೊರೆಯುತ್ತಿದೆ. ಇಲ್ಲಿನ ವೈದ್ಯರು ಎಲ್ಲಾ ರೋಗಿಗಳನ್ನು ಸಹಾನುಭೂತಿಯಿಂದ ಕಾಣುತ್ತಿದ್ದಾರೆ. ನಮಗೆ ವೈದ್ಯರದ್ದಾಗಲೀ, ವೈದ್ಯಕೀಯ ಸಿಬ್ಬಂದಿಯದಾಗಲೀ ಯಾವುದೇ ತೊಂದರೆ ಇಲ್ಲ. ನನ್ನ ವೈಯಕ್ತಿಕ ಅಭಿಪ್ರಾಯದಂತೆ ಇಲ್ಲಿಗೆ ಆಯಾಗಳು, ವಾರ್ಡ್‌ಬಾಯ್‌ಗಳು ಹಾಗೂ ಸೆಕ್ಯೂರಿಟಿ ಅವರನ್ನು ಹೊರ ಗುತ್ತಿಗೆ ಮೇಲೆ ನೇಮಿಸಿಕೊಳ್ಳಲಾಗಿದೆ. ಅವರುಗಳು ವೈದ್ಯರು ಹಾಗೂ ಸಿಬ್ಬಂದಿಯ ಮಾತನ್ನೇ ಕೇಳದೇ ತಮ್ಮಿಚ್ಛೆಯಂತೆ ನಡೆದುಕೊಳ್ಳುತ್ತಿರುವುದೇ ರೋಗಿಗಳ ಸಂಕಷ್ಟಕ್ಕೆ ಕಾರಣವಾಗಿದೆ. ಈಗಿರುವ ಹೊರ ಗುತ್ತಿಗೆದಾರರನ್ನು ಬದಲಿಸಲು ಕ್ರಮ ಕೈಗೊಳ್ಳಲಾಗುವುದು. - **ಕೆ.ಹರೀಶ್‌ಗೌಡ, ಶಾಸಕ**

ಕೆಬಿಜೆಯವರ ಭೂಮಂತ್ರ...



ಪುಸ್ತಕ ವಿಮರ್ಶೆ: ನಮ್ಮ ಸಂಸದರಿಗೆ ಹಳ್ಳಿಹಕ್ಕಿಯ ಕಿವಿಮಾತು ■ ಪುಟ–4

ಕರ್ನಾಟಕ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆಯಾಗಿ ಸೌಮ್ಯಾ ರೆಡ್ಡಿ ನೇಮಕ

ಬೆಂಗಳೂರು, ಆ.13– ಕರ್ನಾಟಕ ರಾಜ್ಯ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪುತ್ರಿ, ಮಾಜಿ ಶಾಸಕಿ ಸೌಮ್ಯಾ ರೆಡ್ಡಿ ಅವರನ್ನು ನೇಮಕ ಮಾಡಲಾಗಿದೆ. ಇವರೊಂದಿಗೆ ಅರುಣಾಚಲ ಮಹಿಳಾ ಕಾಂಗ್ರೆಸ್‌ಗೆ ಚುಕುನಾಚಿ ಹಾಗೂ ಚಂಡೀಘಡ ಮಹಿಳಾ ಕಾಂಗ್ರೆಸ್‌ಗೆ ■ 9ನೇ ಪುಟಕ್ಕೆ



ಸಾರ್ವಜನಿಕ ತಿಳುವಳಿಕೆ

ನನ್ನ ಕಕ್ಷಿದಾರರಾದ ಮೈಸೂರು ಸಿಟಿ ನಜರಬಾದ್ ಮೊಹಲ್ಲಾ, ಜಟ್ಟಿಬೀದಿ, ಮನೆ ನಂ. 208 ರಲ್ಲಿ ವಾಸವಾಗಿರುವ ಲೇಟ್ ಬಸವರಾಜು ರವರ ಮಗನಾದ ಸುಮಾರು 57 ವರ್ಷ ವಯಸ್ಸಿನ ಸತೀಶ್ ಮತ್ತು ಕುಟುಂಬದ ಇತರೇ ಸದಸ್ಯರ ಇರಾದೆ ಮೇರೆಗೆ ಪ್ರಕಟಿಸುತ್ತಿರುವ, ಈ ಸಾರ್ವಜನಿಕ ತಿಳುವಳಿಕೆ ನೋಟಿಸಿನ ಕ್ರಮವೇನೆಂದರೆ ಆದಾಗಿ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ಭುಗತಹಳ್ಳಿ ಗ್ರಾಮ, ಸರ್ವೆ.ನಂ. 47 ರ ವಿಸ್ತೀರ್ಣ 03 ಎಕರೆ 27 ಗುಂಟೆಗೆ ಸಂಭಂದಿಸಿದಂತೆ ಬೆಂಗಳೂರಿನ ಕರ್ನಾಟಕ ಅಪಿಲೇಟ್ ಟ್ರಿಬ್ಯೂನಲ್ (KAT) ರವರ ನ್ಯಾಯಾಲಯದಲ್ಲಿ ಕೆ.ಎ.ಟಿ ಅರ್ಜಿ ಸಂಖ್ಯೆ 304/2022 ರಂತೆ ಪ್ರಕರಣ ಬಾಕಿ ಇದ್ದು ಮೇಲ್ಕಂಡ ಸ್ವತ್ತಿನ ಮಾಲೀಕತ್ವದ ಬಗ್ಗೆ ವಿಚಾರಣೆ ಬಾಕಿ ಇರುತ್ತದೆ. ಆದ್ದರಿಂದ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೆಲವೊಂದು ವ್ಯಕ್ತಿಗಳು ಮೇಲ್ಕಂಡ ಸ್ವತ್ತನ್ನು ಮಾರಾಟ ಮಾಡುವ ಉದ್ದೇಶದಿಂದ ಸಾರ್ವಜನಿಕರಿಗೆ ತಪ್ಪು ಮಾಹಿತಿಯನ್ನು ನೀಡಿ ಸತ್ಯಾಂಶವನ್ನು ಮುಚ್ಚಿಟ್ಟು ಅಕ್ರಮವಾಗಿ ಮಾರಾಟ ಮಾಡಲು ಪ್ರಯತ್ನಿಸುತ್ತಿರುವುದು ನಮ್ಮ ಕಕ್ಷಿದಾರರಿಗೆ ತಿಳಿದು ಬಂದಿರುತ್ತದೆ. ಆದ್ದರಿಂದ ನಮ್ಮ ಕಕ್ಷಿದಾರರು ಸಾರ್ವಜನಿಕರ ಗಮನಕ್ಕೆ ತರಬಯಸುವ ವಿಷಯವೇನೆಂದರೆ, ಮೇಲ್ಕಂಡ ಸ್ವತ್ತನ್ನು ಮಾರಾಟ ಮಾಡುವ ಹಕ್ಕು, ಮೇಲ್ಕಂಡ ಪ್ರಕರಣದಲ್ಲಿ ಬರುವ ಆದೇಶಕ್ಕೆ ಒಳಪಟ್ಟಿರುತ್ತದೆ. ಆದ್ದರಿಂದ ಸಾರ್ವಜನಿಕರು ಯಾರೂ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಭೋಗ್ಯ, ಕ್ರಯದ ಕರಾರು, ಕ್ರಯ ಪತ್ರ ಹಾಗೂ ಇನ್ನಿತರ ಯಾವುದೇ ವ್ಯವಹಾರ ಗಳನ್ನು ಮಾಡದಂತೆ ಈ ಮೂಲಕ ಕೋರಲಾಗಿದೆ. ಒಂದು ಪಕ್ಷ ಈ ಸಾರ್ವಜನಿಕ ತಿಳುವಳಿಕೆ ನೋಟಿಸನ್ನು ಕಡೆಗಣಿಸಿ ಯಾರಾದರೂ ಮುಂದುವರೆದಲ್ಲಿ ಅಂತಹ ವ್ಯವಹಾರಗಳು ನನ್ನ ಕಕ್ಷಿದಾರರನ್ನು ಬಾಧ್ಯಪಡಿಸುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಹೆಚ್.ಎಸ್. ಕುಮಾರ್ ಬಿ.ಎ.ಎಲ್.,ಎಲ್‌ಎಲ್.ಬಿ.
ವಕೀಲರು, ಲಾ ಲೆಕ್ಸಿಕನ್ ಅಸೋಸಿಯೇಟ್ಸ್
ನಂ. 1411, ಮೊದಲನೆ ಮಹಡಿ, 6ನೇ ಕ್ರಾಸ್, ತ್ಯಾಗರಾಜ ರಸ್ತೆ, ಕೆ.ಆರ್. ಮೊಹಲ್ಲಾ, ಮೈಸೂರು ನಂ. 9448797546

ದಿನಾಂಕ : 11-08-2024
ಸ್ಥಳ : ಮೈಸೂರು

ರಾಜ್ಯ ರಾಜಕಾರಣಕ್ಕೆ ಪಾದಾರ್ಪಣೆ ಮಾಡುವೆ

ಖಾಸಗಿ ಮಾಧ್ಯಮ ಸಂದರ್ಶನದಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಘೋಷಣೆ

ಚನ್ನಪಟ್ಟಣ ಉಪ ಚುನಾವಣೆಯಲ್ಲಿ ಪ್ರತಾಪ್ ಸಿಂಹ ಸ್ಪರ್ಧೆ?

ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರಿಂದ ತೆರವಾಗಿರುವ ಚನ್ನಪಟ್ಟಣ ವಿಧಾನಸಭೆಯ ಉಪ ಚುನಾವಣೆಯಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಸ್ಪರ್ಧೆ ಮಾಡುತ್ತಾರೆ ಎಂದು ತಿಳಿದು ಬಂದಿದೆ.

ಕಾಂಗ್ರೆಸ್ ಸರ್ಕಾರದಲ್ಲಿ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್‌ನಂತಹ ಘಟಾನುಘಟಿಗಳನ್ನು ಮಣಿಸಲು ಬಿಜೆಪಿಯಲ್ಲಿ ಪ್ರಬಲ ನಾಯಕತ್ವದ ಕೊರತೆ ಇದೆ. ಮೈತ್ರಿ ಪಕ್ಷದ ಹೆಚ್.ಡಿ.ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಸೇರಿದಂತೆ ಕೆಲವರು ವಿಧಾನಸಭೆಯಲ್ಲಿ ಇಲ್ಲ. ಆದ ಕಾರಣ ಫೈರ್ ಬ್ರ್ಯಾಂಡ್ ಪ್ರತಾಪ್ ಸಿಂಹ ಅವರನ್ನು ಚನ್ನಪಟ್ಟಣ ಉಪ ಚುನಾವಣೆ ಮೂಲಕ ವಿಧಾನಸಭೆಗೆ ಕಳುಹಿಸಲು ಬಿಜೆಪಿ ಹೈಕಮಾಂಡ್ ತೀರ್ಮಾನ ಮಾಡಿದೆ ಎನ್ನಲಾಗಿದೆ.

ಈ ಬಗ್ಗೆ 'ಮೈಸೂರು ಮಿತ್ರ' ಜೊತೆ ಮಾತನಾಡಿದ ಪ್ರತಾಪ್ ಸಿಂಹ, ಚನ್ನಪಟ್ಟಣ ಸ್ಪರ್ಧೆ ಬಗ್ಗೆ ನಾನು ಪ್ರತಿಕ್ರಿಯೆ ನೀಡುವುದಿಲ್ಲ. ರಾಜಕಾರಣ ಅಂದರೆ ಏನಾದರೊಂದು ಮಾಡ ಬೇಕಲ್ಲವೆ. ಈ ಹಿನ್ನೆಲೆ ನಾನು ಸುಮ್ಮನೆ ಕೂರುವು ದಿಲ್ಲ. ಆದರೆ ಮುಂದೆ ಏನು ಮಾಡುತ್ತೇನೆ ಎಂದು ಈಗಲೇ ಹೇಳುವುದಿಲ್ಲ. ಏನು ಮಾಡಬೇಕೆಂದು ನನ್ನ ಯೋಚನೆಯಲ್ಲಿದ್ದೇನೋ ಅದನ್ನು ಮಾಡುತ್ತೇನೆ ಎಂದು ಹೇಳಿದರು. ಆದರೆ ಅದೇನೆ ಆಗಲಿ ನಾನು ಬಿಜೆಪಿ ಬಿಟ್ಟು ಹೋಗುವುದಿಲ್ಲ. ರಕ್ತಗತವಾಗಿ ನಮ್ಮ ಕುಟುಂಬದ ರಾಜಕಾರಣ ಜನ ಸಂಘ ಹಾಗೂ ಬಿಜೆಪಿ ಜೊತೆ ಬೆರೆತುಕೊಂಡಿದೆ. ಆದ ಕಾರಣ ಬಿಜೆಪಿಯಲ್ಲೇ ಇರುತ್ತೇನೆ ಎಂದು ಪ್ರತಾಪ್ ಸಿಂಹ ಈ ವೇಳೆ ಸ್ಪಷ್ಟಪಡಿಸಿದ್ದಾರೆ. ರಾಜ್ಯ ರಾಜಕಾರಣಕ್ಕೆ ಬರುತ್ತೇನೆ, ಅದರಲ್ಲೂ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧೆ ಮಾಡುತ್ತೇನೆ ಎಂದು ಪ್ರತಾಪ್ ಸಿಂಹ ಹೇಳಿರುವ ಮಾತು ಚನ್ನಪಟ್ಟಣ ಉಪಚುನಾವಣೆಯ ಅವರ ಸ್ಪರ್ಧೆಯನ್ನು ಖಚಿತಪಡಿಸಿದೆ.

● 2028ರವರೆಗೆ ಯಾಕೆ, ಉಪ ಚುನಾವಣೆಯಲ್ಲೂ ಸ್ಪರ್ಧಿಸಬಹುದು ● ಅಧಿಕಾರಕ್ಕೆ ಹಾತೊರೆಯಲ್ಲ, ಹಿಂದುತ್ವಕ್ಕಾಗಿ ಹೋರಾಟ ಮಾಡುವವರ ಜೊತೆ ಇರುತ್ತೇನೆ ● ಟಿಕೆಟ್ ಕೈ ತಪ್ಪಿದ ಬಗ್ಗೆ ಕಿಡಿ ● ಜಾತಿ ಲೆಕ್ಕಾಚಾರದ ದಾಳ ಉರುಳಿಸಿದರು ● ತಂತ್ರ, ಕುತಂತ್ರ, ಷಡ್ಯಂತ್ರಕ್ಕೆ ಬಲಿಯಾದೆ ● ಅರ್ಹತೆ ಇಲ್ಲದಿದ್ದರೂ ಅಧಿಕಾರಕ್ಕೆ ಬರುವ ಏಕೈಕ ಕ್ಷೇತ್ರ ರಾಜಕೀಯ ● ರಾಜಕಾರಣದಲ್ಲಿ ಮಕ್ಕಳ ಬೆಳೆಸುವ ಅಪ್ಪಂದಿರು ಇರುವವರೆಗೂ ಕಂಡವರ ಮಕ್ಕಳಿಗೆ ಭವಿಷ್ಯವಿಲ್ಲ

ಮೈಸೂರು, ಆ.13(ಬಿಎಲ್‌ಯು)– ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯಲ್ಲಿ ಟಿಕೆಟ್ ಸಿಗದ ಕಾರಣ ರಾಜ್ಯ ರಾಜಕಾರಣಕ್ಕೆ ಪಾದಾರ್ಪಣೆ ಮಾಡಲಿದ್ದು, ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವುದಾಗಿ ಮಾಜಿ ಸಂಸದ ಪ್ರತಾಪ್ ಸಿಂಹ ಘೋಷಿಸಿದ್ದಾರೆ.

ಮಾಧ್ಯಮವೊಂದರ ಸಂದರ್ಶನದಲ್ಲಿ ಈ ವಿಚಾರವನ್ನು ತಿಳಿಸಿರುವ ಪ್ರತಾಪ್ ಸಿಂಹ, ತಮಗೆ ಟಿಕೆಟ್ ತಪ್ಪಲು ವಿರೋಧಿಗಳು ನಡೆಸಿದ ತಂತ್ರ, ಕುತಂತ್ರ, ಷಡ್ಯಂತ್ರವನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ತಪ್ಪಿಸಿ, ನನ್ನ ರಾಷ್ಟ್ರ ರಾಜಕಾರಣದ ಅಸ್ತಿತ್ವಕ್ಕೆ ಅಡ್ಡ ಬಂದರು. ಈಗ ರಾಷ್ಟ್ರ ರಾಜಕಾರಣದಲ್ಲಿ ಅವಕಾಶ ಇಲ್ಲದ ಕಾರಣ ಮುಂದಿನ ದಿನದಲ್ಲಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುವೆ ಎಂದ ಅವರು, 2028ರ ಸಾರ್ವತ್ರಿಕ ಚುನಾವಣೆವರೆಗೆ ಕಾಯುವುದೇಕೆ? ಉಪ ಚುನಾವಣೆಯಲ್ಲೂ ಸ್ಪರ್ಧಿಸಬಹುದಲ್ಲವೇ? ಎಂದು ಪ್ರಶ್ನಿಸಿದರು.

ಯಾವ ಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸುತ್ತೇನೆ ಎಂಬುದರ ಬಗ್ಗೆ ಬಹಿರಂಗಪಡಿಸದ ಅವರು, ತಾಯಿ ಚಾಮುಂಡೇಶ್ವರಿ ಯಾವ ದಾರಿ ತೋರಿಸುತ್ತಾಳೊ ಆ ಹಾದಿಯಲ್ಲಿ ಸಾಗುವೆ ಎಂದು ಹೇಳಿದರು.

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ



ಪ್ರತಾಪ್ ಸಿಂಹ

ಮುಂಬಾಗಿಲಿನಿಂದ ರಾಷ್ಟ್ರ ರಾಜಕಾರಣಕ್ಕೆ ಬಂದಂತೆ ರಾಜ್ಯ ರಾಜಕಾರಣದಲ್ಲೂ ಮುಂಬಾಗಿಲಿನಿಂದಲೇ ಪ್ರವೇಶ ಮಾಡು ತ್ತೇನೆ. ಚುನಾವಣೆಯಲ್ಲಿ ಗೆದ್ದೇ ವಿಧಾನಸಭೆ ಪ್ರವೇಶಿಸುತ್ತೇನೆ ಎಂದು ಆತ್ಮವಿಶ್ವಾಸ ದಿಂದ ಹೇಳಿದರು.

ಷಡ್ಯಂತ್ರಕ್ಕೆ ಬಲಿಯಾದೆ: ಲೋಕಸಭಾ ಚುನಾವಣೆಯಲ್ಲಿ ಟಿಕೆಟ್ ಕೈ ತಪ್ಪಿದ ಬಗ್ಗೆ ಮನ ಬಿಚ್ಚಿ ಮಾತನಾಡಿದ ಪ್ರತಾಪ್ ಸಿಂಹ, ಅಭಿವೃದ್ಧಿ ಕಾರ್ಯ ಮಾಡಿದರೆ ಗೆಲ್ಲುತ್ತೇವೆ ಎಂದು ಅಂದುಕೊಳ್ಳುತ್ತೇವೆ. ಅಭಿವೃದ್ಧಿ ಕಾರ್ಯ ಮಾಡಿದವರನ್ನು ಜನರು ಗೆಲ್ಲಿಸುತ್ತಾರೆ ಎಂಬುದೂ ಕೂಡ ನಿಜ. ಆದರೆ ರಾಜಕಾರಣದಲ್ಲಿ ಪ್ರತಿಸ್ಪರ್ಧಿಗಳನ್ನು ಹೆಣೆಯಲು ತಂತ್ರ, ಕುತಂತ್ರ, ಷಡ್ಯಂತ್ರಗಳು ನಡೆಯುತ್ತವೆ. ನಾನೂ ಕೂಡ ಷಡ್ಯಂತ್ರಕ್ಕೆ ಬಲಿಯಾದೆ ಎಂದು ಅನ್ನಿಸುತ್ತದೆ ಎಂದರು.

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡಲು ನನಗಿಂತ ಯೋಗ್ಯ ವ್ಯಕ್ತಿ ಯಾರಾದರೂ ಇದ್ದರೆ? ಎಂದು ಪ್ರಶ್ನಿಸಿದ ಪ್ರತಾಪ್ ಸಿಂಹ, ನನಗೆ ಅರ್ಹತೆ ಇರಲಿಲ್ಲವೆ, ಮಯಸ್ಸಿರಲಿಲ್ಲವೆ? ಅಭಿವೃದ್ಧಿ ಕಾರ್ಯ ಮಾಡಿರಲಿಲ್ಲವೇ? ಜನಪ್ರಿಯತೆ ಗಳಿಸಿರಲಿಲ್ಲವೇ? ಎಂದು ಆಕ್ರೋಶಭರಿತರಾಗಿ ಪ್ರಶ್ನಿಸಿದರು.

ಒಕ್ಕಲಿಗ ಸಮುದಾಯದ ಪ್ರಾಬಲ್ಯವಿರುವ ಮೈಸೂರಿನಲ್ಲಿ ನನಗೆ ಟಿಕೆಟ್ ತಪ್ಪಿಸುವ ಉದ್ದೇಶದಿಂದಲೇ ಹಿಂದುಳಿದ ವರ್ಗದ ಕಾರ್ಡ್ ಪ್ಲೇ ಮಾಡಲಾಯಿತು. ಯದುವೀರ್ ಅವರನ್ನು ಹಿಂದುಳಿದ ವರ್ಗದವರು ಎಂದರು. ಅವರು ಮಹಾರಾಜರಲ್ಲವೇ? ಅದಿರಲಿ, ಒಕ್ಕಲಿಗರು ಹೆಚ್ಚಾಗಿರುವ ಮೈಸೂರು–ಕೊಡಗು ■ 6ನೇ ಪುಟಕ್ಕೆ

ನೈಪುಣ್ಯದಲ್ಲಿ ವಿದ್ಯಾರ್ಥಿಗಳ ಪದಗ್ರಹಣ



ಮೈಸೂರಿನ ಆರ್.ಟಿ.ನಗರದ ನೈಪುಣ್ಯ ಶಾಲಾ ಆವರಣದಲ್ಲಿ ವಿದ್ಯಾರ್ಥಿ ಪರಿಷತ್ತಿನ ಸದಸ್ಯರ ಪದಗ್ರಹಣ ಸಮಾರಂಭ ನಡೆಯಿತು.

ಮೈಸೂರು,ಆ.13–ಮೈಸೂರಿನ ಆರ್.ಟಿ. ನಗರದ ನೈಪುಣ್ಯ ಶಾಲಾ ಆವರಣದಲ್ಲಿ ವಿದ್ಯಾರ್ಥಿ ಪರಿಷತ್ತಿನ ಸದಸ್ಯರ ಪದ ಗ್ರಹಣ ಸಮಾರಂಭ ಇತ್ತೀಚೆಗೆ ನಡೆಯಿತು.

ವಾಯುದಳ ಸೇನೆಯ ಗ್ರೂಪ್ ಕ್ಯಾಪ್ಟನ್ ವಿ.ಎಸ್.ಶಿವರಾಜ್ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ, ವಿದ್ಯಾರ್ಥಿ ಪರಿಷತ್ತಿನ 21 ಸದಸ್ಯರಿಗೆ ಪದಕಧಾರಣೆ ಮಾಡಿದರು. ಶಾಲೆಯ ಪ್ರಾಂಶುಪಾಲ ರಾದ ಶ್ರೀಮತಿ ಶಾಂತಿನಿ ಜೆರಾಲ್ಡ್ ವಿದ್ಯಾರ್ಥಿ ಪರಿಷತ್ತಿನ ಸದಸ್ಯರಿಗೆ ಪ್ರಮಾಣ ವಚನ ಬೋಧಿಸಿದರು.

ಸಮಾರಂಭದ ಮುಖ್ಯ ಅತಿಥಿ ವಿ.ಎಸ್. ಶಿವರಾಜ್ ಮಾತನಾಡುತ್ತಾ, ಪ್ರತಿಯೊಬ್ಬ ವಿದ್ಯಾರ್ಥಿಯು ನಾಯಕತ್ವದ ಗುಣವನ್ನು ಬೆಳೆಸಿಕೊಳ್ಳಬೇಕು. ನಾಯಕತ್ವದ ಗುಣ ಹುಟ್ಟಿನಿಂದಲೇ ಬರುವುದಿಲ್ಲ. ಅದನ್ನು ನಾವಾಗಿಯೇ ಬೆಳೆಸಿಕೊಳ್ಳಬೇಕು. ಆ ಗುಣವು ಉತ್ತಮ ಮಾತುಗಾರಿಕೆ ಹಾಗೂ ಒಳ್ಳೆಯ ನಡತೆಯಿಂದ ಮಾತ್ರ ಸಾಧ್ಯ ಎಂದು ತಿಳಿಸುತ್ತಾ ಬದುಕಿನಲ್ಲಿ ನಿಶ್ಚಿತ ಗುರಿ, ಸತತ ಅಭ್ಯಾಸ ಹಾಗೂ ಏಕಾಗ್ರತೆ ಅಗತ್ಯ. ದೈನಂದಿನ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಂಡರೆ ನೀವು ನಮ್ಮ ದೇಶದ ಆಸ್ತಿಯಾಗುವುದರಲ್ಲಿ ಸಂದೇಹವೇ ಇಲ್ಲ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಾಲೆಯ ಅಧ್ಯಾಪಕ ಮತ್ತು ಸಿಬ್ಬಂದಿ ವರ್ಗ, ಪೋಷಕರು ಉಪಸ್ಥಿತರಿದ್ದರು.

ಅದಮ್ಯ ಚೇತನ ಸಂಸ್ಥೆಯಿಂದ ಮೈಸೂರಲ್ಲಿ ಗಿಡ ನೆಟ್ಟು ಪರಿಸರ ಸಂರಕ್ಷಣೆ



ಅದಮ್ಯ ಚೇತನ ಸಂಸ್ಥೆ ವತಿಯಿಂದ 450ನೇ ಹಸಿರು ಭಾನುವಾರ ಕಾರ್ಯಕ್ರಮದ ಅಂಗವಾಗಿ ಮೈಸೂರಿನ ಎಸ್‌ಬಿಐ ಆಫೀಸರ್ ಲೇಔಟ್‌ನಲ್ಲಿ ಗಿಡಗಳನ್ನು ನೆಡಲಾಯಿತು. ಈ ವೇಳೆ ಶ್ರೀಮತಿ ತೇಜಸ್ವಿನಿ ಅನಂತ್‌ಕುಮಾರ್ ಇನ್ನಿತರರಿದ್ದರು.

ಮೈಸೂರು,ಆ.13–ಕೇಂದ್ರ ಸಚಿವ ದಿವಂಗತ ಅನಂತ್‌ಕುಮಾರ್ ಅವರ ಬೆಂಗಳೂರಿನ ಅದಮ್ಯ ಚೇತನ ಸಂಸ್ಥೆ ವತಿಯಿಂದ 450ನೇ ಹಸಿರು ಭಾನುವಾರ ಕಾರ್ಯಕ್ರಮದ ಅಂಗವಾಗಿ ಮೈಸೂರಿನ ವಿಜಯನಗರ 4ನೇ ಹಂತದ ಬಳಿ ಇರುವ ಎಸ್‌ಬಿಐ ಆಫೀಸರ್ ಲೇಔಟ್‌ನಲ್ಲಿ ಸುಮಾರು 100 ಗಿಡಗಳನ್ನು ನೆಡಲಾಯಿತು.

ಈ ಸಂದರ್ಭದಲ್ಲಿ ದಿವಂಗತ ಅನಂತಕುಮಾರ್ ಅವರ ಧರ್ಮಪತ್ನಿ ಶ್ರೀಮತಿ ತೇಜಸ್ವಿನಿ ಅನಂತ್‌ಕುಮಾರ್, ಕಾರ್ಯಕ್ರಮವನ್ನು ಉದ್ಘಾಟಿಸಿ, ಪರಿಸರ ಸಂರಕ್ಷಣೆ ಪ್ರಸ್ತುತ ಸಮಾಜಕ್ಕೆ ಅತೀ ಅವಶ್ಯಕ, ಇತ್ತೀಚಿನ ದಿನಗಳಲ್ಲಿ ನಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪರಿಸರದ ಮೇಲೆ ಆಗುತ್ತಿರುವ ಆಕ್ರಮಣಗಳನ್ನು ತಪ್ಪಿಸಲು ಪರಿಸರವನ್ನು ಸಂರಕ್ಷಿಸಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದರು.

ಜೆಎಸ್‌ಎಸ್ ಸಂಸ್ಥೆಯ ಶ್ರೀಹರಿ, ಮೈಸೂರು ಸರ್ಕಾರಿ ಆಯುರ್ವೇದಿಕ್ ಮೆಡಿಕಲ್ ಕಾಲೇಜಿನ ಪ್ರಾಂಶುಪಾಲ ಡಾ.ಗಜಾನನ ಹೆಗಡೆ, ಪ್ರಾಧ್ಯಾಪಕ ಶ್ರೀನಿವಾಸ್, ಬಿಜೆಪಿ ಹಿರಿಯ ಕಾರ್ಯಕರ್ತ ಗೋಪಾಲ್‌ರಾವ್, ಪ್ರೌಢಶಾಲಾ ಸಹ ಶಿಕ್ಷಕರರ ಸಂಘದ ಜಿಲ್ಲಾಧ್ಯಕ್ಷ ಅರುಣ್ ಕುಮಾರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕು ಖಜಾಂಚಿ ವೆಂಕಟೇಶ್, ಎಸ್‌ಬಿಐ ಎಂಜಿಎಂ ಗುರುಪ್ರಸಾದ್, ಎಸ್‌ಬಿಐ ಆಫೀಸರ್ಸ್ ಮತ್ತು ಅದಮ್ಯ ಚೇತನದ ಸದಸ್ಯರು ಉಪಸ್ಥಿತರಿದ್ದರು.

ಹುಯಿಲಾಳು ರಾಮಸ್ವಾಮಿಗೆ ಅಭಿನಂದನೆ...



ಮೈಸೂರಿನ ಪುರಭವನದಲ್ಲಿ ಮೈಸೂರು ಜೈ ಭೀಮ್ ಜಿಲ್ಲಾ ರಂಗಕಲಾ ಮತ್ತು ಸಾಂಸ್ಕೃತಿಕ ವೇದಿಕೆಯಿಂದ ಭಕ್ತ ಪ್ರಹ್ಲಾದ ಪೌರಾಣಿಕ ನಾಟಕವನ್ನು ಏರ್ಪಡಿಸಲಾಗಿತ್ತು. ಈ ವೇಳೆ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಅವರನ್ನು ಕಾರ್ಯಕ್ರಮದ ಆಯೋಜಕರಾದ ಕೋಟೆ ಪುಟ್ಟರಾಜು, ಕಲ್ಕುಂದ ಲೋಕೇಶ್, ಶೆಟ್ಟಿನಾಯಕನಹಳ್ಳಿ ಸಿದ್ಧಾರ್ಥ ಚಂದ್ರಶೇಖರ್, ದಾಸನಕೊಪ್ಪಲ್ ಬೋರೇಗೌಡ ಅಭಿನಂದಿಸಿದರು.

ನಾಳೆ ಮೈಸೂರು ಶ್ರೀ ಸುತ್ತೂರು ಮಠದಲ್ಲಿ ಸ್ವಾತಂತ್ರ್ಯ ದಿನಾಚರಣೆ

ಮೈಸೂರು: ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ಶ್ರೀ ಸುತ್ತೂರು ಮಠದಲ್ಲಿ ಆ. 15ರಂದು ಬೆಳಗ್ಗೆ 9 ಗಂಟೆಗೆ 78ನೇ ಸ್ವಾತಂತ್ರ್ಯ ದಿನವನ್ನು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಆಚರಿಸಲಾಗುವುದು. ಶಾಸಕ ಟಿ.ಎಸ್. ಶ್ರೀವತ್ಸ ಧ್ವಜಾರೋಹಣ ನೆರವೇರಿಸುವರು. ಗುರುಕುಲ ಸಾಧಕರು, ಸೇವಾ ಸಿಬ್ಬಂದಿ ವರ್ಗ, ಆರಕ್ಷಕ ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಇಂಡಿಯನ್ ಬ್ಯಾಂಕ್‌ನ ಸಂಸ್ಥಾಪನಾ ದಿನಾಚರಣೆ



ಇಂಡಿಯನ್ ಬ್ಯಾಂಕ್‌ನ 118ನೇ ಸಂಸ್ಥಾಪನಾ ದಿನದ ಅಂಗವಾಗಿ ಮೈಸೂರಿನ ವಲಯ ಕಚೇರಿ ವತಿಯಿಂದ ಕುವೆಂಪುನಗರ ಶಾಖೆಯಿಂದ ವಿವೇಕಾನಂದ ವೃತ್ತದವರೆಗೆ ಗಿಡ ನೆಡುವ ಮೂಲಕ ವನ ಮಹೋತ್ಸವ ಕಾರ್ಯಕ್ರಮ ನೆರವೇರಿಸಲಾಯಿತು.

ನಿಧನ

ಗೌರಮ್ಮ



ಮೈಸೂರು: ಮೈಸೂರು ತಾಲೂಕು ಜಯಪುರ ಹೋಬಳಿಯ ಯಡಹಳ್ಳಿ ಗ್ರಾಮದ ನಿವಾಸಿ ದಿವಂಗತ ಶಂಭುಲಿಂಗಪ್ಪ ಅವರ ಪತ್ನಿ ಗೌರಮ್ಮ (94) ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಶಾ ಕಾರ್ಯಕರ್ತೆಯರಿಗೆ ಕಾನೂನುಬದ್ಧ ಸೌಲಭ್ಯ ನೀಡಬೇಕು

ಸಾಮಾಜಿಕ ಹೋರಾಟಗಾರ್ತಿ ಸವಿತಾ ಮಲ್ಲೇಶ್ ಒತ್ತಾಯ



ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಮಂಗಳವಾರ ನಡೆದ ಆಶಾ ಕಾರ್ಯಕರ್ತೆಯರ ಜಿಲ್ಲಾ ಮಟ್ಟದ ಸಮ್ಮೇಳನವನ್ನು ಸಾಮಾಜಿಕ ಹೋರಾಟಗಾರ್ತಿ ಸವಿತಾ ಮಲ್ಲೇಶ್ ಉದ್ಘಾಟಿಸಿದರು.

ಮೈಸೂರು, ಆ.13(ಎಂಟಿವೈ)–ಆರೋಗ್ಯ ಕ್ಷೇತ್ರದಲ್ಲಿ ಆಮೂಲಾಗ್ರ ಸೇವೆ ಸಲ್ಲಿಸುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಕಾನೂನುಬದ್ಧ ಸೌಲಭ್ಯ ನೀಡಲೇಬೇಕು ಎಂದು ಸಾಮಾಜಿಕ ಹೋರಾಟಗಾರ್ತಿ ಸವಿತಾ ಮಲ್ಲೇಶ್ ಒತ್ತಾಯಿಸಿದ್ದಾರೆ.

ಮೈಸೂರಿನ ಮಹಾರಾಜ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಮಂಗಳವಾರ ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ, ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್(ಎಐಯುಟಿಯುಸಿ) ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಆಶಾ ಕಾರ್ಯಕರ್ತೆಯರ ಜಿಲ್ಲಾ ಮಟ್ಟದ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ದುಡಿಯುವವರನ್ನು ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿಸಿಕೊಳ್ಳುವುದು ಸರಿಯಲ್ಲ. ಆಶಾ ಕಾರ್ಯಕರ್ತೆಯರು ಸಮಾಜದಲ್ಲಿ ರೋಗ ಹರಡದಂತೆ ಕಟ್ಟೆಚ್ಚರ ವಹಿಸಿ ಕೆಲಸ ಮಾಡುತ್ತಿದ್ದಾರೆ. ಆದರೆ, ಅವರಿಗೆ ಶಾಸನಬದ್ಧವಾಗಿ ಸೌಲಭ್ಯ ದೊರಕಬೇಕು. ಇದುವರೆಗೂ ಶಾಸನಬದ್ಧ ಸೌಲಭ್ಯ ಸಿಗುತ್ತಿಲ್ಲ ಎಂದರೆ, ಸರ್ಕಾರ ಇದುವರೆಗೂ ಆಶಾ ಕಾರ್ಯಕರ್ತೆಯರ ಸಮಸ್ಯೆಯನ್ನು ಈಡೇರಿಸಲು ಗಂಭೀರವಾಗಿ ಪರಿಗಣಿಸಿಲ್ಲ ಎಂದು ತಿಳಿಯುತ್ತದೆ ಎಂದು ವಿಷಾದಿಸಿದರು.

ಆಶಾ ಕಾರ್ಯಕರ್ತೆಯರು ಮಾಡುವ ಕೆಲಸಕ್ಕೆ ಪ್ರಸ್ತುತ ರಾಜ್ಯ ಸರ್ಕಾರ ಗೌರವ ಧನ ನೀಡುತ್ತಿದೆ. ಅಲ್ಲದೆ, ಆರೋಗ್ಯ ಇಲಾಖೆಯ ಪೋರ್ಟಲ್‌ನಲ್ಲಿ ಕರ್ತವ್ಯಕ್ಕೆ ಸಂಬಂಧಿಸಿದಂತೆ ಮಾಹಿತಿ ನಮೂದಿಸುವಾಗ ಕೆಲ ತಾಂತ್ರಿಕ ಸಮಸ್ಯೆ ಉಂಟಾಗುತ್ತಿದ್ದು, ಮಾಹಿತಿ ನಮೂದಿಸಿದರೂ ಸಿಗಬೇಕಾದ ಸಂಭಾವನೆ ಸಿಗುತ್ತಿಲ್ಲ. ಇದು ಸರ್ಕಾರಕ್ಕೆ ತಿಳಿದಿದೆ. ಆದರೆ, ಆಗಬೇಕಾದ ಕೆಲಸವನ್ನು ಆಶಾಗಳು ಮಾಡುತ್ತಿರುವುದರಿಂದ ಸರ್ಕಾರಗಳು ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದೆ ಸುಮ್ಮನಿವೆ. ಆಶಾಗಳಿಗೆ ನೀಡಿರುವ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದಾರೆ. ಆದರೆ, ಅವರ ಕೆಲಸಕ್ಕೆ ಅಗೌರವ ಉಂಟಾಗುತ್ತಿದೆ. ಶಾಸನವೇ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಆಶಾಗಳ ಕಾರ್ಯಕ್ಕೆ ನ್ಯಾಯ ಒದಗಿಸಲು ಮೊದಲು ಶಾಸನ ಆಗಬೇಕು. ಹೆಣ್ಣು ಮಕ್ಕಳು ಮಾಡುವ ಕೆಲಸಕ್ಕೆ ಗೌರವ ಹಾಗೂ ಸೂಕ್ತ ಸಂಭಾವನೆ ಕೊಡಬೇಕು. ಆಗುತ್ತಿರುವ ಶೋಷಣೆ ನಿಲ್ಲಿಸಬೇಕು. ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿಸಿಕೊಳ್ಳುತ್ತಿರುವುದನ್ನು ನಿಲ್ಲಿಸಬೇಕು. ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡಿಸುವುದು ಸಮಂಜಸವಲ್ಲ. ರೋಗ ಬರುವುದನ್ನು ತಡೆಗಟ್ಟುವ ಕೆಲಸ ಮಾಡುತ್ತಿದ್ದರೂ ಸರಿಯಾದ ಮಾನ್ಯತೆ ಸಿಗುತ್ತಿಲ್ಲ ಎಂದು ವಿಷಾದಿಸಿದರು.

ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಗೌರವಾಧ್ಯಕ್ಷೆ ಸಂಧ್ಯಾ ಪಿ.ಎಸ್. ಪ್ರಾಸ್ತಾವಿಕವಾಗಿ ಮಾತನಾಡಿ, ಆಸ್ಪತ್ರೆಗಳಲ್ಲಿ ಬಿಳಿ ಹಾಗೂ ನೀಲಿ ಬಣ್ಣದ ಬಟ್ಟೆ ತೊಟ್ಟು ಕೆಲಸ ಮಾಡುವ ಆರೋಗ್ಯ ಕಾರ್ಯಕರ್ತೆಯರಿಗೆ ತಿಂಗಳಿಗೆ 40 ಸಾವಿರಕ್ಕಿಂತ ಹೆಚ್ಚು ವೇತನ ನೀಡಲಾಗುತ್ತಿದೆ. ಆದರೆ, ಅವರಷ್ಟೇ ಕೆಲಸವನ್ನು ಆಶಾ ಕಾರ್ಯಕರ್ತೆಯರು ಮಾಡುತ್ತಿದ್ದಾರೆ. ಆದರೆ, ಕಡಿಮೆ ಮೊತ್ತದ ಗೌರವ ಧನ ನೀಡುವ ಮೂಲಕ ಕೆಲಸ ಮಾಡಿಸಿಕೊಳ್ಳಲಾಗುತ್ತಿದೆ. ಇನ್ನಿತರ ಆರೋಗ್ಯ ಕಾರ್ಯಕರ್ತರಂತೆ ಆಶಾ ಕಾರ್ಯಕರ್ತೆಯರಿಗೂ ವೇತನ ಸಿಗಬೇಕು ಎಂದರು.

ನಮ್ಮ ಸಂಘ ನಿರಂತರವಾಗಿ ಹೋರಾಟ ಮಾಡಿಕೊಂಡು ಬಂದ ಹಿನ್ನೆಲೆಯಲ್ಲಿ ಇಂದು ಆಶಾ ಕಾರ್ಯಕರ್ತೆಯರಿಗೆ ಸಮವಸ್ತ್ರ ನೀತಿ ಜಾರಿಗೊಳಿಸಲಾಗಿದೆ. ನಿಗದಿತ ವೇತನ ನೀಡುವಂತೆ ಹೋರಾಟ ಮಾಡಲಾಗುತ್ತಿದೆ. ಅಲ್ಲಿವರೆಗೂ ರಾಜ್ಯ ಸರ್ಕಾರ ನೀಡುವ ಗೌರವಧನದೊಂದಿಗೆ ಕೇಂದ್ರ ಸರ್ಕಾರವೂ ಮ್ಯಾಚಿಂಗ್ ಗ್ರಾಂಟ್ ನೀಡುಮಾಸಿಕ 15 ಸಾವಿರ ನೀಡಬೇಕು ಎಂದು ಆಗ್ರಹಿಸಲಾಗುತ್ತಿದೆ. ಸಂಬಂಧಪಡದ ಕೆಲಸವನ್ನು ಆಶಾಗಳಿಂದ ಮಾಡಿಸಬಾರದು. ಮೊಬೈಲ್ ಮೂಲಕ ಮಾಡಿಸಿಕೊಳ್ಳುವ ಕೆಲಸಕ್ಕೆ ಡಾಟಾ ಒದಗಿಸಬೇಕು. ಪ್ರೋತ್ಸಾಹ ಧನ ನೀಡಬೇಕು. ಮೊಬೈಲ್ ಬಳಸಲು ಸಾಧ್ಯವಾಗದ ಆಶಾಗಳ ಕಾರ್ಯಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕು. 60 ವರ್ಷಕ್ಕೆ ಸೇವಾ ನಿವೃತ್ತಿ ನೀಡಿ, ಪಶ್ಚಿಮ ಬಂಗಾಳ ಮಾದರಿಯಲ್ಲಿ 3 ಲಕ್ಷ ಇಡುಗಂಟು ನೀಡಬೇಕು ಎಂದು ಒತ್ತಾಯಿಸಿದರು. ಕಾರ್ಯಕ್ರಮದಲ್ಲಿ ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ಮೇಟಿ, ಎಐಯುಟಿಯುಸಿ ಅಧ್ಯಕ್ಷ ಯಶೋಧರ್, ಮೈಸೂರು ನಗರ ಆಶಾಸಂಘದ ಸಲಹೆಗಾರರಾದ ಸೀಮಾ ಜಿ.ಎಸ್, ಆಶಾ ಕಾರ್ಯಕರ್ತೆಯರ ಸಂಘದ ಅಧ್ಯಕ್ಷೆ ಶುಭ ಮಂಗಳ, ಉಪಾಧ್ಯಕ್ಷೆ ಭಾಗ್ಯ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಆ.13–ಬಿಳಿಕೆರೆ ಉಪವಿಭಾಗದ ಗದ್ದಿಗೆ ಶಾಖಾ ವ್ಯಾಪ್ತಿ ಕಾಮಗಾರಿ ನಿಮಿತ್ತ ಆ.14ರಂದು ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಜಿ.ವಿ.ಗುಡಿ ವಿದ್ಯುತ್ ವಿತರಣಾ ಕೇಂದ್ರದ ಹಸ್ವಾಳು, ಜಿ.ವಿ.ಗುಡಿ, ಫಾರಂ ಗೇಟ್, ದೈತನಕೆರೆ ಕಾವಲ್, ಮಾರನಹಳ್ಳಿ, ಪೆರಿಯಾರ್ ಗ್ರಾಮದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಪಿಹೆಚ್.ಡಿ ಪದವಿ



ಮೈಸೂರು: ಡಾ.ಎಂ.ಸುರೇಶ ಅವರ ಮಾರ್ಗದರ್ಶನದಲ್ಲಿ ಹೆಚ್.ಡಿ. ಪುಷ್ಪಾ ಅವರು ಅರ್ಥಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

'ವೈದ್ಯಾಧಿಕಾರಿಗಳಿಗೆ ಸಂವಹನ ಹಾಗೂ ನವಜಾತ ಶಿಶುಗಳ ಶ್ರವಣ ಪರೀಕ್ಷೆ' ಕಾರ್ಯಕ್ರಮಕ್ಕೆ ಚಾಲನೆ



ರಾಷ್ಟ್ರೀಯ ಶ್ರವಣ ದೋಷ ನಿಯಂತ್ರಣ ಮತ್ತು ನಿವಾರಣಾ ಸಂಬಂಧ ಡಿಹೆಚ್‌ಓ ಡಾ.ಕುಮಾರಸ್ವಾಮಿ ಭಿತ್ತಿಪತ್ರಗಳನ್ನು ಬಿಡುಗಡೆ ಮಾಡಿದರು.

ಮೈಸೂರು,ಆ.13– ಮಾನಸಗಂಗೋತ್ರಿಯ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಯ ಅಕಾಡೆಮಿಕ್ ಬ್ಲಾಕ್‌ನ ಸೆಮಿನಾರ್ ಹಾಲ್‌ನಲ್ಲಿ ಹಮ್ಮಿಕೊಂಡಿದ್ದ 'ವೈದ್ಯಾಧಿಕಾರಿಗಳಿಗೆ ಸಂವಹನ ಹಾಗೂ ನವಜಾತ ಶಿಶುಗಳ ಶ್ರವಣ ಪರೀಕ್ಷೆ' ಕುರಿತ ತರಬೇತಿ ಕಾರ್ಯಕ್ರಮವನ್ನು ಮಂಗಳವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕುಮಾರಸ್ವಾಮಿ ಪಿ.ಸಿ ಉದ್ಘಾಟನೆ ಮಾಡಿದರು.

ಜಿಲ್ಲೆಯ ತಾಲೂಕು ಆರೋಗ್ಯ ಅಧಿಕಾರಿಗಳು, ಇಎನ್‌ಟಿ ತಜ್ಞರು, ಮಕ್ಕಳ ತಜ್ಞರು, ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳು ಹಾಗೂ ಆರ್.ಬಿ.ಎಸ್.ಕೆ ವೈದ್ಯರುಗಳಿಗೆ ಸಂವಹನ ನ್ಯೂನತೆ ಮತ್ತು ನವಜಾತ ಶಿಶುಗಳಲ್ಲಿ ಕಂಡು ಬರುವ ಶ್ರವಣ ನ್ಯೂನತೆಗಳ ಕುರಿತು ತರಬೇತಿಯನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಶ್ರವಣ ದೋಷ ನಿಯಂತ್ರಣ ಮತ್ತು ನಿವಾರಣಾ ಕಾರ್ಯಕ್ರಮದ (ಎನ್.ಪಿ.ಪಿ.ಸಿ.ಡಿ) ಭಿತ್ತಿಪತ್ರಗಳನ್ನು ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್. ಗೋಪಿನಾಥ್, ಮಾನಸ ಗಂಗೋತ್ರಿಯ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕರಾದ ಡಾ.ಎಂ ಪುಷ್ಪಾವತಿ, ಪ್ರೊ. ಡಾ.ಸಂದೀಪ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.


ಆ.20, ಡಿ.ದೇವರಾಜ ಅರಸು ಜನ್ಮ ದಿನಾಚರಣೆ



ಮೈಸೂರು,ಆ.13– ಕರ್ನಾಟಕದ ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 109ನೇ ಜನ್ಮದಿನಾಚರಣೆಯನ್ನು ಆ.20ರಂದು ಬೆಳಗ್ಗೆ 11.30ಕ್ಕೆ ಕಲಾಮಂದಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಚಿವರು ಮತ್ತು ಇತರೆ ಸಚಿವರು, ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ವಿಧಾನಪರಿಷತ್ ಸದಸ್ಯರು ಹಾಗೂ ಜನಪ್ರತಿನಿಧಿಗಳು ಭಾಗವಹಿಸುವರು. ಜಿಲ್ಲೆಯ ಎಲ್ಲಾ ಹಿಂದುಳಿದ ವರ್ಗಗಳ ಸಂಘ ಸಂಸ್ಥೆಗಳವರು ಹಾಗೂ ಸಾರ್ವಜನಿಕರು ಭಾಗವಹಿಸಬೇಕು ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

14.08.2024 ಬುಧವಾರ, ಮಳೆ ನಕ್ಷತ್ರ: ಆಶ್ಲೇಷ 03.08.2024ರಿಂದ 16.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಅನುರಾಧ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಶ್ರೀ ವೀರಭದ್ರೇಶ್ವರಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರಸ್ವಾಮಿಯ ಜನ್ಮೋತ್ಸವ. ಮಹಾರಥೋತ್ಸವ, ಶ್ರಾವಣ ಮಾಸದ ಪೂಜೆ ಕಾರ್ಯಕ್ರಮ. ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ. ಬೆಳಗ್ಗೆಯಿಂದ.
- **ಅವಧೂತ ದತ್ತ ಪೀಠ:** ಅವಧೂತ ದತ್ತ ಪೀಠಾಧಿಪತಿ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಮತ್ತು ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರ 21ನೇ ಚಾತುರ್ಮಾಸ್ಯ ವ್ರತ ದೀಕ್ಷಾ ಮಹೋತ್ಸವ. ದತ್ತ ಯೋಗ. ಸ್ಥಳ: ಆಶ್ರಮದ ಆವರಣ, ಊಟಿ ರಸ್ತೆ, ಬೆಳಗ್ಗೆಯಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಆಮವಾತ (ರುಮಟೈಡ್ ಆರ್ಥ್ರೈಟೀಸ್) ಬಗ್ಗೆ ಉಚಿತ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೊಜ್ಜು ನಿವಾರಣೆ ಮತ್ತು ಮೊಣಕಾಲಿನ ಸಂಧಿವಾತಕ್ಕೆ ಪ್ರತ್ಯೇಕ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ. ಬೆಳಗ್ಗೆ 9 ಗಂಟೆಗೆ.
- **ಫಸ್ಟ್ ಸರ್ಕಲ್ ಸೊಸೈಟಿ:** ಉದ್ಯಮಿ ಒಕ್ಕಲಿಗ ಸಮಾವೇಶ. ಸಾನ್ನಿಧ್ಯ: ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಜಗದ್ಗುರು ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿ. ಉಪಸ್ಥಿತಿ: ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ, ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ. ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್. ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ. ಮುಖ್ಯ ಅತಿಥಿಗಳು: ಸಚಿವರಾದ ಕೆ.ವೆಂಕಟೇಶ್, ಚಲುವರಾಯಸ್ವಾಮಿ, ಕೃಷ್ಣಭೈರೇಗೌಡ, ಎಂ.ಸಿ.ಸುಧಾಕರ್, ಮಾಜಿ ಸಂಸದ ಬಿ.ಎನ್.ಬಚ್ಚೇಗೌಡ, ಶಾಸಕರುಗಳಾದ ರಮೇಶ್ ಬಂಡಿಸಿದ್ದೇಗೌಡ, ಕೆ.ಹರೀಶ್‌ಗೌಡ, ಉದಯ್ ಕೆ.ಎಂ., ಗಣಿಗ ರವಿಕುಮಾರ್, ದರ್ಶನ್ ಪುಟ್ಟಣ್ಣಯ್ಯ, ಮಂಥರ್‌ಗೌಡ, ದಿನೇಶ್ ಗೂಳಿಗೌಡ, ಮಧು ಜಿ.ಮಾದೇಗೌಡ. ಸ್ಥಳ ಸದರನ್ ಸ್ಟಾರ್. ಬೆಳಗ್ಗೆ 9 ಗಂಟೆಗೆ.
- **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಹಿಳಾ ಘಟಕ ಮತ್ತು ಮೈಸೂರು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್:** ಸ್ವಾತಂತ್ರ್ಯೋತ್ಸವ ಚುಟುಕು ಕವಿಗೋಷ್ಠಿ. ಉದ್ಘಾಟನೆ: ವಿಧಾನಪರಿಷತ್ ಮಾಜಿ ಸದಸ್ಯ ತೋಂಟದಾರ್ಯ. ಪ್ರಾಸ್ತಾವಿಕ: ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್. ಅಧ್ಯಕ್ಷತೆ: ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಎಂಜಿಆರ್ ಅರಸು. ಸ್ಥಳ: ವಿಜಯನಗರ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ. ಬೆಳಗ್ಗೆ 10.30ಕ್ಕೆ.
- **ಬಸವ ಭಾರತ ಪ್ರತಿಷ್ಠಾನ, ನಾಡಿನ ಸಮಸ್ತ ಬಸವ ಪರ ಸಂಘಟನೆಗಳ ಸಹಭಾಗಿತ್ವ:** ಬಸವ ಧರ್ಮ ಜಾಗೃತಿ ಅಭಿಯಾನ. ಇಷ್ಟಲಿಂಗ ಧಾರಣೆ ಶಿವಯೋಗ, ವಚನ ಪಠಣ, ಶ್ರಾವಣ ಮಾಸದ ಪ್ರವಚನ. ಜೆಎಸ್‌ಎಸ್ ಕಾಲೇಜು ಪ್ರಾಧ್ಯಾಪಕ ಡಾ. ಪಿ.ಎಂ.ಮಹೇಂದ್ರ ಮೂರ್ತಿ ಅವರಿಂದ 'ಬಸವಣ್ಣನವರ ವಚನಗಳಲ್ಲಿ ವೈಚಾರಿಕತೆ' ವಿಷಯ ಕುರಿತು ಪ್ರವಚನ. ಸ್ಥಳ: ಹಿರಿಯ ನಾಗರಿಕರ ಹಗಲು ಯೋಗಕ್ಷೇಮ ಕೇಂದ್ರ, ಕುವೆಂಪುನಗರ. ಬೆಳಗ್ಗೆ 11ರಿಂದ 1.30 ಗಂಟೆವರೆಗೆ.
- **ಉಡುಪಿಯ ರಾಷ್ಟ್ರಕವಿ ಪೈ ಸಂಶೋಧನಾ ಕೇಂದ್ರ, ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್, ಮಹಾತ್ಮಗಾಂಧಿ ಮೆಮೋರಿಯಲ್ ಕಾಲೇಜು (ಉಡುಪಿ); ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ (ಮೈಸೂರು):** ಶ್ರೀಮತಿ ಟಿ.ವಿಮಲಾ ವಿ.ಪೈ ಪ್ರಾಯೋಜಿತ ರಾಷ್ಟ್ರಕವಿ ಗೋವಿಂದ ಪೈ ಪ್ರಶಸ್ತಿ ಪ್ರದಾನ–2023 ಕಾರ್ಯಕ್ರಮ, ಪ್ರಶಸ್ತಿ ಪುರಸ್ಕೃತರು: ಪುರಾತತ್ವ ಶಾಸ್ತ್ರಜ್ಞ ಪ್ರೊ. ಎ.ವಿ.ನರಸಿಂಹ ಮೂರ್ತಿ. ಅಧ್ಯಕ್ಷತೆ: ಎಂಜಿಪಿ ಕಾಲೇಜು (ಉಡುಪಿ) ಪ್ರಾಂಶುಪಾಲ ಪ್ರೊ. ಲಕ್ಷ್ಮೀನಾರಾಯಣ ಕಾರಂತ. ಉಪಸ್ಥಿತಿ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್. ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ತ್ಯಾಗರಾಜ ರಸ್ತೆ. ಮಧ್ಯಾಹ್ನ 12 ಗಂಟೆಗೆ.
- **ವ್ಯವಸ್ಥಾಪಕರು:** ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಕಚೇರಿ ಉದ್ಘಾಟನೆ. ಉದ್ಘಾಟನೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್. ಸ್ಥಳ: ಸಾರ್ವಜನಿಕ ಕಚೇರಿಗಳ ಕಟ್ಟಡ, ಸಂಸ್ಕೃತ ಪಾಠಶಾಲೆ ಸಿಗ್ನಲ್ ಬಳಿ, ಚಾಮರಾಜ ಜೋಡಿ ರಸ್ತೆ. ಮಧ್ಯಾಹ್ನ 3 ಗಂಟೆಗೆ.
- **ಜಗದ್ಗುರು ಶ್ರೀ ಮನ್ಮಧ್ವಾಚಾರ್ಯರ ಮೂಲ ಮಹಾ ಸಂಸ್ಥಾನ, ಶ್ರೀ ರಾಜೇಂದ್ರ ತೀರ್ಥರ ಪೂರ್ವಾದಿ ಮಠ, ಶ್ರೀ ಮುನಿತ್ರಯ ಪೀಠ, ಶ್ರೀ ವ್ಯಾಸರಾಜ ಮಠ (ಸೋಸಲೆ):** ಶ್ರೀವಿದ್ಯಾ ಕರ್ನಾಟಕ ಸಿಂಹಾಸನಾಧೀಶ್ವರರಾದ ಶ್ರೀ ಶ್ರೀ 1008 ಶ್ರೀ ವಿದ್ಯಾಶ್ರೀಶ ತೀರ್ಥ ಶ್ರೀಪಾದಂಗಳವರ 8ನೇ ಚಾತುರ್ಮಾಸ್ಯ. ಸ್ಥಳ: ಶ್ರೀ ವ್ಯಾಸರಾಜ ಮಠ, ಸೋಸಲೆ ಕ್ಷೇತ್ರ. ಸಂಜೆ.
- **ಬೆಂಗಳೂರಿನ ಕರ್ನಾಟಕ ಜಾನಪದ ಅಕಾಡೆಮಿ, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಕಲೆಗಳ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತಾರಿ ಸಾಂಸ್ಕೃತಿಕ ಸಂಘಟನೆ(ಮೈಸೂರು)**: ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜಾನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ–2024. ಸ್ಥಳ: ಸುಚಿತ್ರ ಕಲಾ ಆರ್ಟ್ ಗ್ಯಾಲರಿ, ಕಲಾಮಂದಿರ. ಸಂಜೆ 4.30ಕ್ಕೆ.
- **ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ:** ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ. ಕುವೆಂಪು ಅಧ್ಯಯನ ಕೇಂದ್ರದ ಸಂಶೋಧಕರಾದ ಕು। ಅನಿತಾ ಹೆಚ್.ಟಿ. ಅವರಿಂದ 'ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ' ವಿಷಯ ಕುರಿತು ಉಪನ್ಯಾಸ. ಸ್ಥಳ: ಹೆಚ್‌ಐಜಿ–1703, 9ನೇ ಕ್ರಾಸ್, ರಾಮಕೃಷ್ಣನಗರ, ಸುಯೋಗ್ ಆಸ್ಪತ್ರೆ ಎದುರು. ಸಂಜೆ 5.30ಕ್ಕೆ.
- **ಶ್ರೀ ಸುತ್ತೂರು ಮಠ (ಮೈಸೂರು ಶಾಖೆ):** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ.ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ವ ಚಿಂತಾಮಣಿ ಕುರಿತು ಪ್ರವಚನ. ವಾಚನ: ವಿದುಷಿ ಎಂ.ವಿ.ಶುಭಾ ರಾಘವೇಂದ್ರ, ಸಂಜೆ 6 ಗಂಟೆಗೆ ಸಾಮೂಹಿಕ ಪ್ರಾರ್ಥನೆ, ಸಂಜೆ 6.30ಕ್ಕೆ ಪ್ರವಚನ. ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು.
- **ಜಗದ್ಗುರು ಶ್ರೀ ಶಿವರಾತ್ರೀಶ್ವರ ಆಟೋ ಚಾಲಕರ ಸಂಘ:** ಸ್ವಾತಂತ್ರ್ಯ ದಿನಾಚರಣೆ. ಧ್ವಜಾರೋಹಣ: ಮಾಜಿ ಸೈನಿಕ ಶ್ರೀನಿವಾಸ್. ಉದ್ಘಾಟನೆ: ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಶಾಸಕ ಟಿ.ಎಸ್.ಶ್ರೀವತ್ಸ. ಸ್ಥಳ: ಸಂಘದ ಆವರಣ ಜೆಎಸ್‌ಎಸ್ ಆಸ್ಪತ್ರೆ ಹಳೇ ಗೇಟ್ ಮುಂಭಾಗ, ರಾಮಾನುಜ ರಸ್ತೆ, ಮಧ್ಯರಾತ್ರಿ 12 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35–ಮತ್ತು ಸಂಜೆ 6.10 "ವಾದ್ಯ ವೈಭವ"–ಸಂಗೀತ ವಾದ್ಯಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಚೈತ್ರಿಕಾ. ಎಸ್, 6.40–ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಕೆ.ಶ್ರೇಯಾ, ಎ.ಎನ್.ಶೀಲಾ, ವ್ಯಾಖ್ಯಾನ: ಡಾ.ಜಿ.ಆರ್.ತಿಪ್ಪೇಸ್ವಾಮಿ, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 8.30–ವಿಜ್ಞಾನ ಭಾರತಿ: ರಾಷ್ಟ್ರೀಯ ಬಾಹ್ಯಾಕಾಶ ದಿನದ ಸಂದರ್ಭದಲ್ಲಿ ನಕ್ಷತ್ರ ವೀಕ್ಷಣೆ ಒಂದು ವೈಜ್ಞಾನಿಕ ಹವ್ಯಾಸ–ಈ ಕುರಿತು ಭಾರತೀಯ ಖಗೋಳ ಭೌತವಿಜ್ಞಾನ ಸಂಸ್ಥೆಯಲ್ಲಿ ಸಹಯೋಜನಾಧಿಕಾರಿ ಅಮೋಘವರ್ಷ. ಎನ್ ಅವರೊಂದಿಗೆ ಸಂದರ್ಶನ. ಪ್ರಸ್ತುತಿ: ಜಿ.ಶಾಂತಕುಮಾರ್, 9.00–ವೃತ್ತಿ ಮಾರ್ಗದರ್ಶನ: 'ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ವಿಷಯದಲ್ಲಿ ಇರುವ ಅಧ್ಯಯನ, ಸಂಶೋಧನೆ ಮತ್ತು ವೃತ್ತಿಪರ ಅವಕಾಶಗಳು' ಕುರಿತು ಮೈಸೂರು ವಿಶ್ವವಿದ್ಯಾಲಯದ ಮಾನಸಗಂಗೋತ್ರಿಯ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಛೇರ್ ಪರ್ಸನ್ ಡಾ.ಸುತ್ತೂರು ಎಸ್. ಮಾಲಿನಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಪಂಡಿತ್. ಉಸ್ತಾದ್ ಅಹ್ಮದ್ ಹುಸೇನ್ ಶಹನಾಯ್, 10.30–"ಚುರುಮುರಿ ಸಂಭ್ರಮ"–ಚುರುಮುರಿ ಕಾರ್ಯಕ್ರಮ 10 ವರ್ಷಗಳನ್ನು ಪೂರೈಸಿದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ. ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕೆ.ಬಿ.ಮೀನಾ, **ಮಧ್ಯಾಹ್ನ:** 12.30–ದೇವರನಾಮ, ಕೌಸ್ತುಭ್. ಎಂ.ಎಸ್, 12.45–ಜನಪದ ಸಂಗೀತ, 1.20–ಭಾವಗೀತೆಗಳು, 2.40 ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಯು.ಶ್ರೀನಿವಾಸ್– ಮ್ಯಾಂಡೋಲಿನ್, 4.00–ಮಹಿಳಾರಂಗ –"ಹೀಗಿದೆ ನೋಡಿ ನಮ್ ಜೋಡಿ" ಭಾಗವಹಿಸುವವರು–ಒಡನಾಡಿಯ ಸ್ಟಾನ್ ಲೀ ಮತ್ತು ಸಮಾಜಕಾರ್ಯ ವಿಭಾಗದ ಪ್ರಾಧ್ಯಾಪಕರಾದ ಕುಮುದಿನಿ ಅಚ್ಚಿ ದಂಪತಿ, ಪ್ರಸ್ತುತಿ: ಅಬ್ದುಲ್ ರಶೀದ್, 4.45–ಹಿಂದಿ ಪಾಠ–ಡಾ.ಜಯಂತಿ ಪ್ರಸಾದ್ ನೌಟಿಯಾಲ್, 6.50–ಕೃಷಿರಂಗ, ದೇಶಭಕ್ತಿಗೀತೆಗಳು, 7.00–ಸ್ವಾತಂತ್ರ್ಯೋತ್ಸವದ ಮುನ್ನಾದಿನದಂದು ಭಾರತದ ಮಾನ್ಯ ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು ಅವರು ದೇಶವನ್ನುದ್ದೇಶಿಸಿ ಮಾಡುವ ಪ್ರಸಾರ ಭಾಷಣದ ನೇರ ಪ್ರಸಾರ. 7.45–ಕನ್ನಡದಲ್ಲಿ ಭಾಷಣ, 8.00 "ಕ್ಷಿತಿಜ ಲಿಟರರಿ ಗುರು" ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30–ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಬೇಗಂ ಪರ್ವೀನ್ ಸುಲ್ತಾನ್ ಮತ್ತು ಉಸ್ತಾದ್ ಮೊಹಮದ್ ದಿಲ್ ಷಾ ಖಾನ್–ಗಾಯನ, 10.00–ಜನಪದ ಸಂಗೀತ, 10.30–ಸವಿನೆನಪು.

ಮೈಸೂರು ಮಿತ್ರ

ಬುಧವಾರ 14 ಆಗಸ್ಟ್ 2024

ಬೈಕ್‌ಗೆ ಕಾರು ಡಿಕ್ಕಿ; ಸ್ಥಳದಲ್ಲೇ ಸವಾರ ಸಾವು

ಮೈಸೂರು, ಆ.13(ಎಸ್‌ಬಿಡಿ)– ಕಾರು ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಮೈಸೂರು ಬೋಗಾದಿ ರಿಂಗ್ ರೋಡ್ ಬಳಿ ಮಂಗಳವಾರ ರಾತ್ರಿ ನಡೆದಿದೆ.

ಹೆಚ್.ಡಿ.ಕೋಟೆ ತಾಲೂಕಿನ ಹತ್ವಾಳು ಗ್ರಾಮದ ನಿವಾಸಿ ಶಂಕರ್(35) ಸಾವನ್ನಪ್ಪಿದವರು. ಈತ ಬೋಗಾದಿಯಿಂದ ಇಲವಾಲ ಕಡೆಗೆ ತನ್ನ ಬೈಕ್(ಕೆಎ-09,ಹೆಚ್.ಆರ್.3756)ನಲ್ಲಿ ಹೋಗುತ್ತಿದ್ದ ವೇಳೆ ವೇಗವಾಗಿ ಬಂದ ಕಾರು(ಕೆಎ-13, ಪಿ.6082) ಡಿಕ್ಕಿ ಹೊಡೆದಿದೆ. ಪರಿಣಾಮ ತೀವ್ರವಾಗಿ ಗಾಯಗೊಂಡ ಶಂಕರ್, ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಘಟನೆ ಬಳಿಕ ಚಾಲಕ ಕಾರು ಸಮೇತ ಪರಾರಿಯಾಗಿದ್ದು, ಸ್ಥಳದಲ್ಲಿ ಕಾರಿನ ನಂಬರ್ ಪ್ಲೇಟ್ ದೊರೆತಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕುವೆಂಪು ನಗರ ಸಂಚಾರಿ ಠಾಣೆ ಪೊಲೀಸರು ಪರಿಶೀಲನೆ ನಡೆಸಿ ಮೃತದೇಹವನ್ನು ಕೆ.ಆರ್.ಆಸ್ಪತ್ರೆ ಶವಾಗಾರಕ್ಕೆ ರವಾನಿಸಿದರು. ಬಳಿಕ ಕಾರಿನ ನಂಬರ್ ಪ್ಲೇಟ್ ಆಧಾರದ ಮೇಲೆ ಕಾರನ್ನು ಪತ್ತೆಹಚ್ಚುವ ಕೆಲಸ ಆರಂಭವಾಗಿದೆ. ಕುವೆಂಪುನಗರ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಮೂವರು ಛಾಯಾಗ್ರಾಹಕರು ಎಎಫ್‌ಐಪಿ ಡಿಸ್ಟಿಂಕ್ಷನ್‌ಗೆ ಭಾಜನ



ಡಿಸ್ಟಿಂಕ್ಷನ್‌ಗೆ ಭಾಜನರಾದ ಕೆ.ಜಿ.ಸಿದ್ದಲಿಂಗ ಪ್ರಸಾದ್, ಬಿ.ಶಿವಕುಮಾರ್ (ಸ್ನೇಕ್ ಶಿವು) ಮತ್ತು ಪಿ.ಎ.ಇಗ್ನೇಶಿಯಸ್ ಸುನಿಲ್

ಮೈಸೂರು,ಆ.13(ಪಿಎಂ)– ಭಾರತದ ಪ್ರತಿಷ್ಠಿತ ಫೋಟೋಗ್ರಫಿ ಸಂಸ್ಥೆಯಾದ ಫೆಡರೇಷನ್ ಆಫ್ ಇಂಡಿಯನ್ ಫೋಟೋಗ್ರಫಿ (ಎಫ್‌ಐಪಿ) ವತಿಯಿಂದ ವಾರ್ಷಿಕವಾಗಿ ಕೊಡಮಾಡುವ ಎಎಫ್‌ಐಪಿ ಡಿಸ್ಟಿಂಕ್ಷನ್ ಸ್ಥಾನಮಾನಕ್ಕೆ ಮೈಸೂರಿನ ಮೂವರು ವನ್ಯಜೀವಿ ಛಾಯಾಗ್ರಾಹಕರು ಭಾಜನರಾಗಿದ್ದಾರೆ.

ಬಿ.ಶಿವಕುಮಾರ್ (ಸ್ನೇಕ್ ಶಿವು), ಕೆ.ಜಿ.ಸಿದ್ದಲಿಂಗ ಪ್ರಸಾದ್ ಮತ್ತು ಪಿ.ಎ.ಇಗ್ನೇಶಿಯಸ್ ಸುನಿಲ್ 2024ನೇ ಸಾಲಿನ ಎಎಫ್‌ಐಪಿ ಸ್ಥಾನಮಾನಕ್ಕೆ ಭಾಜನರಾದವರು. ಇದಕ್ಕೆ ಅರ್ಹರಾಗಲು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಛಾಯಾಚಿತ್ರ ಸ್ಪರ್ಧೆಯಲ್ಲಿ ಪದಕಗಳನ್ನು ಪಡೆದಿರಬೇಕು ಹಾಗೂ ಫೆಡರೇಷನ್ ಆಫ್ ಇಂಡಿಯನ್ ಫೋಟೋಗ್ರಫಿ ಸಂಸ್ಥೆಯ ಸದಸ್ಯತ್ವ ಹೊಂದಿರಬೇಕು. ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಛಾಯಾಚಿತ್ರ ಸ್ಪರ್ಧೆಗಳಲ್ಲಿ ಪಡೆದಿರುವ ಬಹುಮಾನಗಳ ಆಧಾರದಲ್ಲಿಯೂ ಈ ಸ್ಥಾನಮಾನ ನೀಡಲಾಗುತ್ತದೆ ಎಂದು ಬಿ.ಶಿವಕುಮಾರ್ (ಸ್ನೇಕ್ ಶಿವು) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ: ತಡೆಯಾಜ್ಞೆ ತೆರವು ಮಾಡಲು ಪ್ರಯತ್ನಿಸುತ್ತೇವೆ

ಬೆಂಗಳೂರು, ಆ.13– ಮೈಸೂರಿನ ಚಾಮುಂಡೇಶ್ವರಿ ಬೆಟ್ಟ, ದೇವಸ್ಥಾನದ ಅಭಿವೃದ್ಧಿ ಹಾಗೂ ನಿರ್ವಹಣೆಯಲ್ಲಿ ರಾಜಮನೆತನದವರ ಅಧಿಕಾರ ಮೊಟಕುಗೊಳಿಸುವ 'ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಕಾಯಿದೆ–2024' ಜಾರಿಗೊಳಿಸದಂತೆ ಹೈಕೋರ್ಟ್ ನೀಡಿರುವ ಮಧ್ಯಂತರ ಆದೇಶ ತೆರವು ಮಾಡಲು ರಾಜ್ಯ ಸರ್ಕಾರ ಪ್ರಯತ್ನಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.



ರಾಜ್ಯ ಸರ್ಕಾರ ಜಾರಿ ಮಾಡಿರುವ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮ–2024ರ ಹಲವು ಸೆಕ್ಷನ್‌ಗಳನ್ನು ಪ್ರಶ್ನಿಸಿ ಮೈಸೂರು ಒಡೆಯರ್ ವಂಶಸ್ಥೆ ಪ್ರಮೋದಾದೇವಿ ಒಡೆಯರ್ ಸಲ್ಲಿಸಿರುವ ತಕರಾರು ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, ಕಾಯ್ದೆಯನ್ನು ಆ.22ರವರೆಗೆ ಜಾರಿಗೊಳಿಸದಂತೆ ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆ ಮುಂದೂಡಿದೆ.

ಫೆಬ್ರವರಿಯಲ್ಲಿ ಅಂಗೀಕರಿಸಲ್ಪಟ್ಟ ಈ ಕಾಯ್ದೆಯು 'ಶ್ರೀ ಚಾಮುಂಡೇಶ್ವರಿ ಕ್ಷೇತ್ರದ' ಅಭಿವೃದ್ಧಿ ಮತ್ತು ನಿರ್ವಹಣೆ ಕಾರ್ಯವನ್ನು ಕೈಗೊಳ್ಳಲು ಸ್ವತಂತ್ರ ಶಾಸನಬದ್ಧ ಪ್ರಾಧಿಕಾರ ರಚಿಸುವ ಗುರಿಯನ್ನು ಹೊಂದಿದೆ. ಇನ್ನು ಕಾನೂನಾತ್ಮಕವಾಗಿ ಹೈಕೋರ್ಟ್ ತಡೆ ತೆರವು ಮಾಡಲು ಪ್ರಯತ್ನಿಸುತ್ತೇವೆ ಎಂದು ಕೊಪ್ಪಳದಲ್ಲಿ ಸುದ್ದಿಗಾರರಿಗೆ ಸಿದ್ದರಾಮಯ್ಯ ತಿಳಿಸಿದರು.

ನಾಳೆ ಕೆಆರ್ ಸಹಕಾರ ಬ್ಯಾಂಕ್‌ನಲ್ಲಿ ಪ್ರತಿಭಾ ಪುರಸ್ಕಾರ

ಮೈಸೂರು,ಆ.13(ಪಿಎಂ)–ಮೈಸೂರಿನ ಶ್ರೀ ಕೃಷ್ಣರಾಜೇಂದ್ರ ಸಹಕಾರ ಬ್ಯಾಂಕ್ ವತಿಯಿಂದ ಆ.15ರಂದು ಬೆಳಗ್ಗೆ 10.30ಕ್ಕೆ ಬ್ಯಾಂಕಿನ ಆವರಣದಲ್ಲಿ 2023–24ನೇ ಸಾಲಿನ ಬ್ಯಾಂಕಿನ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ಆಯೋಜಿಸಲಾಗಿದೆ. ತಿ.ನರಸೀಪುರ ತಾಲೂಕು ಎಂಎಲ್ ಹುಂಡಿಯ ಶ್ರೀ ವಿರಕ್ತ ಮಠದ ಶ್ರೀ ಗೌರಿಶಂಕರಸ್ವಾಮೀಜಿ ಸಮಾರಂಭದ ಸಾನ್ನಿಧ್ಯ ವಹಿಸಲಿದ್ದು, ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಿದ್ದಾರೆ. ದ್ವಿತೀಯ ಪಿಯುಸಿಯ ಕೆ.ನವ್ಯ ಲಾಡ್, ಎಸ್.ಎನ್.ಉಜ್ವಲ್, ಡಿ.ಪ್ರೇಕ್ಷಾ, ಎನ್.ವಿ.ಚಿರಂತ್, ಎಂ.ಜಿ.ರವಿಕುಮಾರ್, ಆರ್.ಚೈತ್ರಾ, ಎಂ.ಆರ್.ಮೋನಿಕಾ, ಎಂ.ಯಶಸ್ವಿನಿ, ಅಕ್ಷಯ್ ಎಲ್.ಭಾರದ್ವಾಜ್, ಕೆ.ಎಂ.ಹೇಮಂತ್, ವರುಣ್ ಬಿ.ರಾಜ್, ಎನ್.ನಮಿತ, ಎಸ್‌ಎಸ್‌ಎಲ್‌ಸಿಯ ಆರ್.ಭೂಮಿಕಾ, ಎ.ಸೃಜನಾ, ಎಂ.ರೂಪಶ್ರೀ, ಜೆ.ಪ್ರಜ್ಞಾ, ಎಂ.ನಿಮಿತ್, ದಿಯಾ ಪ್ರಕಾಶ್, ಕೆ.ನೀಲ್ ಗಗನ್, ಎಸ್.ಲಾವಣ್ಯ ಅವರು ಪ್ರತಿಭಾ ಪುರಸ್ಕಾರ ಸ್ವೀಕರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

'ಪೇ ಬ್ಯಾಕ್ ಟು ಸೊಸೈಟಿ' ತತ್ವದ ಮೇಲೆಯೇ ವಿದ್ಯಾರ್ಥಿಗಳನ್ನು ರೂಪಿಸಬೇಕು

ನಿವೃತ್ತ ಕಾನೂನು ಪ್ರಾಧ್ಯಾಪಕ ಪ್ರೊ.ಎಂ.ಕೆ.ರಮೇಶ್



ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನ ಕಾರ್ಯಕ್ರಮದಲ್ಲಿ ಎನ್‌ಎಲ್‌ಎಸ್‌ಐಯು ನಿವೃತ್ತ ಕಾನೂನು ಪ್ರಾಧ್ಯಾಪಕ ಪ್ರೊ.ಎಂ.ಕೆ.ರಮೇಶ್ ಮಾತನಾಡಿದರು.

ಮೈಸೂರು,ಆ.13(ಪಿಎಂ)– ಯಾವುದೇ ಶಿಕ್ಷಣವಾಗಲಿ 'ಪೇ ಬ್ಯಾಕ್ ಟು ಸೊಸೈಟಿ' ತತ್ವದ ಮೇಲೆಯೇ ವಿದ್ಯಾರ್ಥಿಗಳನ್ನು ರೂಪಿಸಬೇಕು. ಕಾನೂನು ಶಿಕ್ಷಣವಂತೂ ಕೇವಲ ಹಣ ಮಾಡಲು, ಅಧಿಕಾರಶಾಹಿ ಗದ್ದುಗೆ ಏರಲು ಬುನಾದಿಯಾಗಬಾರದು ಎಂದು ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿಯ ನಿವೃತ್ತ ಕಾನೂನು ಪ್ರಾಧ್ಯಾಪಕ ಪ್ರೊ.ಎಂ.ಕೆ.ರಮೇಶ್ ಹೇಳಿದರು.

ಮೈಸೂರಿನ ವಿದ್ಯಾವರ್ಧಕ ಕಾನೂನು ಕಾಲೇಜಿನ ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾಲೇಜಿನ ಪಠ್ಯ ಮತ್ತು ಪಠ್ಯೇತರ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಈ ದೇಶದ ಜನಕ್ಕೆ ನ್ಯಾಯ ದೊರಕಿಸಿಕೊಡುವುದೇ ಕಾನೂನಿನ ಮುಖ್ಯ ಕೆಲಸ. ಸಾಮಾಜಿಕ ಅಸಮಾನತೆ ತೊಡೆದು ಹಾಕಲು ಹಾಗೂ ಅಸಹಾಯಕರಿಗೆ ನೆರವಾಗುವಂತಹ ಶಿಕ್ಷಣವನ್ನು ಕಾನೂನು ಕಾಲೇಜುಗಳು ವಿದ್ಯಾರ್ಥಿಗಳಿಗೆ ನೀಡಬೇಕು.

ಇಂದು ದೇಶದಲ್ಲಿ ಸುಮಾರು 40 ನ್ಯಾಷನಲ್ ಲಾ ಸ್ಕೂಲ್‌ಗಳು ಸ್ಥಾಪನೆಯಾಗಿದ್ದು, ಪ್ರತಿಯೊಬ್ಬರನ್ನು ಒಳಗೊಳ್ಳುವತ್ತ ಹೆಜ್ಜೆ ಹಾಕುತ್ತಿವೆ. ಇದರ ನಡುವೆಯೂ 'ರೂಲ್ ಆಫ್ ಲಾ' ಕಡಿಮೆಯಾಗಿ 'ರೂಲ್ಡ್ ಬೈ ಲಾ' ಹೆಚ್ಚಾಗುತ್ತಿರುವುದು ಆತಂಕದ ವಿಚಾರವಾಗಿದೆ. ಕಾನೂನು ಶಿಕ್ಷಣ ಬೇರೆ, ಕಾನೂನು ಅರಿವು ಬೇರೆ ಎನ್ನುವುದನ್ನು ಇನ್ನಾದರೂ ಮನಗಾಣಬೇಕಿದೆ. ಕಾನೂನು ಶಿಕ್ಷಣ ಪಡೆದವರೆಲ್ಲಾ ಕಾನೂನಿನ ಅರಿವು, ವಿವೇಚನೆ ಪಡೆದಿರುತ್ತಾರೆ ಎನ್ನುವುದು ತಪ್ಪು ಎಂದು ಹೇಳಿದರು.

ಕೇಂದ್ರ-ರಾಜ್ಯ ಸರ್ಕಾರಗಳಿಗೆ ಕೇವಲ ಹತ್ತಾರು ಕಾನೂನು ಸಲಹೆ ನೀಡಿದ ಮಾತ್ರಕ್ಕೆ 20ರಿಂದ 25 ಲಕ್ಷ ರೂ.ನಷ್ಟು ಶುಲ್ಕ ಪಡೆಯುವ ಕಾನೂನು ಪಂಡಿತರು ನಮ್ಮಲ್ಲಿದ್ದಾರೆ. ಅರಣ್ಯಕ್ಕೆ ಸಂಬಂಧಿಸಿದ ವಿಚಾರಗಳು ಹಾಗೂ ಅರಣ್ಯ ಒತ್ತುವರಿ ಸಂಬಂಧಿಸಿದಂತೆ ಕಾನೂನು ಸಲಹೆ ನೀಡುವವರು ತಾವು ನೀಡುವ ಆ ಸಲಹೆಯಿಂದ ಅರಣ್ಯಕ್ಕೂ, ಅರಣ್ಯ ನಂಬಿ ಬದುಕುವ ಜನತೆಗೂ ನೆರವಾಗುವಂತಹ ಸಲಹೆ ನೀಡುವುದೇ ನಿಜವಾದ ಕಾನೂನು ಸಲಹೆಯಾಗಿದೆ. ಅದರ ಹೊರತಾಗಿ ನೈತಿಕತೆ, ಮಾನವೀಯತೆ ಮೀರಿ ಕೊಡುವ ಯಾವುದೇ ಕಾನೂನು ಸಲಹೆ ಮಾನವಕುಲಕ್ಕೆ ಎಂದೆಂದಿಗೂ ಮಾರಕವೇ ಎಂದು ಎಚ್ಚರಿಸಿದರು.

ಕಾನೂನು ಶಿಕ್ಷಣವನ್ನು ಗಂಭೀರವಾಗಿ ತೆಗೆದುಕೊಂಡಂತೆ, ಭವಿಷ್ಯದಲ್ಲಿ ಕಾನೂನು ವೃತ್ತಿಯನ್ನೂ ಗಂಭೀರವಾಗಿ ಪರಿಗಣಿಸಬೇಕು. ವೃತ್ತಿಬದುಕಿನ ಆರಂಭದಲ್ಲಿ ಅಪಾರ ಸಂಯಮ, ತಾಳ್ಮೆಯನ್ನು ಹೊಂದಿರಬೇಕು. ಕಾನೂನು ವಿದ್ಯಾರ್ಥಿಗಳು ಅಪಾರ ಪ್ರಯತ್ನ, ನಿರೀಕ್ಷೆ, ಪರಿಶ್ರಮ, ಶ್ರದ್ಧೆಯ ಗುಣಗಳನ್ನು ಅಳವಡಿಸಿಕೊಂಡರೆ ಮಾತ್ರ ವೃತ್ತಿಬದುಕಿನಲ್ಲಿ ಯಶಸ್ಸು ಗಳಿಸಲು ಸಾಧ್ಯ. ಇಲ್ಲಿ ಕಾಲುದಾರಿಗಿಂತಲೂ ಹೆದ್ದಾರಿ ಮೇಲೆ ನಡೆಯುವುದು ಹೆಚ್ಚು ಒಳ್ಳೆಯದು ಎಂದು ಕಾನೂನು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ವಿದ್ಯಾವರ್ಧಕ ಕಾನೂನು ಕಾಲೇಜಿನ 1974ರ ಮೊದಲ ಬ್ಯಾಚಿನ ವಿದ್ಯಾರ್ಥಿಯಾಗಿ ಸೇರ್ಪಡೆಯಾದಾಗ ನನ್ನ ವಯಸ್ಸು ಕೇವಲ ಹದಿನೇಳು. ಈಗ ಈ ಕಾಲೇಜಿಗೆ 50 ವರ್ಷ ತುಂಬಿರುವುದು ಹೆಮ್ಮೆಯ ಸಂಗತಿ ಎಂದು ಹರ್ಷ ವ್ಯಕ್ತಪಡಿಸಿದರು. ವಿದ್ಯಾವರ್ಧಕ ಸಂಘದ ಅಧ್ಯಕ್ಷ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್, ಆಡಳಿತ ಮಂಡಳಿ ಸದಸ್ಯ ಎಸ್.ಶಿವಲಿಂಗಯ್ಯ, ವಿದ್ಯಾವರ್ಧಕ ಕಾನೂನು ಕಾಲೇಜಿನ ಪ್ರಾಂಶುಪಾಲ ಡಾ.ಪಿ.ದೀಪು, ಪ್ರಾಧ್ಯಾಪಕ ಡಾ.ಕೆ.ಎಲ್.ಚಂದ್ರಶೇಖರ್ ಮತ್ತಿತರರು ಹಾಜರಿದ್ದರು.

ಬಿಯರ್ ಬಾಟಲಿಯಿಂದ ಹೊಡೆದು ವ್ಯಕ್ತಿಯ ಹತ್ಯೆ

ದೇವಯ್ಯನಹುಂಡಿ ಬಳಿಯ ದೊಡ್ಡ ಮೋರಿಯಲ್ಲಿ ಶವ ಪತ್ತೆ

ಮೈಸೂರು, ಆ.13(ಎಸ್‌ಬಿಡಿ)– ಮೋರಿಯಲ್ಲಿ ಬಿಯರ್ ಬಾಟಲ್‌ನಿಂದ ಹೊಡೆದು ವ್ಯಕ್ತಿಯೊಬ್ಬನನ್ನು ಹತ್ಯೆ ಮಾಡಿರುವ ಘಟನೆ ಮೈಸೂರಿನ ದೇವಯ್ಯನಹುಂಡಿ ಬಳಿ ಭಾನುವಾರ ತಡರಾತ್ರಿ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ದೇವಯ್ಯನಹುಂಡಿ ಗ್ರಾಮದ ನಿವಾಸಿ, ಗಾರೆ ಕೆಲಸಗಾರ ಮಂಜು(35) ಹತ್ಯೆಯಾದವರು. ಮೋರಿ ಸೇತುವೆ ಮೇಲೆ ಕುಳಿತಿದ್ದ ಶ್ರೀರಾಂಪುರದ ಇಬ್ಬರು ಯುವಕರನ್ನು ಇಬ್ಬರು ಅಪರಿಚಿತರು ಬೆದರಿಸಿ, ಅವರಿಂದ ಕಿತ್ತುಕೊಂಡ ಬಿಯರ್ ಬಾಟಲ್‌ನಿಂದಲೇ ಮಂಜುನನ್ನು ಹತ್ಯೆ ಮಾಡಿ, ಪರಾರಿಯಾಗಿದ್ದಾರೆ.

ಭಾನುವಾರ ರಾತ್ರಿ 11 ಗಂಟೆಯಲ್ಲಿ ಶ್ರೀರಾಂಪುರದ ಮನೋಜ್ ತನ್ನ ಸೋದರ ಮಾವನಿಗೆ ಬಿಯರ್ ತರಲೆಂದು ಸ್ನೇಹಿತ ಮಹೇಂದ್ರನೊಂದಿಗೆ ಬೈಕ್‌ನಲ್ಲಿ ಮಾನಂದವಾಡಿ ರಸ್ತೆಯಲ್ಲಿರುವ ಬಾರ್‌ವೊಂದಕ್ಕೆ ಬಂದಿದ್ದ ಅಲ್ಲಿಂದ ನಂಜುಮಳಿಗೆ ವೃತ್ತಕ್ಕೆ ಬಂದು ನಾನ್‌ವೆಜ್ ಊಟ ಪಾರ್ಸಲ್ ಮಾಡಿಸಿಕೊಂಡು ಶ್ರೀರಾಂಪುರಕ್ಕೆ ವಾಪಸ್ಸಾಗುತ್ತಿದ್ದರು. ದೇವಯ್ಯನಹುಂಡಿ ಮುಖ್ಯರಸ್ತೆಯಿಂದ ದೊಡ್ಡಮೋರಿ ರಸ್ತೆಯಲ್ಲಿ ಹೋಗುವಾಗ ಬಿಸಿಎಂ ಹಾಸ್ಟೆಲ್ ಮುಂಭಾಗ ಇರುವ ಸೇತುವೆ ಬಳಿ ಯಾರೋ ಕೂಗಿದ್ದು ಕೇಳಿಸಿದೆ. ಅದನ್ನು ನಿರ್ಲಕ್ಷಿಸಿದ ಮನೋಜ್ ಹಾಗೂ ಮಹೇಂದ್ರ ಪಾರ್ಸಲ್ ತಂದಿದ್ದ ಊಟ ಸೇವಿಸಲು ಸೇತುವೆ ಮೇಲೆ ಕುಳಿತುಕೊಂಡಿದ್ದಾರೆ.

ಅಷ್ಟರಲ್ಲಿ ಪ್ಯಾಸೆಂಜರ್ ಆಟೋದಲ್ಲಿ ಬಂದ ವ್ಯಕ್ತಿಯೊಬ್ಬ ಮೋರಿಯಲ್ಲಿ ಬಗ್ಗಿ ನೋಡಿ ನಂತರ ಕಟ್ಟೆಯ ಮೇಲೆ ಕುಳಿತಿದ್ದ ಮನೋಜ್ ಹಾಗೂ ಮಹೇಂದ್ರನ ಬಳಿ ಬಂದು ಚಾಕು ತೋರಿಸಿ ಅವರನ್ನು ಬೆದರಿಸಿದ್ದಾನೆ. ಅದೇ ವೇಳೆ ಮೋರಿಯೊಳಗಿಂದ ಮೇಲೆ ಬಂದ ಮತ್ತೋರ್ವ ಮನೋಜ್ ಬಳಿ ಇದ್ದ ಬಿಯರ್ ಬಾಟಲ್ ಅನ್ನು ಕಿತ್ತುಕೊಂಡಿದ್ದಾನೆ. ನಂತರ ಆ ಇಬ್ಬರು ಅಪರಿಚಿತರೂ ಮೋರಿಗೆ ಇಳಿದಿದ್ದಾರೆ. ಆಗಲೇ ಕೂಗಾಟ ಕೇಳಿಸಿದ್ದರಿಂದ ಮನೋಜ್ ಹಾಗೂ ಮಹೇಂದ್ರ ಮೋರಿಯೊಳಗೆ ನೋಡಿದಾಗ ಅಪರಿಚಿತರಿಬ್ಬರು ಬಿಯರ್ ಬಾಟಲ್‌ನಿಂದ ವ್ಯಕ್ತಿಯೊಬ್ಬನ ತಲೆಗೆ ಮೂರ್‍ನಾಲ್ಕು ಬಾರಿ ಹೊಡೆದಿದ್ದಾರೆ. ಬಳಿಕ ಆಟೋದಲ್ಲಿ ಪರಾರಿಯಾಗಿದ್ದಾರೆ.

ಘಟನೆಯಿಂದ ಹೆದರಿದ ಮನೋಜ್ ಹಾಗೂ ಮಹೇಂದ್ರ ಮನೆಗೆ ಹೋಗಿ 112ಗೆ ಕರೆ ಮಾಡಿ, ಪೊಲೀಸರಿಗೆ ವಿಷಯ ತಿಳಿಸಿದ್ದಾರೆ. ಕೂಡಲೇ ಸ್ಥಳಕ್ಕೆ ಧಾವಿಸಿದ ಪೊಲೀಸರು, ಮನೋಜ್ ಹಾಗೂ ಮಹೇಂದ್ರನನ್ನೂ ಸ್ಥಳಕ್ಕೆ ಕರೆಸಿಕೊಂಡು ಮಾಹಿತಿ ಪಡೆದಿದ್ದಾರೆ. ಈ ಸಂಬಂಧ ಮನೋಜ್ ನೀಡಿದ ದೂರಿನನ್ವಯ ಅಶೋಕಪುರಂ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಕೊಲೆಗಾರರ ಪತ್ತೆಗೆ ಶೋಧ ನಡೆಸಿದ್ದಾರೆ.

ವಿನೇಶ್ ಫೋಗಟ್ 'ಬೆಳ್ಳಿ' ತೀರ್ಪು ಆ.16ಕ್ಕೆ ಮುಂದೂಡಿದ ಸಿಎಎಸ್

ನವದೆಹಲಿ, ಆ.13– ಪ್ಯಾರಿಸ್ ಒಲಿಂಪಿಕ್ಸ್‌ನ 50 ಕೆಜಿ ಮಹಿಳಾ ಕುಸ್ತಿ ವಿಭಾಗದಲ್ಲಿ ತಮಗೆ ಬೆಳ್ಳಿ ಪದಕ ಸಿಗಬೇಕು ಎಂದು ಆಗ್ರಹಿಸಿ ವಿನೇಶ್ ಫೋಗಟ್ ಸಲ್ಲಿಕೆ ಮಾಡಿರುವ ಅರ್ಜಿಯ ತೀರ್ಪನ್ನು ಜಾಗತಿಕ ಕ್ರೀಡಾ ನ್ಯಾಯಮಂಡಳಿ ಆ.16ಕ್ಕೆ ಮುಂದೂಡಿದೆ. ಈ ಕೇಸ್‌ನಲ್ಲಿ ವಿಚಾರಣೆ ಮುಗಿದ ಬಳಿಕ ತೀರ್ಪನ್ನು ಮೂರನೇ ಬಾರಿಗೆ ಮುಂದೂಡಿಕೆ ಮಾಡಿದಂತಾಗಿದೆ. ಫೋಗಟ್ ಮೂಲತಃ ಪ್ಯಾರಿಸ್ ಒಲಿಂಪಿಕ್ಸ್‌ನಿಂದ ತನ್ನ ಅನರ್ಹತೆಯ ಕುರಿತಾಗಿ ಪ್ರಶ್ನೆ ಮಾಡಿದ್ದರು. ಮಹಿಳೆಯರ 50 ಕೆಜಿ ವಿಭಾಗದಲ್ಲಿ ಜಂಟಿ ಬೆಳ್ಳಿ ಪದಕವನ್ನು ನೀಡಬೇಕೆಂದು ಮನವಿ ಮಾಡಿದ್ದರು.



ವಿನೇಶ್, ತನ್ನ ಮೇಲ್ಮನವಿಯಲ್ಲಿ, ಐಒಸಿಯ ಅನರ್ಹತೆಯನ್ನು ರದ್ದುಗೊಳಿಸುವಂತೆ ಮತ್ತು ಫೈನಲ್‌ನಲ್ಲಿ ಸ್ಪರ್ಧಿಸಲು ಅವಕಾಶ ನೀಡುವಂತೆ ಸಿಎಎಸ್‌ನ ತಾತ್ಕಾಲಿಕ ಪೀಠಕ್ಕೆ ಆರಂಭದಲ್ಲಿ ವಿನಂತಿಸಿದ್ದರು. ಆದರೆ, ಅವರು ತುರ್ತು ಮಧ್ಯಂತರ ಕ್ರಮಗಳನ್ನು ಕೋರಿರಲಿಲ್ಲ.. ಸಿಎಎಸ್‌ನ ತಾತ್ಕಾಲಿಕ ಪೀಠವು ತನ್ನ ತೀರ್ಪನ್ನು ತ್ವರಿತವಾಗಿ ನೀಡುತ್ತದೆ. ಆದರೆ, ಕಳೆದ ಗುರುವಾರ ಸಂಜೆ ನಿಗದಿಯಾಗಿದ್ದ ಅಂತಿಮ ಪಂದ್ಯದ ಎರಡೂ ಪಕ್ಷಗಳ ವಾದವನ್ನು ಆಲಿಸಲು ಸಾಧ್ಯವಾಗಲಿಲ್ಲ.

ಬಳಿಕ ವಿನೇಶ್ ತನ್ನ ಮನವಿಯಲ್ಲಿ ಅನರ್ಹತೆಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ಜಂಟಿ ಬೆಳ್ಳಿ ಪದಕವನ್ನು ನೀಡಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದರು. ಆದರೆ, ಯುನೈಟೆಡ್ ವರ್ಲ್ಡ್ ವ್ರೆಸ್ಲಿಂಗ್ ಮುಖ್ಯಸ್ಥ ನೆನಾದ್ ಲಾಲೋವಿಕ್, ಖಾಸಗಿ ಟಿವಿಗೆ ನೀಡಿದ ಸಂದರ್ಶನದಲ್ಲಿ, ತಾನು ವಿನೇಶ್‌ನೊಂದಿಗೆ ಸಹಾನುಭೂತಿ ಹೊಂದಿದ್ದೇನೆ ಎಂದು ಹೇಳಿದರು, ಆದರೆ ಭಾರತೀಯ ಕುಸ್ತಿಪಟುವನ್ನು ಅನರ್ಹಗೊಳಿಸಿದ ವಿಚಾರದಲ್ಲಿ ನಿಯಮ ಪಾಲಿಸಿದ್ದೇವೆ. ಎಲ್ಲರೂ ನಿಯಮಕ್ಕೆ ಬದ್ಧರಾಗಿರಬೇಕು ಎಂದು ಹೇಳಿದ್ದರು. ತೀರ್ಪು ವಿಳಂಬವಾಗಿದ್ದರೂ ಐಒಎ ಮುಖ್ಯಸ್ಥೆ ಪಿಟಿ ಉಷಾ ಅವರು ಮುಖ್ಯ ವೈದ್ಯಾಧಿಕಾರಿ ಡಾ. ದಿನ್ಶಾ ಪರ್ದಿವಾಲಾ ಅವರನ್ನು ಸಮರ್ಥಿಸಿಕೊಂಡಿದ್ದಾರೆ. ವಿನೇಶ್ ಫೋಗಟ್ ಅವರ ವಿಚಾರದಲ್ಲಿ ದಿನ್ಶಾ ಪರ್ದಿವಾಲಾ ಕುರಿತಾಗಿ ಸೋಶಿಯಲ್ ಮೀಡಿಯಾದಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದರು.

ಚನ್ನಪಟ್ಟಣ ಉಪಚುನಾವಣೆ: ಮೈತ್ರಿ ಅಭ್ಯರ್ಥಿ ದೆಹಲಿ ಮಟ್ಟದಲ್ಲಿ ನಿರ್ಧಾರ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ

ಬೆಂಗಳೂರು, ಆ.13(ಕೆಎಂಶಿ)– ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಬಿಜೆಪಿ–ಜೆಡಿಎಸ್ ಮೈತ್ರಿ ಅಭ್ಯರ್ಥಿ ಕುರಿತು ಎರಡೂ ಪಕ್ಷಗಳ ವರಿಷ್ಠರು ದೆಹಲಿ ಮಟ್ಟದಲ್ಲಿ ಚರ್ಚಿಸಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ಉಪಚುನಾವಣೆಯ ಸ್ಪರ್ಧಾಕಾಂಕ್ಷಿ ಎಂಬುದಾಗಿ ಸಿ.ಪಿ.ಯೋಗೇಶ್ವರ್ ಹೇಳಿಕೊಂಡಿರುವುದರಲ್ಲಿ ತಪ್ಪೇನಿಲ್ಲ, ಕ್ಷೇತ್ರದಲ್ಲಿ ಅವರದೇ ಆದ ಹಿಡಿತ, ಬೆಂಬಲ ಇರುತ್ತದೆ, ಕ್ಷೇತ್ರದ ಪ್ರತಿನಿಧಿಯಾಗಿ ಎಚ್.ಡಿ.ಕುಮಾರಸ್ವಾಮಿ ಆಯ್ಕೆಯಾಗಿದ್ದರು, ಆದರೆ, ಬಿಜೆಪಿ–ಜೆಡಿಎಸ್ ಒಟ್ಟಾಗಿ ಹೋಗುವ ಸಂದರ್ಭ ಇದಾಗಿದೆ ಎಂದರು.

ಲೋಕಸಭಾ ಚುನಾವಣೆಯನ್ನು ಬಿಜೆಪಿ–ಜೆಡಿಎಸ್ ಒಟ್ಟಾಗಿ ಎದುರಿಸಿದ್ದೇವೆ, ವಿಧಾನಸಭಾ ಉಪಚುನಾವಣೆ ಅಭ್ಯರ್ಥಿ ಆಯ್ಕೆ ಸಂಬಂಧ ಸಮಿತಿ ರಚಿಸಿ ಅಭಿಪ್ರಾಯ ಪಡೆಯಲಾಗಿದೆ, ಡಾ.ಅಶ್ವತ್ಥ ನಾರಾಯಣ ಸಮಿತಿ ವರದಿ ಬಗ್ಗೆ ಮಾಹಿತಿ ಇಲ್ಲ, ಅವರೊಂದಿಗೆ ಚರ್ಚಿಸಿದ ನಂತರ ವಿಷಯವನ್ನು ದೆಹಲಿ ವರಿಷ್ಠರ ಗಮನಕ್ಕೆ ತರುತ್ತೇನೆ, ಪಕ್ಷದ ರಾಜ್ಯಾಧ್ಯಕ್ಷನಾಗಿ ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ನನ್ನ ಆದ್ಯ ಕರ್ತವ್ಯ ಎಂದರು.

ಪಕ್ಷಕ್ಕೆ ಶಕ್ತಿ ತರುವುದಾದರೆ ಬಳ್ಳಾರಿ ಪಾದಯಾತ್ರೆಗೆ ವರಿಷ್ಠರು ಸಮ್ಮತಿ ಕೊಡುತ್ತಾರೆ, ಈ ವಿಚಾರದಲ್ಲಿ ಯಾವುದೇ ತಕರಾರಿಲ್ಲ.

ಉತ್ತಮ ಮುಂಗಾರಿನಿಂದ ರಾಜ್ಯದ ಬಹುತೇಕ ಅಣೆಕಟ್ಟೆಗಳು ಭರ್ತಿಯಾಗಿ ರೈತರು ಸಂತಸ ಹೊಂದಿದ್ದರು, ತುಂಗಭದ್ರಾ ಅಣೆಕಟ್ಟೆಗೆ ಮುಖ್ಯ ಎಂಜಿನಿಯರ್ ನೇಮಕ ಆಗಿಲ್ಲ, ಜಲಾಶಯದ ಕ್ರೆಸ್ಟ್‌ಗೇಟ್ ಮುರಿದ ಘಟನೆಗೆ ರಾಜ್ಯ ಸರ್ಕಾರದ ನಿರ್ಲಕ್ಷ್ಯವೇ ಕಾರಣ ಎಂದರು.

ಜಲಾಶಯದಿಂದ ಪ್ರತಿದಿನ 98 ಸಾವಿರ ಕ್ಯೂಸೆಕ್ ನೀರು ಪೋಲಾಗುತ್ತಿದೆ, ಅನಿವಾರ್ಯವಾಗಿ ಅಪಾರ ಪ್ರಮಾಣದ ನೀರು ಡ್ಯಾಂನಿಂದ ಹೊರಕ್ಕೆ ಬಿಡಬೇಕಿದೆ, ಇದರಿಂದ ಅಣೆಕಟ್ಟೆ ನೀರು ಅವಲಂಬಿಸಿರುವ ರೈತರು ಅತ್ಯಂತ ಸಂಕಷ್ಟಕ್ಕೆ ಸಿಲುಕುತ್ತಾರೆ ಎಂದು ಆತಂಕ ವ್ಯಕ್ತಪಡಿಸಿದರು. ಭತ್ತ ಬೆಳೆಯುವ ಪ್ರದೇಶ ಇದಾಗಿದ್ದು, ಅಣೆಕಟ್ಟೆ ಕ್ರೆಸ್ಟ್‌ಗೇಟ್ ಮುರಿದಿರುವುದರಿಂದ ಒಂದು ಬೆಳೆ ತೆಗೆಯಲೂ ಸಾಧ್ಯವಾಗದೆ, ಸಂಕಷ್ಟಕ್ಕೆ ಒಳಗಾಗಿರುವ ರೈತರಿಗೆ ಪ್ರತಿ ಹೆಕ್ಟೇರ್‌ಗೆ ಕನಿಷ್ಠ 50 ಸಾವಿರ ರೂ. ಪರಿಹಾರ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿರುವುದಾಗಿ ತಿಳಿಸಿದರು.

ಅರಮನೆಯ ಟಿಕೆಟ್ ಪಡೆಯಲು ವಾಟ್ಸಪ್ ಟಿಕೆಟಿಂಗ್ ತಂತ್ರಾಂಶ ಅಭಿವೃದ್ಧಿ

ಮೈಸೂರು,ಆ.13– ಕರ್ನಾಟಕ ಸರ್ಕಾರದ ವಿದ್ಯುನ್ಮಾನ ನಾಗರಿಕ ಸೇವಾ ವಿತರಣಾ ನಿರ್ದೇಶನಾಲಯ (ಇಡಿಸಿಎಸ್) ವತಿಯಿಂದ ಮೊಬೈಲ್ ಒನ್ ಯೋಜನೆಯ ಮೂಲಕ ಮೈಸೂರು ಅರಮನೆಯನ್ನು ವೀಕ್ಷಿಸಲು ನಾಗರಿಕರು ಸಮಯ ಮತ್ತು ಶ್ರಮವನ್ನು ಉಳಿಸಲು ಹಾಗೂ ಅತಿ ಸುಲಭವಾಗಿ ಮೈಸೂರು ಅರಮನೆ ವೀಕ್ಷಿಸಲು ಮೊಬೈಲ್ ಮೂಲಕ ಟಿಕೇಟ್ ಖರೀದಿಸಲು ವಾಟ್ಸಪ್ ಟಿಕೆಟಿಂಗ್ ತಂತ್ರಾಂಶವನ್ನು ಸರ್ಕಾರದ ಇಡಿಸಿಎಸ್ ಸಂಸ್ಥೆಯಿಂದ ಅಭಿವೃದ್ಧಿಪಡಿಸಲಾಗಿರುತ್ತದೆ.



ಸಾರ್ವಜನಿಕರು ಈ ಯೋಜನೆಯ ಸೌಲಭ್ಯವನ್ನು ಆಗಸ್ಟ್ 14 ರಿಂದ ಪಡೆಯಬಹುದಾಗಿದ್ದು, ವಾಟ್ಸಪ್ ಮೊ.ಸಂ: 8884160088ಗೆ Hi ಎಂದು ಟೈಪ್ ಮಾಡುವ ಮೂಲಕ ಅಥವಾ ಮೈಸೂರು ಅರಮನೆ ಮಂಡಳಿಯ ವೆಬ್‌ಸೈಟ್ https://mysorepalace.karnataka.gov.in ನಲ್ಲಿ ನೀಡಿರುವ ವಾಟ್ಸಪ್ ಕ್ಯೂ ಆರ್ ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ ವಾಟ್ಸಪ್ ಟಿಕೇಟನ್ನು ಖರೀದಿಸಬಹುದಾಗಿರುತ್ತದೆ. ಟಿಕೇಟ್ ಅನ್ನು ಖರೀದಿಸಿದ ದಿನದಿಂದ 5 ದಿನಗಳವರೆಗೆ ಟಿಕೇಟ್ ವ್ಯಾಲಿಡಿಟಿ ಇದ್ದು, ಬೆಳಗ್ಗೆ 10 ರಿಂದ ಸಂಜೆ 5.30 ರವರೆಗೆ ಅರಮನೆಯನ್ನು ವೀಕ್ಷಿಸಬಹುದಾಗಿರುತ್ತದೆ ಎಂದು ಮೈಸೂರು ಅರಮನೆ ಮಂಡಳಿಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೋಲ್ಕತ್ತಾದ ವೈದ್ಯಕೀಯ ವಿದ್ಯಾರ್ಥಿನಿ ಅತ್ಯಾಚಾರ, ಕೊಲೆ ಪ್ರಕರಣ ಖಂಡಿಸಿ

ಮೈಸೂರಲ್ಲಿ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳಿಂದ ಮುಂಬತ್ತಿ ಮೆರವಣಿಗೆ



ಮೈಸೂರಿನಲ್ಲಿ ಮಂಗಳವಾರ ಸಂಜೆ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಮುಂಬತ್ತಿ ಮೆರವಣಿಗೆ ನಡೆಸಿದರು.

ಮೈಸೂರು,ಆ.13(ಪಿಎಂ)– ಕೋಲ್ಕತ್ತಾದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ಇತ್ತೀಚೆಗೆ ನಡೆದ ವೈದ್ಯಕೀಯ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಖಂಡಿಸಿ ವೈದ್ಯರು ಹಾಗೂ ವೈದ್ಯಕೀಯ ವಿದ್ಯಾರ್ಥಿಗಳು ಮಂಗಳವಾರ ಸಂಜೆ ನಗರದಲ್ಲಿ ಮುಂಬತ್ತಿ ಮೆರವಣಿಗೆ ನಡೆಸಿದರು.

ಭಾರತೀಯ ವೈದ್ಯಕೀಯ ಸಂಘ (ಐಎಂಎ) ಮೈಸೂರು ಘಟಕ, ಮೈಸೂರು ಮೆಡಿಕಲ್ ಕಾಲೇಜ್ ರೆಸಿಡೆಂಟ್ ಡಾಕ್ಟರ್ಸ್ ಅಸೋಸಿಯೇಷನ್, ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘ, ಮೈಸೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಬೋಧಕರ ಸಂಘ, ಎಐಡಿಎಸ್‌ಐ ವಿದ್ಯಾರ್ಥಿ ಸಂಘಟನೆ ಪದಾಧಿಕಾರಿಗಳು ಹಾಗೂ ಮೈಸೂರು ವೈದ್ಯಕೀಯ ಕಾಲೇಜಿನ ಯುಜಿ ಮತ್ತು ಪಿಜಿ ವೈದ್ಯಕೀಯ ವಿದ್ಯಾರ್ಥಿಗಳು ನೂರಾರು ಸಂಖ್ಯೆಯಲ್ಲಿ ಸೇರಿ ಮುಂಬತ್ತಿ ಮೆರವಣಿಗೆ ನಡೆಸಿ ಘಟನೆಯನ್ನು ತೀವ್ರವಾಗಿ ಖಂಡಿಸಿದರು.

ತ್ವರಿತಗತಿಯಲ್ಲಿ ನ್ಯಾಯಾಂಗ ತನಿಖೆ ನಡೆಸಿ ಘಟನೆಯಲ್ಲಿ ಭಾಗಿಯಾದವರನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು. ಕಾಲೇಜು ಮತ್ತು ಕೆಲಸದ ಸ್ಥಳದಲ್ಲಿ ವೈದ್ಯರು, ವೈದ್ಯಕೀಯ ವಿದ್ಯಾರ್ಥಿಗಳು, ದಾದಿಯರು ಹಾಗೂ ಆರೋಗ್ಯ ಕಾರ್ಯಕರ್ತರ ಸುರಕ್ಷತೆಗೆ ಸೂಕ್ತ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಕೆಆರ್ ಆಸ್ಪತ್ರೆ ಆವರಣದಿಂದ ಆರಂಭಗೊಂಡ ಕ್ಯಾಂಡಲ್ ಮೆರವಣಿಗೆಯು, ಇರ್ವಿನ್ ರಸ್ತೆ ಮಾರ್ಗವಾಗಿ ಜೆಕೆ ಮೈದಾನ ತಲುಪಿ ಅಂತ್ಯಗೊಂಡಿತು. ಐಎಂಎ ಮೈಸೂರು ಘಟಕದ ಅಧ್ಯಕ್ಷ ಡಾ.ಜಯಂತ್, ಮಾಜಿ ಅಧ್ಯಕ್ಷೆ ಡಾ.ಸುಜಾತರಾವ್, ಉಪಾಧ್ಯಕ್ಷರಾದ ಡಾ.ಚಂದ್ರಭಾನ್ ಸಿಂಗ್, ಡಾ.ಮಂಜುನಾಥ್, ಕಾರ್ಯದರ್ಶಿ ಡಾ.ಶಿವಶಂಕರ್, ಖಜಾಂಚಿ ಡಾ.ರಾಜಾಪುರ್ ಪರುರಾಮ್, ಮೈಸೂರು ಮೆಡಿಕಲ್ ಕಾಲೇಜ್ ರೆಸಿಡೆಂಟ್ ಡಾಕ್ಟರ್ಸ್ ಅಸೋಸಿಯೇಷನ್‌ನ ಕಾರ್ಯದರ್ಶಿ ಡಾ.ಮನೀಶ್ ಶೆಟ್ಟಿ, ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಮೈಸೂರು ಘಟಕದ ಅಧ್ಯಕ್ಷ ಡಾ.ಜಗದೀಶ್, ಖಜಾಂಚಿ ಡಾ.ಬೃಂದಾ, ವೈದ್ಯರಾದ ಡಾ.ಮಮತಾ, ಡಾ.ಕಾವೇರಿ, ಡಾ.ಶೋಭಾ, ಎಐಡಿಎಸ್‌ಓ ಮೈಸೂರು ಜಿಲ್ಲಾ ಸಮಿತಿಯ ಅಧ್ಯಕ್ಷೆ ಚಂದ್ರಕಲಾ, ಕಾರ್ಯದರ್ಶಿ ನಿತಿನ್, ಪದಾಧಿಕಾರಿಗಳಾದ ಚಂದ್ರಿಕಾ, ಹೇಮಲತಾ, ಚಂದನಾ, ದಿಶಾ ಸೇರಿದಂತೆ ಮೈಸೂರು ವೈದ್ಯಕೀಯ ಕಾಲೇಜಿನ ಯುಜಿ ಮತ್ತು ಪಿಜಿಯ ವೈದ್ಯಕೀಯ ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಮೈಸೂರಲ್ಲಿ ಪ್ರತಿಭಟನೆ



ಬಾಂಗ್ಲಾದ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಮಂಗಳವಾರ ಪ್ರತಿಭಟಿಸಲಾಯಿತು.

ಮೈಸೂರು, ಆ.13(ಎಸ್‌ಬಿಡಿ)– ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತ ಹಿಂದೂಗಳ ಮೇಲಿನ ದೌರ್ಜನ್ಯ ಖಂಡಿಸಿ ಹಿಂದೂ ಜಾಗರಣ ವೇದಿಕೆ ಹಾಗೂ ಜನಮನ ವೇದಿಕೆ ಸಹಯೋಗದಲ್ಲಿ ಮೈಸೂರು ಚಾಮುಂಡಿಪುರಂನಲ್ಲಿ ಪ್ರತಿಭಟನೆ ನಡೆಸಲಾಯಿತು.

ಚಾಮುಂಡಿಪುರಂ ವೃತ್ತದಲ್ಲಿ ಭಾರತಮಾತೆ ಫೋಟೋಗೆ ಪೂಜೆ ಸಲ್ಲಿಸಿ, ಮೇಣದ ಬತ್ತಿ ಬೆಳಗುವುದರ ಜೊತೆಗೆ 'ಬಾಂಗ್ಲಾದ ಹಿಂದೂಗಳಿಗೆ ಮಾನವ ಹಕ್ಕುಗಳಿಲ್ಲವೇ?', 'ಧೃತಿಗೆಡದಿರಿ ನಿಮ್ಮೊಂದಿಗೆ ನಾವಿದ್ದೇವೆ' ಎಂಬಿತ್ಯಾದಿ ಘೋಷಣಾ ಫಲಕಗಳನ್ನು ಹಿಡಿದು ಪ್ರತಿಭಟಿಸಲಾಯಿತು. ಬಾಂಗ್ಲಾ ಹಿಂದೂಗಳ ಮೇಲೆ ನಿರಂತರ ದೌರ್ಜನ್ಯ ನಡೆದಿದೆ. ಭಯದಿಂದ ಬದುಕುವಂತಾಗಿದೆ. ಅವರ ರಕ್ಷಣೆಗೆ ಭಾರತ ಸರ್ಕಾರ ಕ್ರಮ ವಹಿಸಬೇಕು ಎಂದು ಇದೇ ವೇಳೆ ಆಗ್ರಹಿಸಲಾಯಿತು.

ಈ ವೇಳೆ ಮಹಾನಗರ ಪಾಲಿಕೆ ಮಾಜಿ ಸದಸ್ಯ ಮ.ವಿ.ರಾಮ್‌ಪ್ರಸಾದ್ ಮಾತನಾಡಿ, ಬಾಂಗ್ಲಾದಲ್ಲಿ ಹಿಂದೂಗಳ ಮೇಲೆ ದಾಳಿ ನಡೆಸಲಾಗುತ್ತಿದೆ. ಅವರ ಮನೆ, ಕಚೇರಿಗಳಿಗೆ ಬೆಂಕಿ ಹಚ್ಚಲಾಗಿದೆ. ಅಮಾನುಷ ಹಲ್ಲೆಗೆ ಗುರಿಯಾಗಿ ಹಲವರು ಮೃತಪಟ್ಟಿದ್ದಾರೆ. ಅಲ್ಲಿನ ರಾಜಕೀಯ ತಿಕ್ಕಾಟಕ್ಕೆ ಹಿಂದೂಗಳು ಬಲಿಯಾಗುತ್ತಿದ್ದಾರೆ. ಸಾವಿರಾರು ಹಿಂದೂಗಳು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಸಮುದಾಯದ ರಕ್ಷಣೆಗೆ ಭಾರತ ಸರ್ಕಾರ ಹಕ್ಕೊತ್ತಾಯ ಮಂಡಿಸಬೇಕು. ಬಾಂಗ್ಲಾ ಹಾಗೂ ಪಾಕಿಸ್ತಾನದಲ್ಲಿ ಹಿಂದೂಗಳ ಸಂಖ್ಯೆ ದಿನೇ ದಿನೆ ಕಡಿಮೆಯಾಗುತ್ತಿದೆ. ಮಾನವ ಹತ್ಯೆ ವಿರುದ್ಧ ವಿಶ್ವಸಂಸ್ಥೆ ಧ್ವನಿ ಎತ್ತಬೇಕು. ಬಾಂಗ್ಲಾದ ಹಿಂದೂಗಳ ಮನೆಗಳಿಗೆ ರಕ್ಷಣೆ ನೀಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಕೆ.ಆರ್.ಕ್ಷೇತ್ರದ ಅಧ್ಯಕ್ಷ ಗೋಪಾಲ್ ರಾಜ್ ಅರಸ್, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಉಮಾಶಂಕರ್, ಮಹೇಶ್, ಲಕ್ಷ್ಮೀನಾರಾಯಣ್, ಮಂಜುನಾಥ್, ಅಪೂರ್ವ ಸುರೇಶ್, ಸೋಮೇಶ್, ರಂಗಸ್ವಾಮಿ, ಶಿವಲಿಂಗಚಾರ್, ರವಿ, ನಾಗೇಂದ್ರ, ಹರ್ಷ, ನಾಗರಾಜ್, ಚಂದ್ರು, ಅರವಿಂದ, ಕಾವ್ಯ ಮತ್ತಿತರರು ಪಾಲ್ಗೊಂಡಿದ್ದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಭೂಮಿಗೆ ಮೊದಲು ಸನ್ ಬರುತ್ತಾ, ಮೂನ್ ಬರುತ್ತಾ?
ಗುಂಡ : ಮೊದಲು ಮೂನ್ ಬರುತ್ತೆ...
ಟೀಚರ್ : ಅದು ಹೇಗೆ?
ಗುಂಡ : ಹನಿಮೂನ್ ಆದ ಮೇಲೆ ತಾನೇ ಭೂಮಿಗೆ ಸನ್ ಬರುವುದು!

ಮೈಸೂರು ಮಿತ್ರ

ಬುಧವಾರ, 14 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಸದಾ ಬೆಳಗುವ ಸೂರ್ಯನನ್ನು ನೋಡಿ ಕತ್ತಲು ಭಯಪಡುತ್ತದೆ. ಹಾಗೆ ಪ್ರತಿದಿನ ಕಷ್ಟಪಡುವ ವ್ಯಕ್ತಿಯನ್ನು ನೋಡಿ ಸೋಲು ಕೂಡ ಭಯಪಡುತ್ತದೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಆಳಾಗಿ ದುಡಿ, ಅರಸನಾಗಿ ಉಣ್ಣು'

ನಿಮ್ಮ ಪತ್ರಗಳು

ಎಲ್ಲಾ ದೇಶಗಳ ಪ್ರಜೆಗಳಿಗೆ ಆಶ್ರಯತಾಣವೇ ಭಾರತ

ಮಾನ್ಯರೆ,

ಭಾರತ ದೇಶಕ್ಕೆ ಬೇಡವೆಂದರೂ ಒಂದೊಂದಾಗಿ ತೊಂದರೆಗಳು ಬರುತ್ತಿವೆ. ಬಾಂಗ್ಲಾದೇಶದಲ್ಲಿ ನಡೆಯುತ್ತಿರುವ ದಂಗೆ, ದೊಂಬಿಗಳು ಭಾರತಕ್ಕೆ ತಲೆನೋವಾಗಿ ಪರಿಣಮಿಸುತ್ತಿವೆ. ಆಂತರಿಕ ಕಚ್ಚಾಟದ ಜೊತೆ ಅಲ್ಪಸಂಖ್ಯಾತ ಹಿಂದುಗಳ ದೇವಸ್ಥಾನ ಹಾಗೂ ಹಿಂದುಗಳ ಮಾರಣಹೋಮ ನಡೆಯುತ್ತಿದೆ. ಭಾರತ ದೇಶ ತನ್ನ ಸುತ್ತ ಮುತ್ತಲಿರುವ ದೇಶಗಳೊಂದಿಗೆ ಅನ್ಯೋನ್ಯತೆಯಿಂದ ಇದ್ದರೂ ಪಾಕಿಸ್ತಾನ ಹಾಗೂ ಚೀನಾ ದೇಶಗಳ ಕುಮ್ಮಕ್ಕಿನಿಂದ ಬಾಂಗ್ಲಾದೇಶ ಅರ್ಧದಷ್ಟು ನಿರ್ನಾಮವಾಗಿದೆ. ಇನ್ನೂ ಅಪಾಯವೆಂದರೆ ಅಲ್ಲಿನ ಜನರು ಪಶ್ಚಿಮ ಬಂಗಾಳದ ಭಾರತ ಗಡಿ ಪ್ರದೇಶದಲ್ಲಿ ಭಾರತ ಪ್ರವೇಶಿಸಲು ಪ್ರಯತ್ನಿಸುತ್ತಿದ್ದಾರೆ. ಹಿಂದೆ 1972ರ ಯುದ್ಧದಲ್ಲಿ ಲಕ್ಷಾಂತರ ಜನರು ಭಾರತವನ್ನು ಪ್ರವೇಶಿಸಿ ಇಂದು ಭಾರತಕ್ಕೆ ತಲೆನೋವಾಗಿ ಪರಿಣಮಿಸಿದ್ದಾರೆ.

ಹಿಂದೆ ಶ್ರೀಲಂಕಾದಲ್ಲಿ ವಿಪ್ಲವ ನಡೆದಾಗ ಅಲ್ಲಿನ ಅನೇಕ ತಮಿಳು ಪ್ರಜೆಗಳು ರಾತ್ರೋರಾತ್ರಿ ಭಾರತವನ್ನು ಪ್ರವೇಶಿಸಿ ಇಂದು ತಮಿಳುನಾಡಿನಲ್ಲಿ ನೆಲೆನಿಂತಿದ್ದಾರೆ. ಅದಲ್ಲದೆ ನೇಪಾಳದಲ್ಲಿ ಅಲ್ಲಿನ ರಾಜರ ನರಮೇಧ ನಡೆದಾಗ ಅಲ್ಲಿನ ನಾಗರಿಕರು ಭಾರತವನ್ನು ಪ್ರವೇಶಿಸಿ ಭಾರತದ ಎಲ್ಲಾ ರಾಜ್ಯಗಳಲ್ಲೂ ಹರಡಿದ್ದಾರೆ. ಅಫ್ಘಾನಿಸ್ತಾನದ ಅನೇಕ ನಾಗರಿಕರೂ ಭಾರತವನ್ನು ಪ್ರವೇಶಿಸಿದ್ದಾರೆ. ಹಿಂದೆ 1962ರ ನೆಹರೂ ಕಾಲದಲ್ಲಿ ಟಿಬೇಟನ್ನು ಚೀನಾ ಆಕ್ರಮಿಸಿದಾಗ ಲಕ್ಷಾಂತರ ಟಿಬೇಟಿನ್ ನಾಗರಿಕರು ಭಾರತಕ್ಕೆ ಓಡಿ ಬಂದಿದ್ದಾರೆ. ಹೀಗೆ ಜಗತ್ತಿನ ವಿವಿಧ ದೇಶಗಳಲ್ಲಿ ವಿಪ್ಲವವಾದಾಗ ಭಾರತ ದೇಶ ಅವರಿಗೆ ಪ್ರವೇಶಿಸಲು ಅನುಮತಿ ನೀಡಿ ಇಂದು ಭಾರತದಲ್ಲಿ 140 ಕೋಟಿಗೂ ಹೆಚ್ಚು ಜನಸಂಖ್ಯೆ ಉಂಟಾಗಲು ಕಾರಣವಾಯಿತು. ಭಾರತ ದೇಶ ಈಗ ದಿಟವಾಗಿ ನಿಂತು ಬಾಂಗ್ಲಾ ಜನರು ಭಾರತವನ್ನು ಪ್ರವೇಶಿಸದಂತೆ ತಡೆಯಬೇಕು. **–ರಘುವೀರ ಪುರಾಣಿಕ್, ಸಿದ್ಧಾರ್ಥನಗರ, ಮೈಸೂರು.**

ಪ್ರೇಕ್ಷಕರ ಮನಗೆದ್ದ 'ಮಿಡಲ್ ಕ್ಲಾಸ್ ಸಂಸಾರ' ನಾಟಕ

ಮಾನ್ಯರೆ,

ಕಳೆದ ಭಾನುವಾರ (ಆ.4) ಸಂಜೆ ಗೋಕುಲಂನ ರಂಗಮಂದಿರದಲ್ಲಿ ಪ್ರದರ್ಶಿಸಲ್ಪಟ್ಟ ನಾಟಕ, 'ಮಿಡಲ್ ಕ್ಲಾಸ್ ಸಂಸಾರ' ಪ್ರೇಕ್ಷಕರೆಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೇಯಸ್ ಎಂಬುವರ ಕನಸಿನ ಕೂಸಾದ ಈ ನಾಟಕ 'ಮಧ್ಯಮ ವರ್ಗದ ದಂಪತಿ ಅನುಭವಿಸುವ ಸಾಂಸಾರಿಕ 'ತಾಪತ್ರಯ'ಗಳನ್ನು ಬಹಳ ಸಹಜವಾಗಿ ಅಭಿನಯಿಸಿ, ತೋರಿಸುವ ಮೂಲಕ ನಮ್ಮ ಮನಸೂರೆಗೊಂಡಿದ್ದಾರೆ. ಒಂದೂವರೆ ಗಂಟೆ ಕಾಲ ನಡೆದ ನಾಟಕದಲ್ಲಿ ಜನರು ನಗುವುದರ ಮೂಲಕ ತಮ್ಮೆಲ್ಲ ನಿತ್ಯದ ಬೇಜಾರುಗಳನ್ನು ಕಳೆದುಕೊಂಡು ಹಗುರವಾದರು. ಗೋಕುಲಂ ವಿಭಾಗದ ಕಾರ್ಪೊರೇಟರ್ ಆದ ಎಸ್‌ಬಿಎಂ ಮಂಜು ಅವರ ಮತ್ತು ಇತರ ಗಣ್ಯರ ಭಾಷಣಗಳೂ ಜನರನ್ನು ಚಪ್ಪಾಳೆ ತಟ್ಟುವಂತೆ ಹುರಿದುಂಬಿಸಿತು. ಕಲಾವಿದರಿಗೆ ಈ ಮೂಲಕ ನನ್ನ ಅನಂತ ವಂದನೆಗಳನ್ನು ತಿಳಿಸಬಯಸುತ್ತೇನೆ. 'ಕನಸು' ತಂಡದಿಂದ ಇನ್ನಷ್ಟು ನಾಟಕಗಳು, ಶೀಘ್ರದಲ್ಲಿ ನಡೆಸಲ್ಪಡಲಿ ಎಂದು ಹಾರೈಸುವೆ.

– ನಖಾತೆ ಆನಂದರಾವ್, ಗೋಕುಲಂ, ಮೈಸೂರು.

ಕನಿಷ್ಠ ಜ್ಞಾನವೂ ಇಲ್ಲದ ನಾಯಕರು

ಮಾನ್ಯರೆ,


ಇತ್ತೀಚೆಗೆ, ಮೈಸೂರಿನಲ್ಲಿ ನಡೆದ ಕಾಂಗ್ರೆಸ್‌ನ ಜನಾಂದೋಲನ ಬಹಿರಂಗ ಸಭೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಏಕವಚನದಲ್ಲೇ, ಮಿಸ್ಟರ್ ಕುಮಾರಸ್ವಾಮಿ ನಿನ್ನ ಮಗನನ್ನು ರಾಜಕೀಯವಾಗಿ ಬೆಳೆಸಲು, ನಿನ್ನ ಸಹೋದರ ರೇವಣ್ಣ ಅವರ ಮಕ್ಕಳನ್ನೇ ಜೈಲಿಗೆ ಕಳುಹಿಸಿದ್ದು ಯಾರು? ಎಂದು ಪ್ರಶ್ನೆ ಮಾಡಿದರೇ, ಇದಕ್ಕೆ ಪ್ರತಿಯಾಗಿ, ಕೇಂದ್ರ ಸಚಿವ ಕುಮಾರಸ್ವಾಮಿ ಅವರು ಮಾರನೇ ದಿನ ಅದೇ ವೇದಿಕೆಯಲ್ಲಿ ನಡೆದ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಮೈಸೂರು ಚಲೋ ಬಹಿರಂಗ ಸಭೆಯಲ್ಲಿ, ಡಿ.ಕೆ. ಶಿವಕುಮಾರ್ ಅವರನ್ನು ಗುರಿಯಾಗಿ ಇಟ್ಟುಕೊಂಡು, ರಾಜ್ಯದ ಹೆಸರಾಂತ ಉದ್ಯಮಿ ಕೆಫೆ ಕಾಫಿ ಡೇ ಮಾಲೀಕರಾದ ಸಿದ್ಧಾರ್ಥ ಅವರ ಸಾವಿಗೆ ಕಾರಣ ಯಾರು? ಶಿವಕುಮಾರ್‌ರವರೇ ಎಂದು ತಮ್ಮ ನಾಲಿಗೆ ಹರಿಬಿಟ್ಟಿದ್ದು, ಈ ಇಬ್ಬರು ನಾಯಕರು, ತಮ್ಮ-ತಮ್ಮ ವೈಯಕ್ತಿಕ ದ್ವೇಷವನ್ನು ಈ ರೀತಿ ಹಂಚಿಕೊಂಡಿರುವುದು ಸಾರ್ವಜನಿಕವಾಗಿ ತೀವ್ರ ಟೀಕೆಗೆ ಗುರಿಯಾಯಿತು, ಈ ಇಬ್ಬರು ನಾಯಕರಿಗೆ ಸಾರ್ವಜನಿಕವಾಗಿ ಏನು ಮಾತನಾಡಬೇಕೆಂಬ ಕನಿಷ್ಠ ಜ್ಞಾನವೂ ಇಲ್ಲವಾಯಿತೆ? ಈ ರೀತಿಯ ಗಂಭೀರ ಆರೋಪಗಳನ್ನು ನೀವುಗಳು ಮರೆತು ಬಿಡಬಹುದು, ಆದರೆ ಸಾರ್ವಜನಿಕರು ಎಂದೂ ಮರೆಯುವುದಿಲ್ಲ, ಇಂತಹ ಹೇಳಿಕೆಗಳೇ ನಿಮಗೆ ತಿರುಗುಬಾಣವಾಗಬಹುದು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಬದುಕು–ಬಿಂದು

ಮಾನ್ಯರೆ,

ಭಕ್ಷಣೆ: ಮಾನವ ಏನನ್ನು ತಾನೆ ತಿನ್ನುವುದಿಲ್ಲ? ತಿನ್ನುತ್ತಾನೆ, ತನ್ನನ್ನು ತಾನೆ.
ಹಾರೈಕೆ: 'ತವಕ–ತಲ್ಲಣ' ಎಂಬುದೊಂದು ಆಧುನಿಕ ನುಡಿಗಟ್ಟು, ಎರಡೂ ಇಲ್ಲವಾಗಬೇಕು; ತಳಮಳ ತಣ್ಣಗಾಗಬೇಕು.
ಇಬ್ಬಗೆ: ಸಾಹಿತ್ಯದಲ್ಲಿ ಎರಡು ಬಗೆ: ಕಳಪೆ ಮತ್ತು ಕಲಾ ಪ್ರದರ್ಶನ.
ಶತ–ಹತ: 'ಶತಾಯುಷಿ'ಗಳೆನಿಸಿಕೊಂಡ ಅನೇಕರು ಮತದಾನ ಮಾಡಿದ ಕೂಡಲೆ 'ಹತಾಯುಷಿ'ಗಳಾದರು: ಸೋಜಿಗ.
ಸಾವು: ಎಂತೆಂತಹ 'ಸಾಹುಕಾರ'ರನ್ನೂ ಸಾವು ಕಬಳಿಸಿತು. ಇನ್ನೂ ಬಡಬಗ್ಗರ ಮಾತೇನು?
ನಿಧಾನ: ಯಾವುದಕ್ಕೂ ಅವಸರ ಬೇಡ; ನಿಧಾನವಾಗಿ ಬರಲಿ, ನಿಧನ ಕೂಡ!
ಅಜಾತ: 'ಜಾತಸ್ಯ ಮರಣಂ ಧ್ರುವಂ' (ಹುಟ್ಟಿದವರಿಗೆ ಸಾವು ತಪ್ಪದು) ಹುಟ್ಟದವರಿಗೂ!
ಸತ್ಯ: ಭಾಷೆ ಎನ್ನುವುದು ಮಾಯೆ; ಭಾವ ಸತ್ಯ!
ನಿಶ್ಚಿತ: ಆಕಸ್ಮಿಕ, 'ಕಾಕತಾಳೀಯ' ಎಂಬುದಿಲ್ಲ, ಬದುಕಿನಲ್ಲಿ; ಎಲ್ಲ ಪೂರ್ವ ನಿಶ್ಚಿತ.
ಮಾನ: ಮನೆ ಮನೆಯ ವಿದ್ಯಮಾನ: ಜನನ; ಜವ್ವನ; ಜರೆ; ಮರಣ.
ವ್ಯಾಧಿ: 'ಕಾಲರಾ' ಹಾಗೆಯೆ ಇರಲಿ; 'ವಾಂತಿ–ಭೇದಿ'ಯಾಗುವುದು ಬೇಡ: ಆ ಹೆಸರೇ ಅಸಹ್ಯವಲ್ಲವೆ?
ಪ್ರಶ್ನೆ: 'ಒಲಿವುದೇತಕೆ? ಬೆರೆವುದೇತನಕೆ? ಬೆರೆ ತೊಡಗಲುವುದೇತಕೆ? ಎಂಬುದು ಕವಿಯೊಬ್ಬರ ಪ್ರಶ್ನೆ; ಈ ಕಾಲಕ್ಕೆ ಅತ್ಯಂತ ಪ್ರಸ್ತುತ. **–ಸಿಪಿಕೆ, ಮೈಸೂರು.**




ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...

ಪುಸ್ತಕ ವಿಮರ್ಶೆ: ನಮ್ಮ ಸಂಸದರಿಗೆ ಹಳ್ಳಿಹಕ್ಕಿಯ ಕಿವಿಮಾತು


ಮೊನ್ನೆ ಸೋಮವಾರ ನನಗೊಂದು ಪುಸ್ತಕ ಬಿಡುಗಡೆ ಸಮಾರಂಭದ ಆಹ್ವಾನ ಪತ್ರಿಕೆ ಬಂತು. ಅದರ ಜೊತೆಗೆ ಬಿಡುಗಡೆಯಾಗುವ ಪುಸ್ತಕವೂ ಕೂಡ ಕೊಡಲಾಯ್ತು. ಅದರ ಹೆಸರು 'ಪ್ರಾಚೀನ ಪಾರ್ಲಿಮೆಂಟ್‌ಗಳ ಪ್ರದಕ್ಷಿಣೆಗಳು' (A Tale of Ancient Parliaments of the World). ಅದರ ಕರ್ತೃ ಅಡಗೂರು ಎಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯರು, ಪಕ್ಷ ಭಾಜಪ.

ಪ್ರಜಾಪ್ರಭುತ್ವ (Democracy) ಎನ್ನುವ ರಾಜಕೀಯ ವ್ಯವಸ್ಥೆಯನ್ನು ಒಪ್ಪಿಕೊಂಡಿರುವ ನಮ್ಮ ದೇಶ, ರಾಜಕಾರಣಿಗಳು ಹಾಗೂ ರಾಜಕೀಯ ಚಟುವಟಿಕೆಗಳಿಂದ ಆವರಿಸಿಕೊಂಡು ಬಿಟ್ಟಿದೆ. ಹಾಗಿರಬೇಕಾದರೆ ಪ್ರಜಾಪ್ರಭುತ್ವ ವ್ಯವಸ್ಥೆಗೆ ಅಡಿಪಾಯಗಳಾದ ಸಂವಿಧಾನ (Constitution) ಹಾಗೂ ಪಾರ್ಲಿಮೆಂಟ್ (ಸಂಸತ್)ಗಳ ಅನಿವಾರ್ಯತೆ ಇದ್ದಿರಬೇಕು. ಬಹುಶಃ ಈ ಕಾರಣಕ್ಕಾಗಿ ಒಂದು ಬಾರಿ ಸಂಸದರಾಗಿ ಸೇವೆ ಮಾಡಿದ ವಿಶ್ವನಾಥ್ ಅವರು ಈ ಪುಸ್ತಕವನ್ನು ಬರೆದಿರಬೇಕು. ಬಹುಶಃ ಮುಂದೆ ಒಂದು ದಿನ 'ಪ್ರಾಚೀನ ಸಂವಿಧಾನಗಳ ಒಳನೋಟ' ಎಂಬ ಪುಸ್ತಕವನ್ನು ಬರೆಯಬಹುದು. ಅಂದ ಹಾಗೇ ಅವರು ಕಾನೂನು ತಜ್ಞರೂ ಹೌದು, ರಾಜಕೀಯದ ಅನೇಕ ಮಜಲುಗಳನ್ನು ನೋಡಿದವರು, ಹಲವು ಬಾರಿ ಶಾಸಕರಾಗಿದ್ದವರು. ಐದು ಬಾರಿ ಕರ್ನಾಟಕದ ಸಂಪುಟ ದರ್ಜೆಯ ಸಚಿವರಾಗಿದ್ದವರು, ಲೋಕಸಭಾ ಸದಸ್ಯರೂ ಆಗಿದ್ದು ಅನೇಕ ಬಾರಿ ಪರದೇಶಗಳಿಗೆ ಹೋಗಿ ಅಲ್ಲಿನ ಪಾರ್ಲಿಮೆಂಟ್‌ಗಳನ್ನು ಪ್ರದಕ್ಷಿಣೆ ಮಾಡಿ ಬಂದು ಈ ಪುಸ್ತಕವನ್ನು ಬರೆದಿದ್ದಾರೆ. ಅದೇ ರೀತಿ ಸಂವಿಧಾನದ ಬಗ್ಗೆಯೂ ಇನ್ನೂ ವಿಸ್ತೃತವಾಗಿ ಬರೆದರೆ ಹೊಸ ಪೀಳಿಗೆಗೆ ಪ್ರಯೋಜನವಾದೀತು.



ಲೇಖಕರು
ಅಡಗೂರು ಹೆಚ್.ವಿಶ್ವನಾಥ್
ವಿಧಾನಪರಿಷತ್ ಸದಸ್ಯರು
ಪ್ರಕಾಶಕರು: ಆಶಾ ನಾಗೇಶ್,
ದೇಸಿ ಪುಸ್ತಕ, ಬೆಂಗಳೂರು
080–23153558,
ಮೊ: 94484 39998
ಬೆಲೆ: 140 ರೂ.

> ಪುಸ್ತಕದ ವಿಷಯ ಪಾರ್ಲಿಮೆಂಟ್, 'ಸಂಸತ್', ಎನ್ನುವ ಶಬ್ದ ನಮಗೆಲ್ಲ ಗೊತ್ತು. ಆದರೆ ಅದರ ಪ್ರಾಮುಖ್ಯತೆ ಏನು, ಅದು ಬರೇ ಒಂದು ಕಟ್ಟಡ ಮಾತ್ರವೇ? ಅದರ ವಿನ್ಯಾಸ, ಅದರಲ್ಲಿ ಅಡಗಿರುವ ವ್ಯವಸ್ಥೆಗಳು, ಉದ್ದೇಶ, ಗುರಿ, ಜನರ ಕೆಲಸವನ್ನು ಜನಪ್ರತಿನಿಧಿಗಳು ಅರ್ಥಪೂರ್ಣವಾಗಿ ಮಾಡಲು ಪೂರಕವಾಗಿದೆಯೇ ಎಂಬುದು ಮುಖ್ಯ. ಈ ವಿಷಯ ಹೆಚ್ಚಿನ ಜನರಿಗೆ ಗೊತ್ತಿಲ್ಲ, ಆ ದೃಷ್ಟಿಯಿಂದ ಈ ಪುಸ್ತಕ ತುಂಬಾ ಪ್ರಯೋಜನಕಾರಿ.



ಅಡಗೂರು ಹೆಚ್. ವಿಶ್ವನಾಥ್

ವಿಶ್ವನಾಥ್‌ರವರು ತಮ್ಮ ರಾಜಕೀಯ ಚಟುವಟಿಕೆಗಳ ಮಧ್ಯೆ ಪುಸ್ತಕಗಳನ್ನು ಬರೆಯಲು ಸಮಯವನ್ನು ಮಾಡಿಕೊಂಡಿದ್ದು ಅಚ್ಚರಿಯೇ ಸರಿ. ಅವರ ಮೊದಲ ಪುಸ್ತಕ 'ಹಳ್ಳಿ ಹಕ್ಕಿಯ ಹಾಡು' ಜೀವನಚರಿತ್ರೆ ಎಂದು ಕೇಳಿದ್ದೀನಿ. ಆ ಪುಸ್ತಕದಿಂದಾಗಿ 'ಹಳ್ಳಿಹಕ್ಕಿ' ಎಂಬ ಪೂರ್ವ ಪ್ರತ್ಯಯ ಅವರ ಹೆಸರಿಗೆ ಸೇರಿಕೊಂಡು ಬಿಟ್ಟು ಈಗ ಅವರನ್ನು ಸುಲಭವಾಗಿ ಗುರುತಿಸಬೇಕೆಂದರೆ ಹಳ್ಳಿಹಕ್ಕಿ ವಿಶ್ವನಾಥ್ ಅಂದರೆ ಸಾಕು! ಇದಲ್ಲದೆ ಅವರು ಬೇರೆ ಏಳು ಪುಸ್ತಕಗಳನ್ನು ಬರೆದಿದ್ದಾರೆ. 'ಪ್ರಾಚೀನ ಪಾರ್ಲಿಮೆಂಟ್‌ಗಳ ಪ್ರದಕ್ಷಿಣೆಗಳು' ಅವರ ಎಂಟನೇ ಪುಸ್ತಕ. ಇದೊಂದು ಕಿರುಹೊತ್ತಿಗೆ ಎಂದು ಹೇಳಬಹುದು. ಕೇವಲ 76 ಪುಟಗಳಲ್ಲಿ ಇವರು ಪ್ರಪಂಚದ ಅನೇಕ ಪ್ರಾಚೀನ ಪಾರ್ಲಿಮೆಂಟ್‌ಗಳನ್ನು ನೋಡಿ, ಅದರ ಬಗ್ಗೆ ತಿಳಿದು ವಿಷಯವನ್ನು ಈ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ. ಒಂದು ಗಂಟೆ ಸಮಯದಲ್ಲಿ ಈ ಪುಸ್ತಕವನ್ನು ಓದಿ ಮುಗಿಸಿದೆ. ಕರ್ನಾಟಕದಲ್ಲಿ ಕೇವಲ ಬೆರಳೆಣಿಕೆಯಷ್ಟು ಜನ ರಾಜಕಾರಣಿಗಳು ಪುಸ್ತಕ ಬರೆದಿರಬಹುದು ಎನ್ನುವುದು ನನ್ನ ಅನಿಸಿಕೆ. ನನಗೆ ತಿಳಿದ ಮಟ್ಟಿಗೆ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿಯವರು ತುಂಬಾ ಬರೆದಿದ್ದಾರೆ ಹಾಗೂ ಅವರ ಬರವಣಿಗೆಗಳಿಗೆ ಅನೇಕ ಸಾಹಿತ್ಯಿಕ ಪ್ರಶಸ್ತಿಗಳು ಸಿಕ್ಕಿವೆ. ಬಹುಶಃ ಮೈಸೂರಿನ ರಾಜಕಾರಣಿಗಳಲ್ಲಿ ಹಳ್ಳಿಹಕ್ಕಿ ವಿಶ್ವನಾಥ್‌ರೇ ಪ್ರಮುಖ ಬರಹಗಾರರು ಅನಿಸುತ್ತಿದೆ. ಏನಿಲ್ಲವೆಂದರೂ ಸುದ್ದಿ ಮಾಡಿದವರು. ಕೌತುಕದ ವಿಸ್ಮಯವೆಂದರೆ, ಅವರು ಈಗ ಸಾಹಿತ್ಯ ಪರಿಚಾರಿಕೆಯಿಂದ ವಿಧಾನಪರಿಷತ್ತಿಗೆ ನಾಮಕರಣಗೊಂಡವರು. ಅವರೊಬ್ಬ ದೊಡ್ಡ ಸಾಹಿತಿ ಎಂಬ ಕಾರಣ ಕೊಟ್ಟು ಅವರನ್ನು ನಾಮಕರಣ ಮಾಡಿದ್ದಾರೆ. ಅದೇನೇ ಇರಲಿ, ಇಂಥ ರಾಜಕೀಯ ಮುತ್ಸದ್ದಿಗಳು ನಮ್ಮ ಮೇಲ್ಮನೆಯಲ್ಲಿ ಇರಬೇಕು. ಅವರ ರಾಜಕೀಯ ವಿಡಂಬನೆ ಹಾಗೂ ಮಾರ್ಗದರ್ಶನ ಇಂದಿನವರಿಗೆ ಬೇಕೇ ಬೇಕು.

ಇನ್ನು, ಪುಸ್ತಕದ ವಿಷಯ. ಪಾರ್ಲಿಮೆಂಟ್, 'ಸಂಸತ್' ಎನ್ನುವ ಶಬ್ದ ನಮಗೆಲ್ಲ ಗೊತ್ತು. ಆದರೆ ಅದರ ಪ್ರಾಮುಖ್ಯತೆ ಏನು, ಅದು ಬರೇ ಒಂದು ಕಟ್ಟಡ ಮಾತ್ರವೇ? ಅದರ ವಿನ್ಯಾಸ, ಅದರಲ್ಲಿ ಅಡಗಿರುವ ವ್ಯವಸ್ಥೆಗಳು, ಉದ್ದೇಶ, ಗುರಿ, ಜನರ ಕೆಲಸವನ್ನು ಜನಪ್ರತಿನಿಧಿಗಳು ಅರ್ಥಪೂರ್ಣವಾಗಿ ಮಾಡಲು ಪೂರಕವಾಗಿದೆಯೇ ಎಂಬುದು ಮುಖ್ಯ. ಈ ವಿಷಯ ಹೆಚ್ಚಿನ ಜನರಿಗೆ ಗೊತ್ತಿಲ್ಲ, ಆ ದೃಷ್ಟಿಯಿಂದ ಈ ಪುಸ್ತಕ ತುಂಬಾ ಪ್ರಯೋಜನಕಾರಿ. ಬಹುಶಃ ಪ್ರಜಾಪ್ರಭುತ್ವದಲ್ಲಿ ಸಂಸತ್‌ನ ಪ್ರಮುಖ ಪಾತ್ರವನ್ನರಿತ ವಿಶ್ವನಾಥ್‌ರವರು 2017ರಲ್ಲಿ 'ದಿ ಟಾಕಿಂಗ್ ಶಾಪ್' ಎಂಬ ಪುಸ್ತಕವನ್ನು ಬರೆದಿರಬೇಕು. ಇದರಲ್ಲಿ ಅವರು ಭಾರತದ ಹಾಗೂ ಇಂಗ್ಲೆಂಡಿನ (Great Britain) ಸಂಸತ್‌ಗಳ ಸಾಮ್ಯತೆ, ಭಿನ್ನತೆ ಹಾಗೂ ಮಿತಿಗಳ ಕುರಿತು ತೌಲನಿಕವಾಗಿ ವಿಚಾರ ಮಂಡಿಸಿದ್ದಾರೆ. ಮೊನ್ನೆ (9–8–2024) ರಾಜ್ಯಸಭೆಯಲ್ಲಿ ಸಭಾಧ್ಯಕ್ಷರಿಗೂ ಹಾಗೂ 5ನೇ ಬಾರಿ ಸಂಸದರಾಗಿರುವ ಒಬ್ಬ ಮಹಿಳೆಗೂ ನಡೆದ ಮಾತಿನ ತೀವ್ರತೆಯಿಂದ (ಚಕಮಕಿ) ಸಂಸತ್ತಿನ ನಡಾವಳಿಯನ್ನು ಹಾಳು ಮಾಡಲು ಹೊರಟ ಆ ಮಹಿಳೆಯ ವಿವೇಚನಾರಹಿತ ಮಾತು ಕೇಳಿದ ಮೇಲೆ ನನಗೆ ಅನಿಸಿತು, ವಿಶ್ವನಾಥ್‌ರು ಬರೆದ ಈ ಪುಸ್ತಕವನ್ನು ದೇಶದ ಎಲ್ಲಾ ಭಾಷೆಗಳಿಗೆ ತರ್ಜುಮೆ ಮಾಡಿ ಸದಸ್ಯರಿಗೆ ಹಂಚಿದರೆ ಪ್ರಯೋಜನವಾದೀತು ಎಂದು. ನಮ್ಮ ಸಂಸತ್‌ನ ಒಂದು ಬೇಜಾರಿನ ವಿಷಯವೆಂದರೆ ನೆಹರೂ ಪ್ರಧಾನಿಯಾಗಿದ್ದ ಕಾಲಾನಂತರ ಉತ್ತಮ ವಾಗ್ಮಿಗಳು ಹಾಗೂ ಉತ್ತಮ ಬರಹಗಾರರು ಸಂಸತ್‌ಗೆ ಬರಲೇ ಇಲ್ಲ. ಬಹುಶಃ, ವಿಶ್ವನಾಥ್‌ರು ಬರೆದಂತಹ, ಸಂಸತ್‌ಗೆ ಸಂಬಂಧಿಸಿದ, ಈ ರೀತಿಯ ಕಿರುಹೊತ್ತಿಗೆಗಳು ಸಂಸತ್‌ನ ನಡವಳಿಕೆಯ ಗುಣಮಟ್ಟವನ್ನು ಹೆಚ್ಚಿಸಲು ಪ್ರಯೋಜನವಾಗಬಹುದು ಎಂದು ಆಶಿಸೋಣ. ವಿಶ್ವನಾಥ್‌ರವರಿಂದ ಇದೊಂದು ಆರೋಗ್ಯಕರವಾದ ರಾಜಕೀಯಕ್ಕೆ ಸಂಬಂಧಿಸಿದ ಬರವಣಿಗೆ.

ಸಂಸತ್ ಕಟ್ಟಡ ಯಾವ ರೀತಿ ಅಲ್ಲಿಗೆ ಚುನಾಯಿತರಾಗಿ ಬರುವವರಿಗೆ ಸೇವಾಮನೋಭಾವವನ್ನು ತಂದು ಕೊಡಬೇಕು ಎಂಬುದನ್ನು ನೆನಪಿಸಬೇಕು ಅನ್ನುವುದಾದರೆ ಹಂಗೇರಿ ರಾಜ್ಯದ ರಾಜಧಾನಿ ಬುಡಾಪೆಸ್ಟ್‌ನಲ್ಲಿರುವ ಸಂಸತ್ ಕಟ್ಟಡವನ್ನು ವಿಶ್ವನಾಥ್‌ರು ಉದಾಹರಿಸುತ್ತಾರೆ. ಅಲ್ಲಿನ ಸದನದ ಅಧ್ಯಕ್ಷರ ಪೀಠದ ಮೇಲೆ ಮೀನುಗಾರನ (Fisher man) ಪ್ರತಿಮೆಯಿದೆ. ಅದರ ಎಡಗಡೆ ಕುರುಬನ (ಕುರಿಗಾಯಿ, Shepherd) ಪ್ರತಿಮೆ ಹಾಗೂ ಬಲಗಡೆಗೆ ರೈತನ ಪ್ರತಿಮೆ ಇದೆ. ಇದು ಸಾಂಕೇತಿಕವಾಗಿ ಜನಪ್ರತಿನಿಧಿಗಳನ್ನು ಆಗಾಗ ಎಚ್ಚರಿಸುತ್ತದೆ. ಹೇಳಿ ಕೇಳಿ ಸಂಸದರು ಕಾನೂನು ಮಾಡೋದು ಈ ಶ್ರಮಿಕರಿಗಾಗಿ, ಸಾಮಾನ್ಯರಿಗಾಗಿ ಎಂಬುದನ್ನು ತಿಳಿಸಲೋಸುಗ ಈ ಪ್ರತಿಮೆಗಳನ್ನು ಅಧ್ಯಕ್ಷರಿಗಿಂತ ಮೇಲೆ ನಿರ್ಮಿಸಲಾಗಿದೆ.

ಇದನ್ನು ಓದುವಾಗ ನನಗೆ ನೆನಪು ಬಂದಿದ್ದು ನಮ್ಮ ಕರ್ನಾಟಕ ಕಂಡ ಅತೀ ಉತ್ತಮ, ಪ್ರಾಮಾಣಿಕ ಎರಡನೇ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ. ಆಗಲೇ ಜಾತಿ ರಾಜಕೀಯ ಜನ್ಮವೆತ್ತಿ ಅವರನ್ನು ಕೆಳಗಿಳಿಸಿ ಬಿಟ್ಟರು. ಆದರೆ ಅವರು ನಡೆಸಿದ ಆದರ್ಶ ಆಡಳಿತ, ಅವರು ಕಟ್ಟಿಸಿದ ಅತೀ ಭವ್ಯವಾದ ವಿಧಾನಸೌಧ ಇಂದಿಗೂ ವಿಸ್ಮಯವಾಗಿ ನಿಂತಿದೆ. ಅಷ್ಟೇ ಅಲ್ಲ, ಅವರು ಸೌಧದ ನಾಲ್ಕು ಮಹಾದ್ವಾರಗಳ ಮೇಲೆ ಕೆತ್ತಿಸಿದ ಮಹಾನ್ ಆದರ್ಶಗಳ ಬೋಧನೆ, ಉಪದೇಶದ ಸೂತ್ರಗಳು ಇಂದೂ ಇವೆ. ಅವುಗಳೆಂದರೆ– 'ಸರ್ಕಾರದ ಕೆಲಸ ದೇವರ ಕೆಲಸ', 'ಧರ್ಮವನ್ನು ರಕ್ಷಿಸುವವರನ್ನು ಧರ್ಮ ರಕ್ಷಿಸುತ್ತದೆ' ಮೊದಲಾಗಿ. ಇದನ್ನು ಅಲ್ಲಿಂದ ತೆಗೆದು ಹಾಕಲು ಸಲಹೆಗಳಿದ್ದರೂ, ಸದ್ಯ ಅದು ಉಳಿದುಕೊಂಡಿದೆ! ಎಂಥ ಜನರಯ್ಯ ನಾವು.....

ಇದೇ ರೀತಿ, ನಮ್ಮನ್ನಾಳಿದ ಆಂಗ್ಲರು ಕಟ್ಟಿಸಿದ ಹಳೇ ಸಂಸತ್ ಭವನದಲ್ಲಿ ಕೂಡ ಈ ರೀತಿಯ ಆದರ್ಶ ಉಪದೇಶದ ಸೂತ್ರಗಳಿವೆ ಎಂದು ವಿಶ್ವನಾಥ್‌ರು ಬರೆದಿದ್ದಾರೆ. ಮಹಾಭಾರತದಿಂದ ಆರಿಸಿದ ಒಂದು ವಾಕ್ಯ ಹೀಗೆ ಇದೆಯಂತೆ:

"ಹಿರಿಯರಿಲ್ಲದೆ ಸಭೆಯು ಶೋಭಿಸದು. ಬರಿಯ ವಯಸ್ಸು ಮನುಷ್ಯನಿಗೆ ಹಿರಿತನವನ್ನು ಕೊಡಲಾರದು. ಯಾರು ಜ್ಞಾನಿಯೋ, ವಿವೇಕಯುತವಾದ ಮಾತನ್ನು ನುಡಿಯುತ್ತಾನೋ ಅವನೇ ಹಿರಿಯ. ಅಭಯ ಕೊಡುವವನೂ ಹಿರಿಯ. ಸಭೆಗಳಲ್ಲಿ ಧರ್ಮವೇ ಸತ್ಯ, ಸತ್ಯವೇ ಧರ್ಮ"

ಅಂದ ಹಾಗೆ 'ಮೈಸೂರು ಮಿತ್ರ' ಪತ್ರಿಕೆಯ ಆದರ್ಶವೂ ಕೂಡ ಧರ್ಮ–ಸತ್ಯ. ಇದನ್ನೇ 'ಮೈಸೂರು ಮಿತ್ರ'ನ ನಾಲ್ಕನೇ ಪುಟದಲ್ಲಿ ನೋಡಬಹುದು: ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ! (ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ).


ಈ ಪುಸ್ತಕವನ್ನು ವಿಶ್ವನಾಥ್‌ರವರು ತರಾತುರಿಯಲ್ಲಿ ಬರೆದಂತಿದೆ. ಆ ಕಾರಣಕ್ಕಾಗಿ ಏನೋ ಪುಸ್ತಕದ ಆವಿಷ್ಕಾರ, ವಿನ್ಯಾಸ (structured format), ಪ್ರಕರಣದ ಜೋಡಣೆ ಓದುಗಸ್ನೇಹಿಯಾಗಿಲ್ಲ. (not reader-friendly). ಅವರು ನೋಡಿ ಅಧ್ಯಯನ ಮಾಡಿದ ಪಾರ್ಲಿಮೆಂಟ್‌ಗಳನ್ನು ಬೇರೆ ಬೇರೆ ಅಧ್ಯಾಯಗಳಲ್ಲಿ ಕೊಡಬಹುದಿತ್ತು. ವಿಶ್ವನಾಥ್‌ರವರ ಮಾತಿನಲ್ಲಿರುವ ಮೋಡಿ, ಈ ಬರವಣಿಗೆಯಲ್ಲಿ ಕಾಣುವುದಿಲ್ಲ. ಸಾಹಿತ್ಯದ ಸೊಗಸು ಮಾಯವಾಗಿದೆ. ಆದರೆ ವಿಷಯವನ್ನು ವಿಸ್ತಾರವಾಗಿ ತಿಳಿಸುತ್ತಾರೆ. ಈ ಪುಸ್ತಕವನ್ನು ಬರೆಯುವ ಉದ್ದೇಶವನ್ನು ವಿಶ್ವನಾಥ್‌ರು ಪ್ರಾಮಾಣಿಕವಾಗಿ ಮುನ್ನುಡಿಯಲ್ಲಿ ಹೇಳಿದ್ದಾರೆ: "ನನ್ನ ತಿಳಿವಿಗೆ ದಕ್ಕಿದ್ದನ್ನು ಮುಂದಿನ ಪೀಳಿಗೆಗಳಿಗಾಗಿ ಬರೆದು ದಾಖಲಿಸಲೇಬೇಕೆಂದು ನಾನು ನಂಬಿದ್ದೇನೆ". ಅವರ ನಂಬಿಕೆ ಈಡೇರಲಿ ಎಂದು ಆಶಿಸೋಣ'.

Email: voice@starofmysore.com

ರಾಜ್ಯದಲ್ಲಿ ತ್ವರಿತ ಪೋಡಿ ಇತ್ಯರ್ಥಕ್ಕೆ

1000 ಗ್ರಾಮ ಲೆಕ್ಕಿಗರು, 750 ಸರ್ವೇಯರ್; 36 ಎಲ್‌ಡಿಆರ್ ನೇಮಕ

ಬೆಂಗಳೂರು, ಆ.13(ಕೆಎಂಶಿ)– ಪೋಡಿ ಪ್ರಕರಣಗಳ ತ್ವರಿತ ಇತ್ಯರ್ಥ ಹಾಗೂ ಗ್ರಾಮೀಣ ಭಾಗದ ಜನರ ಕಷ್ಟ–ಸುಖಗಳಿಗೆ ಸ್ಪಂದಿಸಲು 1,000 ಗ್ರಾಮ ಲೆಕ್ಕಿಗರು, 750 ಸರ್ವೇಯರ್ಸ್, 36 ಎಡಿಎಲ್‌ಆರ್‌ಗಳ ನೇಮಕ ಮಾಡುವುದಾಗಿ ಕಂದಾಯ ಸಚಿವ ಕೃಷ್ಣಬೈರೇಗೌಡ ಇಂದಿಲ್ಲಿ ಪ್ರಕಟಿಸಿದ್ದಾರೆ.



ಕಾವೇರಿ, ಕೃಷ್ಣ ಕೊಳ್ಳ ವ್ಯಾಪ್ತಿಯಲ್ಲಿ ಆಗಸ್ಟ್ 15ರ ನಂತರ ಭಾರೀ ಮಳೆ ಬೀಳುವ ಮುನ್ಸೂಚನೆ ಇದ್ದು ಸಾರ್ವಜನಿಕರು ಎಚ್ಚರ ವಹಿಸುವಂತೆ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ ಬಿದ್ದಿರುವ ಮಳೆ ಪರಿಸ್ಥಿತಿ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆ ಪರಿಶೀಲನಾ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಗರ್‌ಹುಕುಂ ಸಕ್ರಮಕ್ಕೆ ಅರ್ಜಿ ಸಲ್ಲಿಸಿ 40 ವರ್ಷ ಕಳೆದರೂ ಇಲಾಖಾ ಅರ್ಜಿಗಳ ನೌಕರರು ವಿಲೇವಾರಿ ಮಾಡದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಸೆಪ್ಟೆಂಬರ್ ತಿಂಗಳಿನಿಂದ ರಾಜ್ಯಾದ್ಯಂತ ಪೋಡಿ ಅಭಿಯಾನ ಆರಂಭಿಸುತ್ತೇವೆ, ಆ ವೇಳೆಗೆ ನಮ್ಮಲ್ಲಿ ಕೊರತೆ ಇರುವ ಈ ಸಿಬ್ಬಂದಿ ನೇಮಕಾತಿ ಕಾರ್ಯ ಪೂರ್ಣಗೊಳಿಸಲು ಸೂಚಿಸಿದ್ದೇನೆ ಎಂದರು.

ಕಾನೂನಿನಲ್ಲಿ ಅವಕಾಶಗಳಿದ್ದರೂ ರೈತರನ್ನು ದಿನನಿತ್ಯ ಕಚೇರಿಗಳಿಗೆ ಅಲೆಸಿ ಅವರಿಗೆ ಕಿರಿಕಿರಿ ಮಾಡುವುದು ಅಧಿಕಾರಿಗಳ ಕಸುಬಾಗಿ ಹೋಗಿದೆ.

ಪ್ರಕರಣಗಳ ಇತ್ಯರ್ಥಪಡಿಸಲು ಎಷ್ಟೇ ಕಾನೂನುಗಳನ್ನು ಅಳವಡಿಸಿದರೂ ಅವುಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಅಧಿಕಾರಿಗಳು ಬಳಸಿಕೊಂಡು ಜನಸಾಮಾನ್ಯರಿಗೆ ಕಿರಿಕಿರಿ ಮಾಡುತ್ತಿದ್ದಾರೆ.

ಕೆಲವೆಡೆ 50 ಎಕರೆ ಪೋಡಿ ಮಾಡಿಕೊಡಿ ಎಂದರೆ 100 ಎಕರೆ ಮಾಡಿಕೊಟ್ಟಿದ್ದಾರೆ, ಬಡ ರೈತನೊಬ್ಬ ತಾನು ಮಾಡುತ್ತಿರುವ ಸಾಗುವಳಿ ಭೂಮಿಗೆ ದಾಖಲೆಗಳನ್ನು ಮಾಡಿಕೊಳ್ಳಲು ಹೊರಟರೆ ಆತನನ್ನು ಅಲೆದಾಡಿಸುತ್ತಿದ್ದಾರೆ. ಇದಕ್ಕೆಲ್ಲಾ ಇತಿಶ್ರೀ ಹಾಡುವ ಉದ್ದೇಶದಿಂದಲೇ ಪೋಡಿ ಅಭಿಯಾನ ಆರಂಭಿಸಿದ್ದೇವೆ, ಈ ಸಂದರ್ಭದಲ್ಲಿ ಇಲಾಖಾ ನೌಕರರು ಮತ್ತು ಅಧಿಕಾರಿಗಳು ಕಾನೂನಿನ ಚೌಕಟ್ಟಿನಡಿ ಅರ್ಜಿಗಳನ್ನು ವಿಲೇವಾರಿ ಮಾಡಬೇಕು. ಇಲ್ಲದಿದ್ದರೆ ನಾವು ನಿಮ್ಮ ಮೇಲೆ ಕಠಿಣ ಕ್ರಮ ಜರುಗಿಸಬೇಕಾದೀತು ಎಂದು ಎಚ್ಚರಿಸಿದ್ದೇನೆ ಎಂದರು.

ಕಳೆದ ವರ್ಷಗಳಿಗೆ ಹೋಲಿಕೆ ಮಾಡಿದರೆ, ಈ ವರ್ಷ ರಾಜ್ಯದ ಎಲ್ಲಾ ಭಾಗದಲ್ಲೂ ವಾಡಿಕೆಗಿಂತ ಶೇಕಡ 20ರಷ್ಟು ಮಳೆ ಹೆಚ್ಚಾಗಿದ್ದು, 80 ಸಾವಿರ ಎಕರೆ ಭೂಮಿಯಲ್ಲಿ ಬೆಳೆ ನಾಶವಾಗಿದೆ.

ಮುಂಜಾಗ್ರತಾ ಕ್ರಮದಿಂದಾಗಿ ಬೆಳೆ ನಷ್ಟ ಕಡಿಮೆಯಾಗಿದೆ, ರಾಜ್ಯದಲ್ಲಿ ಉತ್ತಮ ಮಳೆಯಾಗಿ ಜಲಾಶಯಗಳು ಭರ್ತಿಯಾಗಿರುವುದರಿಂದ ಈ ಬಾರಿ ಕೃಷಿ ಉತ್ಪಾದನೆಯಲ್ಲಿ ದಾಖಲೆ ನಿರ್ಮಿಸುವ ಲಕ್ಷಣಗಳಿವೆ. ಬೆಳೆ ಹಾನಿಗೆ ಪರಿಹಾರ ನೀಡಲು ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗಿದೆ. ಎಲ್ಲಿ ಬೆಳೆ ನಷ್ಟವಾಗಿದೆ ಎಂಬುದನ್ನು ಪೋರ್ಟಲ್ ನಲ್ಲಿ ಮಾಹಿತಿ ಅಪ್‌ಲೋಡ್ ಮಾಡಿ, ಅರ್ಜಿ ಪಡೆದು ಬೆಳೆ ನಷ್ಟ ಪರಿಹಾರ ನೀಡುವಂತೆ ಸೂಚಿಸಿದ್ದೇವೆ. ನಮ್ಮಲ್ಲಿ ಸಾಕಷ್ಟು ಹಣವಿದೆ, ಇದನ್ನೇ ಬೆಳೆ ಕಳೆದುಕೊಂಡ ರೈತರಿಗೆ ವಿತರಿಸಿ ಎಂದು ಹೇಳಿದ್ದೇನೆ. ಮಳೆಯಿಂದ ಇದುವರೆಗೂ 58 ಮಂದಿ ಅಸುನೀಗಿದ್ದಾರೆ, ಅವರ ಕುಟುಂಬಗಳಿಗೂ ಪರಿಹಾರ ನೀಡುವಂತೆ ಸೂಚಿಸಲಾಗಿದೆ.

ಭಾಗಶಃ ಮನೆ ಕಳೆದುಕೊಂಡವರಿಗೆ ಒಂದು ಲಕ್ಷ ರೂ. ಪರಿಹಾರ ನೀಡಲಾಗುವುದು, ಸಂಪೂರ್ಣ ಮನೆ ಹಾನಿಗೆ ಸರ್ಕಾರವೇ ಮನೆ ಕಟ್ಟಿಸಿಕೊಡಲಿದೆ. ಆಗಸ್ಟ್ 15ರ ನಂತರ ಮುಂಗಾರು ಮತ್ತಷ್ಟು ಚುರುಕುಗೊಂಡು ಭಾರೀ ಮಳೆ ಆಗುವ ಸಾಧ್ಯತೆ ಇದ್ದು, ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು, ಶಿಥಿಲ ಮನೆಗಳಲ್ಲಿ ವಾಸವಿರುವವರನ್ನು ಸುರಕ್ಷಿತ ಜಾಗಗಳಿಗೆ ಸ್ಥಳಾಂತರಿಸುವಂತೆ ಮತ್ತು ನದಿ ಪಾತ್ರದ ಜನರ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡುವಂತೆ ಸೂಚಿಸಲಾಗಿದೆ ಎಂದರು.

ಚಿಲ್ಲರೆ ಹಣದುಬ್ಬರ ಶೇ.3.54ಕ್ಕೆ ಇಳಿಕೆ; ಕಳೆದ ಐದು ವರ್ಷಗಳಲ್ಲೇ ಅತಿಕಡಿಮೆ

ನವದೆಹಲಿ: ಕಳೆದ ವರ್ಷದ ಡಿಸೆಂಬರ್‌ನಿಂದ ಚಿಲ್ಲರೆ ಹಣದುಬ್ಬರವು ಸತತ ಇಳಿಕೆಯಾಯಾಗುತ್ತಿದ್ದು, ಜುಲೈನಲ್ಲಿ ಚಿಲ್ಲರೆ ಹಣದುಬ್ಬರವು ಶೇಕಡಾ 3.54 ಕ್ಕೆ ತಗ್ಗಿದೆ. ಇದು 5 ವರ್ಷಗಳಲ್ಲಿ ಮೊದಲ ಬಾರಿಗೆ ರಿಸರ್ವ್ ಬ್ಯಾಂಕ್ ನಿಗದಿಪಡಿಸಿದ ಶೇಕಡಾ 4 ಕ್ಕಿಂತ ಕಡಿಮೆಯಾಗಿದೆ.

ಕೆಲವು ಆಹಾರ ವಸ್ತುಗಳ ಬೆಲೆಗಳು ಸ್ವಲ್ಪಮಟ್ಟಿಗೆ ಕಡಿಮೆಯಾಗಿರುವುದರಿಂದ ಚಿಲ್ಲರೆ ಹಣದುಬ್ಬರ ಇಳಿಕೆಯಾಗಿದೆ ಎಂದು ಸೋಮವಾರ ಬಿಡುಗಡೆಯಾದ ಕೇಂದ್ರ ಸರ್ಕಾರದ ಅಂಕಿಅಂಶಗಳು ತಿಳಿಸಿವೆ.

ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರವು ಜೂನ್ 2024 ರಲ್ಲಿ ಶೇ. 5.08 ರಷ್ಟು ಇತ್ತು. ಅದು ಜುಲೈನಲ್ಲಿ ಶೇ. 3.54ಕ್ಕೆ ಇಳಿದಿದೆ. ಜುಲೈ 2023 ರಲ್ಲಿ ಶೇಕಡಾ 7.44 ರಷ್ಟಿತ್ತು. ರಾಷ್ಟ್ರೀಯ ಅಂಕಿಅಂಶ ಕಚೇರಿ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ ಆಹಾರದ ಹಣದುಬ್ಬರವು ಜುಲೈನಲ್ಲಿ ಶೇ. 5.42ಕ್ಕೆ ಇಳಿದಿದೆ. ಆಹಾರ ಹಣದುಬ್ಬರವು ಜೂನ್‌ನಲ್ಲಿ ಶೇ. 9.36 ರಷ್ಟು ಇತ್ತು.

ಜುಲೈನಿಂದ ಸೆಪ್ಟಂಬರ್‌ವರೆಗಿನ ತ್ರೈಮಾಸಿಕದಲ್ಲಿ ಹಣದುಬ್ಬರ ಶೇ. 4.4ರಷ್ಟಿರಬಹುದು ಎಂದು ಆರ್?ಬಿಐ ಅಂದಾಜು ಮಾಡಿತ್ತು. ಆದರೆ, ವಾಸ್ತವದಲ್ಲಿ ಹಣದುಬ್ಬರ ಈ ಅವಧಿಯಲ್ಲಿ ಇನ್ನೂ ಕಡಿಮೆಯಾಗುವ ಸಾಧ್ಯತೆ ಹೆಚ್ಚಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಇಂದು, ನಾಳೆ ಹೂಡಿಕೆದಾರರ ಸಮಾವೇಶ

ಮೈಸೂರು,ಆ.13(ಜಿಎ)–ಒಕ್ಕಲಿಗ ಉದ್ಯಮಿಗಳ ವೇದಿಕೆ ಫರ್ಸ್ಟ್ ಸರ್ಕಲ್ ಸೊಸೈಟಿ ವತಿಯಿಂದ ಆ.14 ಮತ್ತು 15ರಂದು ನಗರದ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಎರಡು ದಿನ ಪ್ರತಿನಿಧಿಗಳ ವಾರ್ಷಿಕ ಹಾಗೂ ಹೂಡಿಕೆದಾರರ ಸಮಾವೇಶ ಆಯೋಜಿಸಲಾಗುತ್ತಿದೆ ಎಂದು ರಾಜ್ಯಾಧ್ಯಕ್ಷ ನಂದೀಶ್ ರಾಜೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆ.14 ರಂದು ಬೆಳಗ್ಗೆ 9 ಗಂಟೆಗೆ ನಿರ್ಮಲಾನಂದನಾಥ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಚಾಲನೆ ದೊರೆಯಲಿದ್ದು, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಲಿದ್ದಾರೆ. ಆ.15ರಂದು ಸಂಜೆ 4ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದ್ದು, ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ ನಾರಾಯಣ್ ಸಮಾರೋಪ ಭಾಷಣ ಮಾಡುವರು, ಸಂಸದ ಯದುವೀರ್ ಒಡೆಯರ್ ಅಧ್ಯಕ್ಷತೆ ವಹಿಸುವರು ಎಂದರು.

ಸಮಾವೇಶದಲ್ಲಿ ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಹಾಗೂ ಹಾಸನ ಜಿಲ್ಲೆಗಳ ಒಕ್ಕಲಿಗ ಉದ್ಯಮಿಗಳು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇದರೊಡನೆ 50ಕ್ಕೂ ಹೆಚ್ಚು ಉದ್ಯಮಗಳಿಗೆ ಲಾಭದಾಯಕ ಹೂಡಿಕೆಗೆ ಅವಕಾಶ ದೊರೆಯಲಿದೆ. ಉದ್ಯಮಿಗಳಾಗೋಣ, ಉದ್ಯಮಗಳನ್ನು ಬೆಳೆಸೋಣ, ಕರ್ನಾಟಕದ ಪ್ರಗತಿಯಲ್ಲಿ ಮುಖ್ಯ ಪಾತ್ರ ವಹಿಸೋಣ ಎಂಬುದು ಈ ಬಾರಿಯ ಸಮಾವೇಶದ ವಿಷಯವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಯಶವಂತ್, ಚೇತನ್‌ಗೌಡ, ಕಾರ್ತಿಕ್, ಕುಮಾರ್, ಮಂಜುಳಾ ಪ್ರಕಾಶ್, ಅನು ಉದಯ್, ಭಾರತೀ ಶಂಕರ್ ಉಪಸ್ಥಿತರಿದ್ದರು.

ತಮಿಳುನಾಡಿಗೆ ಹರಿಸಿದ ಹೆಚ್ಚುವರಿ ಕಾವೇರಿ ನೀರು ಲೆಕ್ಕಕ್ಕೆ ಜಮೆ ಮಾಡಿ

ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಕರ್ನಾಟಕ ಮನವಿ



ಕೆಆರ್‌ಎಸ್ ಜಲಾಶಯದಿಂದ ಹೆಚ್ಚುವರಿಯಾಗಿ ತಮಿಳುನಾಡಿಗೆ ಹರಿಸುತ್ತಿರುವ ಕಾವೇರಿ ನೀರು. (ಸಂಗ್ರಹ ಚಿತ್ರ)

ನವದೆಹಲಿ, ಆ.13(ಬಿಎಲ್‌ಯು)– ಹೆಚ್ಚುವರಿಯಾಗಿ ತಮಿಳುನಾಡಿಗೆ ಹರಿದಿರುವ ಕಾವೇರಿ ನೀರನ್ನು ಲೆಕ್ಕಕ್ಕೆ ಪರಿಗಣಿಸುವಂತೆ ಕರ್ನಾಟಕ, ಕಾವೇರಿ ನದಿ ನೀರು ನಿರ್ವಹಣಾ ಪ್ರಾಧಿಕಾರಕ್ಕೆ ಮನವಿ ಮಾಡಿದೆ.

ದೆಹಲಿಯಲ್ಲಿ ಮಂಗಳವಾರ ನಡೆದ ಪ್ರಾಧಿಕಾರದ ಸಭೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಪ್ರತಿನಿಧಿಗಳು ಭಾಗವಹಿಸಿದ್ದರು. ತಮಿಳುನಾಡಿಗೆ ಪ್ರಸ್ತುತ 56.73 ಟಿಎಂಸಿ ನೀರು ಹರಿಸಬೇಕಿತ್ತು. ಆದರೆ ಈಗಾಗಲೇ 153.802 ಟಿಎಂಸಿ ನೀರು ಹರಿದು ಹೋಗಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಹಾಗೂ ತಮಿಳುನಾಡಿನ ಗಡಿ ಬಿಳಿಗುಂಡ್ಲುವಿನಲ್ಲಿ ಹರಿದ ಹೆಚ್ಚುವರಿ ನೀರಿನ ಪ್ರಮಾಣವನ್ನು ಮುಂಬರುವ ತಿಂಗಳಲ್ಲಿ ಹರಿಸಬೇಕಿರುವ ನೀರಿನ ಮೊತ್ತಕ್ಕೆ ಜಮೆ ಮಾಡಿಕೊಳ್ಳಬೇಕು ಎಂದು ಕರ್ನಾಟಕ ಸರ್ಕಾರ ವಾದ ಮಂಡಿಸಿತು.

ಮುಂದಿನ ಮುಂಗಾರು ಮಾರುತದಲ್ಲಿ ತಮಿಳುನಾಡಿನಲ್ಲಿ ಉತ್ತಮ ಮಳೆಯ ನಿರೀಕ್ಷೆ ಇದೆ. ಇದರಿಂದ ಕರ್ನಾಟಕ ಹಾಗೂ ತಮಿಳುನಾಡಿನ ರೈತರಿಗೆ ಅನುಕೂಲವಾಗುತ್ತದೆ. ಆದ ಕಾರಣ ಈಗಾಗಲೇ ಹರಿಸಿರುವ ನೀರನ್ನು ಮುಂದೆ ಹರಿಸಬೇಕಿರುವ ನೀರಿನ ಮೊತ್ತಕ್ಕೆ ಜಮೆ ಮಾಡಬೇಕೆಂದು ಕರ್ನಾಟಕ ಸರ್ಕಾರ ಕೋರಿತು.

ಆದರೆ ಇದಕ್ಕೆ ತಮಿಳುನಾಡು ಆಕ್ಷೇಪ ವ್ಯಕ್ತಪಡಿಸಿದೆ. 1 ತಿಂಗಳಲ್ಲಿ ಹರಿಸಬೇಕಾದ ನೀರಿನ ಪ್ರಮಾಣದಲ್ಲಿ ಕೊರತೆಯಾದರೆ ಅದನ್ನು ಮುಂದಿನ ತಿಂಗಳಲ್ಲಿ ಹರಿಸಬೇಕಿದೆ. ಇದು ಕಾವೇರಿ ನ್ಯಾಯಾಧೀಕರಣದ ಆದೇಶ ಕೂಡ ಆಗಿದೆ. ಅದರಂತೆ ಆಯಾ ತಿಂಗಳಲ್ಲಿ ಹರಿಸಬೇಕಿರುವ ನೀರನ್ನು ಬಿಡಬೇಕು ಎಂದು ತಮಿಳುನಾಡು ಪ್ರಾಧಿಕಾರಕ್ಕೆ ವಿವರ ನೀಡಿತು.

ಅರ್ಜಿ ಆಹ್ವಾನ

ಮೈಸೂರು,ಆ.13– ನಂಜನಗೂಡು ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾತಿ/ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2024–2025ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಪ್ರವರ್ಗ–1, ಎಸ್‌ಸಿ & ಎಸ್‌ಟಿ ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ರೂ.2.50 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ ಇತರೆ ಹಿಂದುಳಿದ ವರ್ಗಗಳ ಹಾಗೂ ಇತರೆ ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ರೂ 1 ಲಕ್ಷದೊಳಗಿರುವ ವಿದ್ಯಾರ್ಥಿಗಳು https://shp.karnataka.gov.in/bcwd ಮೂಲಕ ಸೆ.4ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ: 8050770004, 8050370005 ಸಂಪರ್ಕಿಸಬಹುದು ಎಂದು ನಂಜನಗೂಡು ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಯುಷ್ ವೈದ್ಯರ ಬಗ್ಗೆ ತಪ್ಪು ತಿಳುವಳಿಕೆ

ಡಾ.ಸಿದ್ದಪ್ಪ ಮಾದರಿ ವಿಷಾದ

ಮೈಸೂರು, ಆ.13(ಜಿಎ)–ಆಯುರ್ವೇದ, ಯುನಾನಿ ಮೊದಲಾದ ಸಂಯುಕ್ತ ವೈದ್ಯಕೀಯ ಪದ್ಧತಿ ವಿದ್ಯಾಭ್ಯಾಸ ಪಡೆದವರ ಬಗ್ಗೆ ಸಮಾಜದಲ್ಲಿ ತಪ್ಪು ತಿಳಿವಳಿಕೆ ಇದ್ದು, ಇವರು ವೈಜ್ಞಾನಿಕವಾಗಿ ಅಧ್ಯಯನ ಮಾಡಿದವರಾಗಿದ್ದಾರೆ ಎಂದು ರಾಜ್ಯ ಸಂಯುಕ್ತ ವೈದ್ಯಕೀಯ ಸಂಸ್ಥೆ ಅಧ್ಯಕ್ಷ ಡಾ.ಸಿದ್ದಪ್ಪ ಮಾದರಿ ವಿಷಾದಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಲವಾರು ಕಡೆಗಳಲ್ಲಿ ಆಯುಷ್ ವೈದ್ಯರು ಎಂದು ಕಡೆಗಣನೆಯಿಂದ ನೋಡುವುದು ನಡೆದಿದೆ. ಆದರೆ, ಇವರು ಆಯುರ್ವೇದ ಪದ್ಧತಿ ಹಾಗೂ ವೈಜ್ಞಾನಿಕ ವಿಧಾನದಲ್ಲಿ ಅಧ್ಯಯನ ಮಾಡಿದ್ದಾರೆ. ಸಾಂಸ್ಥಿಕ ಅಧ್ಯಯನ ಬಳಿಕ ಅರ್ಹತೆ ಹೊಂದಿದವರಾಗಿದ್ದಾರೆ. ಹೀಗಾಗಿ ಇವರ ಬಗೆಗಿನ ತಪ್ಪು ತಿಳಿವಳಿಕೆ ಸಮಾಜ ಕೈಬಿಡಬೇಕು ಎಂದರು.

ತುರ್ತು ಸಂದರ್ಭ, ಅಪಘಾತ ಮೊದಲಾದ ಸಂದರ್ಭದಲ್ಲಿ ಈ ವೈದ್ಯರು ಇಂತಹ ಚುಚ್ಚುಮದ್ದು ನೀಡಬಾರದು ಎಂಬ ನಿಯಮಗಳು ಸರಿಯಲ್ಲ. ಈ ವೈದ್ಯರು ಸಹಾ ವೈಜ್ಞಾನಿಕವಾಗಿ ಆ ಬಗ್ಗೆಯೂ ಅಧ್ಯಯನ ಮಾಡಿದವರಾಗಿದ್ದಾರೆ. ಹೀಗಾಗಿ ಈ ನಿರ್ಬಂಧ ಕೈಬಿಡಬೇಕೆಂದು ಸರ್ಕಾರವನ್ನು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಬಾಬು ಮೆನನ್, ಡಾ.ಅಪ್ರಮೇಯ ರಾಮನ್, ಡಾ.ಶಶಿಧರ್, ಡಾ.ಚಂದ್ರಶೇಖರ್, ಡಾ.ಜಗದೀಶ್ ನಾಯಕ್ ಉಸಪ್ಥಿತರಿದ್ದರು.

ನಾಳೆ 'ನೆನಪಿನ ದೋಣಿ' ಗೀತ ಗಾಯನ

ಮೈಸೂರು, ಆ.13(ಜಿಎ)–ಭೂಮಿಕಾ ಅಸೋಸಿಯೇಟ್ಸ್ ಹಾಗೂ ದಿ. ಮೈಕ್ ಚಂದ್ರು ಗೆಳೆಯರ ಬಳಗದಿಂದ 78ನೇ ಸ್ವಾತಂತ್ರ್ಯೋತ್ಸವ ಸಂಭ್ರಮಾಚರಣೆ ಪ್ರಯುಕ್ತ ನಗರದ ನಾದಬ್ರಹ್ಮ ಸಂಗೀತ ಸಭಾದಲ್ಲಿ ಆ.15ರಂದು ಸಂಜೆ 5.15ಕ್ಕೆ 'ನೆನಪಿನ ದೋಣಿ' ಗೀತ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಕಾಶವಾಣಿ ಕಲಾವಿದ ಮಂಜುನಾಥ್ ಈ ವಿಷಯ ತಿಳಿಸಿ, 78ರ ಸಂಭ್ರಮಕ್ಕೆ 28ರ ಕೊಡುಗೆ ಎಂಬ ಥೀಮ್‌ನಲ್ಲಿ ಕಾರ್ಯಕ್ರಮ ನಡೆಸುತ್ತಿದ್ದು, 60ರಿಂದ 90ರ ದಶಕದಲ್ಲಿ ಜನರ ಮನಸೂರೆಗೊಂಡ ಕನ್ನಡ ಮತ್ತು ಹಿಂದಿ ಚಲನಚಿತ್ರಗಳ 28 ಗೀತೆಗಳನ್ನು ರಿದಂ ಪ್ಯಾಡ್ ಕಲಾವಿದ ವಿನಯ್ ರಂಗಧೋಳ್ ಸಾರಥ್ಯದಲ್ಲಿ ಯುವ ಗಾಯಕರು ಪ್ರಸ್ತುತಪಡಿಸುವರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗಾಯಕ ಮೈಸೂರು ಆನಂದ್, ಬಳಗದ ಸದಸ್ಯರಾದ ಮುರಳಿ, ಅಶ್ವಥ್ ನಾರಾಯಣ ಉಪಸ್ಥಿತರಿದ್ದರು.

ಮೈಸೂರು ವಾರಿಯರ್ಸ್ ತಂಡಕ್ಕೆ ಗೌತಮ್ ಸಾಗರ್ ಸೇರ್ಪಡೆ; ಅಭಿನಂದನೆ



ಮೈಸೂರು ವಾರಿಯರ್ಸ್ ಕ್ರಿಕೆಟ್ ತಂಡದಿಂದ ಎನ್‌ಆರ್ ಗ್ರೂಪ್‌ನ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20–2024ರ ಪಂದ್ಯಾವಳಿಯಲ್ಲಿ ಕುಂಬಾರಕೊಪ್ಪಲಿನ ಗೌತಮ್ ಸಾಗರ್ ಆಡಲಿದ್ದು, ಅವರನ್ನು ನಗರಪಾಲಿಕೆ ಮಾಜಿ ಸದಸ್ಯ ಎಸ್‌ಬಿಎಂ ಮಂಜು ಅಭಿನಂದಿಸಿದರು. ಈ ವೇಳೆ ಎಸ್‌ಬಿಎಂ ಸ್ನೇಹ ಬಳಗದ ಅಧ್ಯಕ್ಷ ಮಹದೇವ, ಪಟ್ಟಾಭಿ, ನಾಗೇಂದ್ರ ಉಪಸಿತರಿದ್ದರು.

ಬಾಂಗ್ಲಾದಲ್ಲಿ ಹಿಂದೂಗಳ ರಕ್ಷಣೆಗೆ ಆಗ್ರಹ

ಮೈಸೂರು: ಬಾಂಗ್ಲಾದೇಶದಲ್ಲಿ ಹಿಂದೂಗಳನ್ನು ಗುರಿಯಾಗಿಸಿ ಹಿಂಸೆ ದೌರ್ಜನ್ಯ ಹಾಗೂ ದಾಳಿ ನಡೆಯುತ್ತಿದೆ. ಹಂಗಾಮಿ ಸರಕಾರ ಸೂಕ್ತ ರಕ್ಷಣೆ ನೀಡಬೇಕು ಎಂದು ಮೈಸೂರು ನಗರ ಬಿಜೆಪಿ ಉಪಾಧ್ಯಕ್ಷೆ ಹೇಮಾ ನಂದೀಶ್ ಆಗ್ರಹಿಸಿದ್ದಾರೆ.



ಹೇಮಾ ನಂದೀಶ್

ಬಾಂಗ್ಲಾದಲ್ಲಿ ಮೀಸಲು ವಿಚಾರದಲ್ಲಿ ನಾಗರಿಕರು ದಂಗೆ ಎದ್ದ ಬಳಿಕ ಅಲ್ಲಿನ ಪ್ರಧಾನಿ ರಾಜೀನಾಮೆ ನೀಡಿ ದೇಶ ತೊರೆದಿದ್ದಾರೆ. ಇದರಿಂದಾಗಿ ಕಾನೂನು ಸುವ್ಯವಸ್ಥೆ ನಿಷ್ಕ್ರಿಯವಾಗಿದೆ. ಕೆಲವರು ಗಲಭೆ ತೀವ್ರಗೊಳಿಸಲು ಹಿಂದೂ ಧಾರ್ಮಿಕ ಸ್ಥಳಗಳು, ದೇವಾಲಯಗಳು, ರುದ್ರಭೂಮಿ ಮೇಲೆ ದಾಳಿ ನಡೆಸುತ್ತಿದ್ದು ಅಲ್ಲಿನ ಅಲ್ಪಸಂಖ್ಯಾತರಾದ ಹಿಂದೂಗಳಿಗೆ ರಕ್ಷಣೆ ಇಲ್ಲವಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಬಾಂಗ್ಲಾದಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ರಕ್ಷಣೆಗೆ ವಿಶ್ವಸಂಸ್ಥೆ ಮುಂದಾಗಬೇಕು. ಕಿರುಕುಳಕ್ಕೆ ಸಿಲುಕಿದ ಹಿಂದೂಗಳಿಗೆ ಅಲ್ಲಿನ ಹಂಗಾಮಿ ಸರಕಾರ ಸೂಕ್ತ ರಕ್ಷಣೆ ಕಲ್ಪಿಸಬೇಕು. ಅಲ್ಲಿನ ಪರಿಸ್ಥಿತಿಯಿಂದಾಗಿ ಬಾಂಗ್ಲಾ ನುಸುಳುಕೋರರು ದೇಶದ ಗಡಿ ಪ್ರವೇಶಿಸುವ ಸಾಧ್ಯತೆ ಇದೆ. ಭದ್ರತಾ ಪಡೆಗಳು ಕಟ್ಟುನಿಟ್ಟಿನ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಮೂತ್ರಪಿಂಡದ ಕ್ಯಾನ್ಸರ್‌ಗೆ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಯಶಸ್ವಿ ಚಿಕಿತ್ಸೆ

ಮೈಸೂರು, ಆ. 13–ಒಂದು ಪ್ರಮುಖ ರಕ್ತನಾಳ ಮತ್ತು ಲಿಂಫ್ ನೋಡ್ ಒಳಗೊಂಡಿರುವ 3ನೇ ಹಂತದ ಮೂತ್ರಪಿಂಡದ ಕ್ಯಾನ್ಸರ್‌ಗೆ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಯಶಸ್ವಿ ಚಿಕಿತ್ಸೆ ಮಾಡಿ, ಆ ರೋಗಿಗೆ ಹೊಸ ಜೀವನವನ್ನು ನೀಡಿದೆ ಎಂದು ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಡಾ.ದಿನೇಶ್‌ಕುಮಾರ್ ತಿಳಿಸಿದ್ದಾರೆ.



ಮೈಸೂರಿನ ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮೈಸೂರಿನ ಮಣಿಪಾಲ್ ಆಸ್ಪತ್ರೆಯ ಡಾ.ದಿನೇಶ್‌ಕುಮಾರ್ ಮಾತನಾಡಿದರು.

ಮೈಸೂರಿನ ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ 71 ವಯಸ್ಸಿನ ಚಂದ್ರು (ಹೆಸರು ಬದಲಾಯಿಸಲಾಗಿದೆ) ಅವರು ಮೂತ್ರದಲ್ಲಿ ರಕ್ತ (ವೈದ್ಯಕೀಯವಾಗಿ ಹೆಮಟೂರಿಯಾ ಎಂದು ಕರೆಯಲಾಗುತ್ತದೆ) ಕಾಣಿಸಿಕೊಂಡು ಕಳೆದ 2 ತಿಂಗಳಿಂದ ಸಾಕಷ್ಟು ತೂಕ ಕಳೆದುಕೊಂಡು, ಮೈಸೂರಿನ ಮಣಿಪಾಲ ಆಸ್ಪತ್ರೆಯ ಡಾ.ದಿನೇಶ್ ಕುಮಾರ್, ಕನ್ಸಲ್ಟೆಂಟ್ ಯೂರೋಲಜಿ, ಆಂಡ್ರೊಲಜಿ ಮತ್ತು ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಸರ್ಜನ್, ಇವರನ್ನು ಭೇಟಿ ಮಾಡಿದರು.

ವೈದ್ಯರು ಅವರ ಬಲಭಾಗದ ಪಾರ್ಶ್ವದಲ್ಲಿ ದೊಡ್ಡ ಗಾತ್ರದ ಟ್ಯೂಮರ್ ಅನ್ನು ಕಂಡು ಹಿಡಿದರು. ಅಲ್ಟ್ರಾಸೌಂಡ್ ಮತ್ತು ಅಖಿ ಸ್ಕ್ಯಾನ್‌ಗಳು ಚಂದ್ರು ಅವರಿಗೆ ಸ್ಟೇಜ್ ಮೂರು ರೀನಲ್ ಸೆಲ್ ಕಾರ್ಸಿನೋಮ ಇರುವುದನ್ನು ಗುರುತಿಸಿತು.

ಬಹುವಿಭಾಗೀಯ ವಿಧಾನವನ್ನು ಬಳಸಿಕೊಂಡು, ಡಾ.ದಿನೇಶ್‌ಕುಮಾರ್ ಟಿ ಪಿ, ಕನ್ಸಲ್ಟೆಂಟ್–ಮೂತ್ರಶಾಸ್ತ್ರ, ಆಂಡ್ರಾಲಜಿ ಮತ್ತು ಕಿಡ್ನಿ ಟ್ರಾನ್ಸ್‌ಪ್ಲಾಂಟ್ ಸರ್ಜನ್ ನೇತೃತ್ವದ ಅನುಭವಿ ಶಸ್ತ್ರಚಿಕಿತ್ಸಕರ ತಂಡ, ಇವರ ಜೊತೆಗೆ ಡಾ.ತಿಮ್ಮಯ್ಯ ಕೆ ಎ, ಕನ್ಸಲ್ಟೆಂಟ್–ಯೂರೋಲಜಿ, ಡಾ.ಉಪೇಂದ್ರ ಶೆಣೈ, ಕನ್ಸಲ್ಟೆಂಟ್– ಕಾರ್ಡಿಯೋಥೊರಾಸಿಕ್ ಮತ್ತು ವಾಸ್ಕ್ಯುಲರ್ ಸರ್ಜರಿ, ಡಾ.ವಾಸುದೇವ ಪೈ ಎಚ್, ಕನ್ಸಲ್ಟೆಂಟ್ –ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ), ಮತ್ತು ಅರಿವಳಿಕೆ ತಜ್ಞರು ಮತ್ತು ಇಂಟೆನ್ಸಿವಿಸ್ಟ್ ತಂಡವು ಮೂತ್ರಪಿಂಡದ ಟ್ಯೂಮರ್ ಮತ್ತು ಸಂಕೀರ್ಣವಾದ ಥ್ರಂಬಸ್ ಅನ್ನು ತೆಗೆದುಹಾಕಲು ರೈಟ್ ರಾಡಿಕಲ್ ನೆಫ್ರೆಕ್ಟಮಿ + ಇಂಟರ್ಕೊವೆನಾ ಕ್ಯಾವಾ ಥ್ರಂಬೆಕ್ಟಮಿಯನ್ನು ಯಶಸ್ವಿಯಾಗಿ ನಡೆಸಿತು.

ಪ್ರತಿಭಾ ಪುರಸ್ಕಾರ; ಸಾಧಕರಿಗೆ ಪ್ರಶಸ್ತಿ ಪ್ರದಾನ

ಮೈಸೂರು, ಆ.13(ಜಿಎ)–ಮೈಸೂರು ಜಿಲ್ಲಾ ವಿಶ್ವಕರ್ಮ ಯುವ ಜಾಗೃತಿ ವೇದಿಕೆ ವತಿಯಿಂದ ಆ.18ರಂದು ಜಗನ್ಮೋಹನ ಅರಮನೆಯಲ್ಲಿ ಬೆಳಿಗ್ಗೆ 10.30ಕ್ಕೆ ಪ್ರತಿಭಾ ಪುರಸ್ಕಾರ, ಶಿಕ್ಷಣ ಪ್ರತಿಭಾ ಪುರಸ್ಕಾರ ಹಾಗೂ ಸಮಾಜದ ನಾಲ್ವರು ಸಾಧಕರಿಗೆ ವಿಶ್ವಕರ್ಮ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗುವುದು' ಎಂದು ವೇದಿಕೆ ಅಧ್ಯಕ್ಷ ಕೆಂಡಗಣ್ಣ ವಿಶ್ವಕರ್ಮ ಕೆ. ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಸಾಧನೆ ಮಾಡಿದ 200 ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನಡೆಸಲಾಗುವುದು. ಶಿಲ್ಪಿ ಅರುಣ್ ಯೋಗಿರಾಜ್, ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರಪಾಲಿಕೆಯ ಮೇಯರ್ ರಾಮಣ್ಣ ಬಡಿಗೇರ್, ಬಿಗ್ ಬಾಸ್ ವಿಜೇತ ಕಾರ್ತಿಕ್ ಮಹೇಶ್ ಹಾಗೂ ಮಹಾನಟಿ ಕಾರ್ಯಕ್ರಮ ವಿಜೇತೆ ಪ್ರಿಯಾಂಕ ಅವರಿಗೆ ಪ್ರಶಸ್ತಿ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಮಧುಗಿರಿ ತಾಲೂಕಿನ ನೀಲಕಂಠ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ. ಸಚಿವ ಹೆಚ್.ಸಿ.ಮಹದೇವಪ್ಪ, ಡಾ.ಯತೀಂದ್ರ ಸಿದ್ದರಾಮಯ್ಯ, ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ, ಶ್ರೀವತ್ಸ, ದರ್ಶನ್ ಧ್ರುವನಾರಾಯಣ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಎಲ್.ಸತೀಶ್, ಟಿ.ಎಸ್.ಸಿದ್ದರಾಜು, ಶ್ರೀಲಕ್ಷ್ಮಿ, ಸಿದ್ದೇಶ್ ರಾಜು, ಮಹೇಶ್ ಉಪಸ್ಥಿತರಿದ್ದರು.

ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ



ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ರಾಷ್ಟ್ರೀಯ ಗ್ರಂಥ ಪಾಲಕರ ದಿನವನ್ನು ಆಚರಿಸಲಾಯಿತು.

ಮೈಸೂರು,ಆ.13–ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ರಾಷ್ಟ್ರೀಯ ಗ್ರಂಥಪಾಲಕರ ದಿನದ ಅಂಗವಾಗಿ 'ತಂತ್ರಜ್ಞಾನ ಮಾಹಿತಿ ಸಂಪನ್ಮೂಲ ಮತ್ತು ಸಂಶೋಧನಾ ಕಾರ್ಯಕ್ಷಮತೆಯ ಅಳತೆಗಳು' ಎಂಬ ವಿಷಯದ ಬಗ್ಗೆ ಉಪನ್ಯಾಸ ಕಾರ್ಯಕ್ರಮವನ್ನು ನಡೆಸಲಾಯಿತು.

ಗ್ರಂಥಾಲಯ ವಿಜ್ಞಾನದ ಪಿತಾಮಹ ಡಾ.ಎಸ್.ಆರ್.ರಂಗನಾಥನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ಸಲ್ಲಿಸಲಾಯಿತು. ಗ್ರಂಥಾಲಯದಲ್ಲಿ ನೋಬೆಲ್ ಪುರಸ್ಕೃತರ ಪುಸ್ತಕಗಳ ವಿಭಾಗವನ್ನು ಉದ್ಘಾಟಿಸಲಾಯಿತು.

ಮೈಸೂರು ವಿಶ್ವವಿದ್ಯಾಲಯದ ಖ್ಯಾತ ನಿವೃತ್ತ ಗ್ರಂಥಪಾಲಕರೂ ಆದ ಸಂದರ್ಶಕ ಪ್ರಾಧ್ಯಾಪಕ ಡಾ.ಸಿ.ಪಿ.ರಾಮಶೇಷ್ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ.ಸೌಮ್ಯ ಈರಪ್ಪ, ಗ್ರಂಥಪಾಲಕರಾದ ಸಂಧ್ಯಾ ಆಚಾರಿ, ಕಾಲೇಜಿನ ಅಂತಿಮ ಪದವಿ ಬಿ.ಕಾಂ., ಬಿ.ಬಿ.ಎ., ಬಿ.ಸಿ.ಎ. ವಿದ್ಯಾರ್ಥಿಗಳು, ಅಧ್ಯಾಪಕರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ದುರ್ಗಾಪ್ರಸಾದ್ ಸ್ವಾಗತಿಸಿ, ನಿರೂಪಣೆ ಮಾಡಿದರು, ಚಿರಂತ್ ವಂದಿಸಿದರು.

ವಿದ್ಯಾರ್ಥಿಗಳಿಗೆ ರೈನ್ ಕೋಟ್ ಕೊಡುಗೆ



ಮೈಸೂರಿನ ಹೆಲ್ಪಿಂಗ್ ಹ್ಯಾಂಡ್ಸ್ ಜೈನ್ ಯುವ ಸಂಘಟನೆ ವತಿಯಿಂದ ಇಟ್ಟಿಗೆಗೂಡಿನ ಸರ್ಕಾರಿ ಶಾಲೆಯ ಎಲ್ಲಾ ವಿದ್ಯಾರ್ಥಿಗಳಿಗೆ ರೈನ್ ಕೋಟ್ ಕೊಡುಗೆಯಾಗಿ ನೀಡಲಾಯಿತು. ಈ ವೇಳೆ ಸಹಾಯಹಸ್ತಗಳ ಕಾರ್ಯದರ್ಶಿ ಆನಂದ ಪಟ್ವಾ, ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಅನ್ನಪೂರ್ಣ ಮತ್ತು ಗ್ಲೇಡ್ಸ್, ಹೆಲ್ಪಿಂಗ್ ಹ್ಯಾಂಡ್ಸ್ ಅಧ್ಯಕ್ಷ ಮಹಾವೀರ ಖಾಬಿಯಾ, ಕಾರ್ಯದರ್ಶಿ ಆನಂದ್‌ರಾಜ್ ಪಟ್ವಾ, ಖಜಾಂಚಿ ರಾಜನ್ ಬಾಗ್‌ಮಾರ್, ಸದಸ್ಯರಾದ ಪ್ರಕಾಶ್ ಗಾಂಧಿ, ಮನೋಹರ್ ಸಂಕಲ, ಗೌತಮ್ ಪಟ್ವಾ, ಜಂಬು ಲೋಧಾ, ಮಾಜಿ ಕಾರ್ಪೊರೇಟರ್ ಛಾಯಾದೇವಿ, ಎಂಆರ್‌ಸಿ ಅಶ್ವಿನಿ, ಶಿಕ್ಷಕರು, ಪಾಲಕರು, ಸಿಬ್ಬಂದಿ ಉಪಸ್ಥಿತರಿದ್ದರು.

ಮುಡಾ, ವಾಲ್ಮೀಕಿ ನಿಗಮದ ಹಗರಣ ಖಂಡಿಸಿ

ನಾಳೆಯಿಂದ ಮೈಸೂರಿನಿಂದ ವಿಧಾನಸೌಧದವರೆಗೆ ದಸಂಸ ಪಾದಯಾತ್ರೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮ ಹಾಗೂ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆಯಲ್ಲಿ ಆಗಿರುವ ಹಗರಣ ಖಂಡಿಸಿ ಇದೇ 15ರಿಂದ ಮೈಸೂರಿನಿಂದ ಬೆಂಗಳೂರಿನ ವಿಧಾನಸೌಧದವರೆಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗುವುದು' ಎಂದು ದಲಿತ ಸಂಘರ್ಷ ಸಮಿತಿ (ಭೀಮವಾದ) ಅಧ್ಯಕ್ಷ ಆರ್. ಮೋಹನರಾಜ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳನ್ನು ವಂಚಿಸುತ್ತ ಬಂದಿದೆ. ಒಂದು ವರ್ಷದಿಂದ ಪರಿಶಿಷ್ಟ ಸಮುದಾಯಗಳ ಅಭಿವೃದ್ಧಿ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯ 25 ಸಾವಿರ ಕೋಟಿ ಹಣವನ್ನು 'ಗ್ಯಾರಂಟಿ'ಗೆ ಬಳಸುವ ಮೂಲಕ ದಲಿತರಿಗೆ ಅನ್ಯಾಯ ಮಾಡಲಾಗಿದೆ' ಎಂದು ದೂರಿದರು.

'ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಪ್ರೋತ್ಸಾಹ ಧನ ಹಂಚಿಕೆಯಲ್ಲೂ ಸಮಸ್ಯೆ ಆಗಿದೆ. ಈ ಎಲ್ಲ ಹಗರಣಗಳನ್ನು ಖಂಡಿಸಿ ಮೈಸೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಆಗಸ್ಟ್ 20ಕ್ಕೆ ಬೆಂಗಳೂರಿಗೆ ಬಂದು ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು' ಎಂದರು. ಸುದ್ದಿಗೋಷ್ಠಿಯಲ್ಲಿ ಬೆಂಗಳೂರು ನಗರ ಘಟಕದ ಅಧ್ಯಕ್ಷ ಪರಶುರಾಮ, ಪ್ರಧಾನ ಕಾರ್ಯದರ್ಶಿ ನಾಗೇಶ್, ಸಂಚಾಲಕರಾದ ಜಯರಾಮ್, ಚನ್ನಕೇಶವ ಭಾಗವಹಿಸಿದ್ದರು.

ಸಾ.ರಾ.ಮಹೇಶ್ ಹುಟ್ಟುಹಬ್ಬ ಆಚರಣೆ...



ಮೈಸೂರಿನ ಜೆ.ಪಿ.ನಗರದಲ್ಲಿರುವ ಶ್ರೀ ಪೇಜಾವರ ಸಾರ್ವಜನಿಕ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಿಗೆ ಲೇಖನಿ ಸಾಮಗ್ರಿಗಳು ಹಾಗೂ ಹಣ್ಣುಗಳನ್ನು ವಿತರಿಸುವ ಮೂಲಕ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ವೇಳೆ ಶ್ರೀ ಪೇಜಾವರ ಸಾರ್ವಜನಿಕ ನಿಲಯದ ಪುಟ್ಟಣ್ಣ, ಮೈಸೂರು ನಗರ ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ್, ಭುವನೇಶ್ವರಿ ಸೇವಾ ಟ್ರಸ್ಟ್ ಅಧ್ಯಕ್ಷೆ ನಾಗಶ್ರೀ ಸುಚಿಂದ್ರ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ್, ಸಿ.ಜೆ.ಪುನೀತ್ ಇನ್ನಿತರರು ಉಪಸ್ಥಿತರಿದ್ದರು.

ಮೆಮೋರೆಂಡಮ್ ಸಲ್ಲಿಸಲು ಅರ್ಜಿ ಆಹ್ವಾನ

ಮೈಸೂರು,ಆ.13–ಸಾರ್ವಜನಿಕ ಗ್ರಂಥಾಲಯ ಇಲಾಖೆಯ ವತಿಯಿಂದ ಪುಸ್ತಕ ಖರೀದಿ ಸಂಬಂಧ ಆಸಕ್ತ ಮುದ್ರಕರು ಪುಸ್ತಕಗಳನ್ನು ಸಲ್ಲಿಸಲು ಪ್ರತಿ ಶೀರ್ಷಿಕೆಯ 3 ಪ್ರತಿಗಳೊಂದಿಗೆ ನಿಗದಿಪಡಿಸಲಾದ ಮೆಮೋರೆಂಡಮ್ ಅನ್ನು ಭರ್ತಿ ಮಾಡಿ ರಾಜ್ಯ ಕೇಂದ್ರ ಗ್ರಂಥಾಲಯದ ಕೃತಿಸ್ವಾಮ್ಯ ವಿಭಾಗಕ್ಕೆ ಸಲ್ಲಿಸಿ ಸ್ವೀಕೃತಿ ಪಡೆಯಬೇಕು. ಮೆಮೊರೆಂಡಮ್ ಅನ್ನು ನಗರ ಕೇಂದ್ರ ಗ್ರಂಥಾಲಯ ಕಚೇರಿಯ ವೇಳೆಯಲ್ಲಿ ಪಡೆಯಬಹುದು.

ಇತ್ತೀಚೆಗೆ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಕಡಿಮೆಯಾಗುತ್ತಿದೆ!

ದೇಶಭಕ್ತಿ ಗಾಯನ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿದ ನಿವೃತ್ತ ಪ್ರಾಧ್ಯಾಪಕ ಪ್ರೊ.ರಂಗಸ್ವಾಮಿ ಬೇಸರ

ಮೈಸೂರು,ಆ.13(ಎಸ್‌ಪಿಎನ್)– ಇತ್ತೀಚಿನ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ಬಿಂಬಿಸುವ ದೇಶಭಕ್ತಿಗೀತೆಗಳ ಗಾಯನ ಕಡಿಮೆಯಾಗುತ್ತಿದ್ದು, ಇದರಿಂದ ಅವರಲ್ಲಿ ದೇಶಪ್ರೇಮ ಕಡಿಮೆಯಾಗುತ್ತಿದೆ ಎಂದು ಕರ್ನಾಟಕ ರಾಜ್ಯ ಮುಕ್ತ ವಿವಿ ನಿವೃತ್ತ ಪ್ರಾಧ್ಯಾಪಕ ಪ್ರೊ.ಎ.ರಂಗಸ್ವಾಮಿ ಬೇಸರ ವ್ಯಕ್ತಪಡಿಸಿದರು.



ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ 'ನಾವು ಭಾರತೀಯರು' ಶೀರ್ಷಿಕೆಯಡಿ ದೇಶಭಕ್ತಿ ಗಾಯನ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಕರ್ನಾಟಕ ರಾಜ್ಯ ಮುಕ್ತ ವಿವಿಯ ನಿವೃತ್ತ ಪ್ರಾಧ್ಯಾಪಕ ಪ್ರೊ.ಎ.ರಂಗಸ್ವಾಮಿ ಬಹುಮಾನ ವಿತರಿಸಿದರು.

ಮೈಸೂರು ವಿಜಯನಗರ ಒಂದನೇ ಹಂತದಲ್ಲಿರುವ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಮೈಸೂರು ಒಲವು ಫೌಂಡೇಶನ್ ಹಾಗೂ ಜಿಲ್ಲಾ ಕಸಾಪ ಸಹಯೋಗದೊಂದಿಗೆ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ 'ನಾವು ಭಾರತೀಯರು' ಶೀರ್ಷಿಕೆಯಡಿ ದೇಶಭಕ್ತಿ ಗಾಯನ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ, ಮಾತನಾಡಿದರು.

ಆಧುನಿಕತೆ ಭರಾಟೆಯಲ್ಲಿ ದೇಶಪ್ರೇಮವನ್ನು ಬಿಂಬಿಸುವ ಗೀತೆಗಳ ಗಾಯನ, ನಾಟಕ, ನೃತ್ಯ ಸೇರಿದಂತೆ ಕಲಾ ಚಟುವಟಿಕೆಗಳು ಕಡಿಮೆಯಾಗುತ್ತಿವೆ. ಇದರಿಂದ ವಿದ್ಯಾರ್ಥಿಗಳಲ್ಲಿ ದೇಶಪ್ರೇಮ ತುಂಬುವ ಕಾರ್ಯಕ್ರಮಗಳು ಕಡಿಮೆಯಾಗುತ್ತಿದೆ. ಹಾಗಾಗಿ ಯುವಕರಲ್ಲಿ ದೇಶಾಭಿಮಾನ ಕಡಿಮೆಯಾಗುವ ಆತಂಕ. ಈ ಕಾಲಘಟ್ಟದಲ್ಲಿ ಒಲವು ಫೌಂಡೇಶನ್ ಪದಾಧಿಕಾರಿಗಳು ದೇಶಪ್ರೇಮ ಬಿಂಬಿಸುವ ಸ್ಪರ್ಧೆ ಏರ್ಪಡಿಸಿ, ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುತ್ತಿರುವುದು ಉತ್ತಮ ಸಂಗತಿ ಎಂದರು.

ಈ ವೇಳೆ ಹನ್ನೆರಡು ವರ್ಷದೊಳಗಿನ ವಿದ್ಯಾರ್ಥಿಗಳಾದ ಸಂತೋಷ್ (ಪ್ರ), ಯು.ಎಸ್.ಮಾನ್ವಿ(ದ್ವಿ), ಆಘನ ಪ್ರಣಮ್ (ತೃ), ಲಕ್ಷ್ಮಿಪ್ರಿಯ(ಸ) ಬಹುಮಾನ ಪಡೆದಿದ್ದಾರೆ. 50 ವರ್ಷದೊಳಗಿನ ಸೈಯದ್ ಅಫ್ರಾನ್(ಪ್ರ), ಸಾಕ್ಷಿ ಸಿ.ಶೆಟ್ಟಿ (ದ್ವಿ), ಬಿ.ಎಂ.ರಜಿನಿ(ತೃ), ಅಬೀಬ್ ಅಮರೀನ್(ಸ) ಬಹುಮಾನ ಪಡೆದಿದ್ದಾರೆ. 50 ವರ್ಷ ಮೇಲ್ಪಟ್ಟವರಾದ ಎನ್.ಎಸ್.ಭಗವಾನ್(ಪ್ರ), ವಿ.ವೆಂಕಟಮ್ಮ (ದ್ವಿ), ಪಾರ್ವತಮ್ಮ(ತೃ), ಬಾಪು ಆರ್. ರತ್ನಮ್ಮ(ಸ) ಬಹುಮಾನ ಪಡೆದಿದ್ದಾರೆ.

ವೇದಿಕೆಯಲ್ಲಿ ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್, ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಅಧ್ಯಕ್ಷೆ ಎಚ್.ಎಲ್.ಯಮುನಾ, ಒಲವು ಫೌಂಡೇಶನ್ ಅಧ್ಯಕ್ಷ ರಾಬರ್ಟ್ ಇ.ಕವನ್ರಾಗ್, ಕಸಾಪ ಕಾರ್ಯದರ್ಶಿಗಳಾದ ಲತಾಮೋಹನ್, ಚೀಲೂರು ಚಂದ್ರಶೇಖರ್, ಕೋಶಾಧ್ಯಕ್ಷ ಜಿ.ಪ್ರಕಾಶ್, ಜಂಟಿ ಕಾರ್ಯದರ್ಶಿ ಕೆಂಪಣ್ಣ, ಸಂಘಟನಾ ಕಾರ್ಯದರ್ಶಿ ಮೈನಾ ಲೋಕೇಶ್ ಇದ್ದರು.

ನಿರ್ದೇಶಕರ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು,ಆ.13–ಮೈಸೂರು ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಇಂಜಿನಿಯರಿಂಗ್‌ನಲ್ಲಿನ ನಿರ್ದೇಶಕರ ಹುದ್ದೆಯ ನೇಮಕಾತಿ ಮಾಡುವ ಸಂಬಂಧ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆ.23 ಕೊನೇ ದಿನ. ಸಂಪೂರ್ಣ ವಿವರ ಮತ್ತು ನಿಗದಿತ ಅರ್ಜಿ ನಮೂನೆಗಳನ್ನು ಮೈಸೂರು ವಿಶ್ವವಿದ್ಯಾನಿಲಯದ www.uni-mysore.ac.inನಲ್ಲಿ ಪಡೆಯಬಹುದಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಸಚಿವರು (ಸಿಬ್ಬಂದಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಆರ್‌ಎಸ್ ಸುಭದ್ರವಾಗಿದೆ, ಆತಂಕ ಬೇಡ

ಕೆಡಿಪಿ ಸಭೆಯಲ್ಲಿ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅಭಯ



ಕೆಡಿಪಿ ಸಭೆ ನಡೆಸುತ್ತಿರುವ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಂಯಸ್ವಾಮಿ.

ಮಂಡ್ಯ, ಆ.13– ಜಿಲ್ಲೆಯ ಜೀವನಾಡಿ ಕೃಷ್ಣರಾಜಸಾಗರ ಸುಭದ್ರವಾಗಿದೆ. ಯಾವುದೇ ಆತಂಕ ಬೇಡ ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಅಭಯ ನೀಡಿದ್ದಾರೆ.

ನಗರದ ಜಿ.ಪಂ. ಆವರಣದಲ್ಲಿರುವ ಕಾವೇರಿ ಸಭಾಂಗಣದಲ್ಲಿ ಕೆಡಿಪಿ ಸಭೆ ನಡೆಸಿ ಮಾತನಾಡಿ, ಜಿಲ್ಲೆಯಲ್ಲಿ 948 ಕೆರೆಗಳಿದ್ದು, ಕೆರೆ ತುಂಬಿಸುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಈ ಬಾರಿ ಉತ್ತಮ ಮಳೆಯಾಗಿದ್ದು, ಬೆಳೆಗಳಿಗೆ ನೀರಿನ ತೊಂದರೆ ಇಲ್ಲ. ತಾಂತ್ರಿಕ ತೊಂದರೆಗಳಿಂದ ಕೆಲವು ಭಾಗಗಳ ಕೃಷಿಗೆ ನೀರು ತಲುಪಿಲ್ಲ. ತಡವಾಗಿ ನೀರು ತಲುಪುತ್ತದೆ. ಇದನ್ನು ನೀರಾವರಿ ಇಲಾಖೆ ಅಧಿಕಾರಿಗಳು ರೈತರಿಗೆ ಮನವರಿಕೆ ಮಾಡಿಕೊಡಬೇಕು. ಇಲ್ಲವಾದಲ್ಲಿ ರೈತರಿಂದ ದೂರು ಬರುತ್ತದೆ ಎಂದರು.

ಕಾವೇರಿ ಅಚ್ಚುಕಟ್ಟಿನಲ್ಲಿ ಹೆಚ್ಚಾಗಿ ಮಳೆಯಾಗಿದೆ. ಕೃಷಿ ಹಾಗೂ ಕೆರೆಗಳಿಗೆ ನೀರು ನೀಡಬೇಕು. ನೀರು ಹರಿಸುವ ಸಂದರ್ಭದಲ್ಲಿ ಜನಪ್ರತಿನಿಧಿಗಳಿಗೆ ತಿಳಿಸಬೇಕು. ಮಳವಳ್ಳಿ ಹಾಗೂ ಮದ್ದೂರು ತಾಲೂಕಿನ ಕೊನೆಯ ಭಾಗದಲ್ಲಿರುವ ಕೆರೆಗಳನ್ನು ಸಹ ತುಂಬಿಸಲು ಹೆಚ್ಚಿನ ಆದ್ಯತೆ ನೀಡಿ ಕೆಲಸ ನಿರ್ವಹಿಸಿ ಎಂದು ಸೂಚಿಸಿದರು.

ಶೇ.100ರಷ್ಟು ಸಾಧನೆಯಾಗಬೇಕು. 2024–25ನೇ ಸಾಲಿನಲ್ಲಿ ಇಲಾಖೆಗಳಿಗೆ ಸರ್ಕಾರ ನಿಗದಿಪಡಿಸಿರುವ ಗುರಿ ಶೇ.100ರಷ್ಟು ಸಾಧನೆ ಮಾಡಬೇಕು. ಡಿಸೆಂಬರ್ ಅಂತ್ಯದೊಳಗೆ ಶೇ.70 ರಿಂದ 80 ಸಾಧನೆ ಮಾಡಿದರೆ ಶೇ.100 ರಷ್ಟು ಸಾಧನೆ ಮಾಡಬಹುದು. 2023–24ನೇ ಸಾಲಿಗೆ ಸಂಬಂಧಿಸಿದಂತೆ ಯಾವುದಾದರೂ ಕಾಮಗಾರಿ ಪ್ರಾರಂಭ ಬಾಕಿಯಿದ್ದಲ್ಲಿ ಸೆಪ್ಟೆಂಬರ್ ಮಾಹೆಯೊಳಗೆ ಪ್ರಾರಂಭವಾಗಬೇಕು ಯಾವುದಾದರೂ ತೊಂದರೆ ಇದ್ದಲ್ಲಿ ಗಮನಕ್ಕೆ ತನ್ನಿ ಎಂದರು.

> ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆ ಫಲಿತಾಂಶವನ್ನು ಉತ್ತಮಗೊಳಿಸಬೇಕು. ಎರಡರಿಂದ ಮೂರನೇ ಸ್ಥಾನಕ್ಕೆ ತರಬೇಕು. ಈಗಲೇ ಯೋಜನೆ ರೂಪಿಸಿ, ಅಧಿಕಾರಿಗಳು ಶಾಲೆಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಇದರೊಂದಿಗೆ ಬಾಲ್ಯವಿವಾಹ ತಡೆಗಟ್ಟಲು ಜಾಗೃತಿ ಮೂಡಿಸಿ ಬಾಲ್ಯವಿವಾಹವಾದ ನಂತರ ಶಿಕ್ಷೆ ವಿಧಿಸುವುದು ಸರಿಯಷ್ಟೆ. ಬಾಲ್ಯವಿವಾಹಕ್ಕಿಂತ ಮೊದಲೇ ತಡೆಗಟ್ಟಲು ಹೆಚ್ಚು ಜಾಗೃತಿ ಕಾರ್ಯಕ್ರಮ ಆಯೋಜಿಸಿ. ಸಾರ್ವಜನಿಕರಲ್ಲಿ ಬಾಲ್ಯವಿವಾಹವಾದ ಬಗ್ಗೆ ಕಾನೂನು ಭಯ ಹುಟ್ಟಿಸಿ ಇದರ ಜೊತೆಗೆ ಬಾಲ್ಯವಿವಾಹವಾದ ಹೆಣ್ಣು ಮಗುವಿನ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ತಿಳಿಸಿ.
> –ಎನ್.ಚಲುವರಾಂಯಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ.


ರೈತರಿಗೆ ಕಾಲಕ್ಕೆ ಸರಿಯಾಗಿ ಬಿತ್ತನೆ ಬೀಜ, ಕೀಟನಾಶಕ, ರಸಗೊಬ್ಬರಗಳ ಬಳಕೆ, ಅಳವಡಿಸಿಕೊಳ್ಳಬೇಕಿರುವ ತಾಂತ್ರಿಕತೆ, ತಳಿಗಳ ಬಗ್ಗೆ ಮಾಹಿತಿ ನೀಡಬೇಕು. ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಸರ್ಕಾರದಿಂದ ನೀಡಲಾಗುವ ಪರಿಹಾರ ಕೆಲಸದಲ್ಲಿ ಗ್ರಾಮ ಮಟ್ಟದಲ್ಲಿ ಅಧಿಕಾರಿಗಳು ಸ್ವಯಂ ಪ್ರೇರಿತರಾಗಿ ಅರ್ಜಿ ಸಲ್ಲಿಸಿ ಅವರಿಗೆ ಪರಿಹಾರ ಒದಗಿಸಬೇಕು. ಯಾವುದೇ ಕಾರಣಕ್ಕೂ ರೈತರ ಮನೆಯವರನ್ನು ಅಲೆದಾಡಿಸಬಾರದು ಸಚಿವರು ಸೂಚಿಸಿದರು.

ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವುದು ಕೇವಲ ಆರೋಗ್ಯ ಇಲಾಖೆಯ ಕೆಲಸ ಎಂಬ ಧೋರಣೆ ಬೇಡ. ಪೊಲೀಸ್, ಕಂದಾಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಒಟ್ಟಾಗಿ ಕೆಲಸ ನಿರ್ವಹಿಸಿ. ಜಿಲ್ಲೆಯಲ್ಲಿ ಹೆಣ್ಣು ಭ್ರೂಣ ಹತ್ಯೆಯಾಗದಂತೆ ತಡೆಗಟ್ಟಿ ಎಂದರು.

ವಿಧಾನಸಭಾ ಮತ್ತು ವಿಧಾನಪರಿಷತ್ ಸದಸ್ಯರಿಗೆ ಕ್ಷೇತ್ರ ಅಭಿವೃದ್ಧಿಗಾಗಿ ಬಿಡುಗಡೆಯಾಗಿರುವ ಅನುದಾನ ಸಂಪೂರ್ಣವಾಗಿ ವೆಚ್ಚವಾಗಬೇಕು. ಎಲ್ಲಾ ಕಾಮಗಾರಿಗಳು ಪ್ರಾರಂಭವಾಗಬೇಕು. ಇದಕ್ಕೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿಗಳು ಸಂಬಂಧಿಸಿದ ಶಾಸಕರನ್ನು ಭೇಟಿ ಮಾಡಿ ಯಾವುದಾದರೂ ಬದಲಾವಣೆ ಬೇಕಿದ್ದಲ್ಲಿ ಮಾಡಿಕೊಂಡು ಕೆಲಸ ಪ್ರಾರಂಭಕ್ಕೆ ಕ್ರಮವಹಿಸಬೇಕು ಎಂದರು. ಶಾಸಕರಾದ ರಮೇಶ್ ಬಾಬು ಬಂಡಿಸಿದ್ದೇಗೌಡ, ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಉತ್ತಮಗೊಳಿಸುವ ನಿಟ್ಟಿನಲ್ಲಿ ಈ ಬಾರಿ 8ರಿಂದ 10 ಶಾಲೆಗೆ ಒಬ್ಬರು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಕಡಿಮೆ ಅಂಕ ಪಡೆಯುವ ಮಕ್ಕಳಿಗೆ ಹೆಚ್ಚಿನ ತರಬೇತಿ ನೀಡುವಂತೆ ನಿರ್ದೇಶನ ನೀಡಲಾಗಿದೆ ಎಂದರು.

ಸಭೆಯಲ್ಲಿ ಶಾಸಕರಾದ ಮಧು ಜಿ.ಮಾದೇಗೌಡ, ಹೆಚ್.ಟಿ.ಮಂಜು, ಗ್ಯಾರಂಟಿ ಯೋಜನೆಗಳ ಉಪಾಧ್ಯಕ್ಷೆ ಪುಷ್ಪ ಅಮರನಾಥ್, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ಮುಡಾ ಅಧ್ಯಕ್ಷ ನಯೀಮ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ವಿ.ಅನ್ಬುಕುಮಾರ್, ಜಿ.ಪಂ. ಸಿಇಓ ಶೇಖ್ ತನ್ವೀರ್ ಆಸೀಫ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.



ಮೈದುಂಬಿ ಹರಿಯುತ್ತಿರುವ ಕೃಷ್ಣರಾಜಸಾಗರ.

ಅ.4 ರಿಂದ ಶ್ರೀರಂಗಪಟ್ಟಣ ದಸರಾ

ಮಂಡ್ಯ: ಐತಿಹಾಸಿಕ ಶ್ರೀರಂಗಪಟ್ಟಣ ದಸರಾವನ್ನು ಅ.4 ರಿಂದ ಮೂರು ದಿನಗಳ ಕಾಲ ಅಥವಾ 5 ದಿನಗಳ ಕಾಲ ಆಚರಿಸಲಾಗುವುದು ಎಂದು ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಪೂರ್ವಸಿದ್ಧತಾ ಸಭೆ ನಡೆಸಿ ಮಾತನಾಡಿದ ಅವರು, ದಸರಾದಲ್ಲಿ ಕಾರ್ಯಕ್ರಮಗಳು ಜನಾಕರ್ಷಿತವಾಗಿರಲಿ ಹಾಗೂ ಯಾವುದೇ ಲೋಪವಿಲ್ಲದಂತೆ ವಿಜೃಂಭಣೆಯಿಂದ ಆಚರಿಸಬೇಕು ಎಂದರು.

ವಿವಿಧ ಸಮಿತಿಗಳನ್ನು ರಚಿಸಿ ಯೋಜನೆಗಳನ್ನು ಸಿದ್ಧಪಡಿಸಿ, ಉತ್ತಮವಾಗಿ ಕಾರ್ಯಕ್ರಮಗಳು ಮೂಡಿ ಬರಬೇಕು. ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಿ ಎಂದರು.

ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ದಸರಾ ಕಾರ್ಯಕ್ರಮಗಳನ್ನು ಅಚ್ಚುಕಟ್ಟಾಗಿ ನಡೆಸಲು ಸ್ವಾಗತ, ವೇದಿಕೆ, ಸಾಂಸ್ಕೃತಿಕ ಸೇರಿದಂತೆ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಕ್ರೀಡಾ, ಯೋಗ, ಮಕ್ಕಳ ದಸರಾ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದರು. ಸಭೆಯಲ್ಲಿ ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ, ಹೆಚ್. ಟಿ ಮಂಜು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸೀಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ವರಮಹಾಲಕ್ಷ್ಮಿ ವಿಶೇಷ ಕಾರ್ಯಕ್ರಮ

ಮಂಡ್ಯ: ನಗರದ ಪೇಟೆ ಬೀದಿ 2ನೇ ಕ್ರಾಸ್‌ನಲ್ಲಿರುವ ಶ್ರೀ ಮಹಾಲಕ್ಷ್ಮಿ ದೇವಿ ದೇವಸ್ಥಾನದಲ್ಲಿ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಆ.16ರಂದು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿದೆ. 16ರ ಶುಕ್ರವಾರ ಬೆಳಗ್ಗೆ 6 ಗಂಟೆಗೆ ಪಂಚಾಮೃತ ಅಭಿಷೇಕ, ವೈವಿಧ್ಯಮಯ ಅಲಂಕಾರ ಸೇವೆ ಬಳಿಕ ಪ್ರಸಾದ ವಿನಿಯೋಗ ನಡೆಯಲಿದೆ.

ನಂತರ ಬೆಳಿಗ್ಗೆ 8 ರಿಂದ 10.30ರವರೆಗೆ ಎಂ.ವೈ.ಕುಮಾರ ಮತ್ತು ಯುವರಾಜ್ ತಂಡದಿಂದ ಸ್ಯಾಕ್ಸೋಫೋನ್ ಕಛೇರಿ, ಯೋಗೇಶ್ ನಂದೀಶ್ ಮೆಹೇಶ್ ತುಡದಿಂದ ಸ್ಯಾಕ್ಸೋಫೋನ್ ವಾದನ, ಸಂಜೆ 5 ಗಂಟೆಗೆ ಸಿ.ಪಿ.ಶ್ರೀನಿವಾಸ್ ಅವರಿಂದ ಕ್ಲಾರಿಯೋನೆಟ್ ವಾದನ ಬಳಿಕ ಚಿಣ್ಣ ಮಂಜುನಾಥ್ ಅವರಿಂದ ದಾಸವಾಣಿ ನಡೆಯಲಿದ್ದು, ಪಿಟೀಲು ಗುರುಮೂರ್ತಿ, ತಬಲ ಮೆಹೇಶ್, ಕುಮಾರಸ್ವಾಮಿ, ಕೀಬೋರ್ಡ್‌ನಲ್ಲಿ ಉಮಾಶಂಕರ್ ಪಕ್ಕವಾದ್ಯದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಶ್ರೀಮಹಾಲಕ್ಷ್ಮಿ ದೇವಿ ದೇವಸ್ಥಾನ ಟ್ರಸ್ಟ್‌ನ ಸೇವಾ ಸಮಿತಿ ತಿಳಿಸಿದೆ.

ನಿರ್ಭಯ ಗಸ್ತು ವಾಹನಗಳಿಗೆ ಚಾಲನೆ

ಮಂಡ್ಯ: ಜಿಲ್ಲೆಯಲ್ಲಿ ನಿರ್ಭಯ ಯೋಜನೆಯಡಿ ಒಟ್ಟು 40 ದ್ವಿಚಕ್ರ ಗಸ್ತು ವಾಹನಗಳನ್ನು ಹೊಸದಾಗಿ ವಿನ್ಯಾಸಗೊಳಿಸಲಾಗಿದ್ದು, ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಇಂದು ಡಿ.ಎ.ಆರ್ ಮೈದಾನದಲ್ಲಿ ಚಾಲನೆ ನೀಡಿದರು.

ನಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ್ ಬಾಲದಂಡಿ ಅವರು ಮಾತನಾಡಿ, ಈ ಹಿಂದೆ ನಿರ್ಭಯ ಸ್ಕೀಮ್‌ನ ಅಡಿಯಲ್ಲಿ ನೀಡಲಾಗಿದ್ದ ಗಸ್ತು ಬೈಕ್‌ಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ಆದ ಕಾರಣ ಎಲ್ಲಾ ಬೈಕ್‌ಗಳಿಗೆ ಹೊಸರೂಪ ಕೊಟ್ಟು, ಬ್ಲಿಂಕ್ ಕರ್ಸ್‌ಗಳು ಮತ್ತು ಸೈರನ್, ಮೈಕ್ ಸ್ಪೀಕರ್‌ಗಳನ್ನು ಅಳವಡಿಸಲಾಗಿದೆ. ಇವು 5 ಬೈಕ್‌ಗಳಂತೆ ಗುಂಪು ವ್ಯವಸ್ಥೆಯಲ್ಲಿ ಸೂಕ್ಷ್ಮ ಪ್ರದೇಶಗಳಲ್ಲಿ ಸತತವಾಗಿ ಸಂಚರಿಸಲಿಕ್ಕೆ ಉಪಯೋಗವಾಗುವ ರೀತಿಯಲ್ಲಿ ಸಿದ್ಧಗೊಳಿಸಲಾಗಿದೆ ಎಂದರು.

ಮಹಿಳೆಯರ ರಕ್ಷಣೆ, ಅಪರಾಧಗಳನ್ನು ತಡೆಯುವುದು ಹಾಗೂ ಕಾನೂನು ಸುವ್ಯವಸ್ಥೆಯನ್ನ ಹತೋಟಿಗೆ ತರುವುದು ದ್ವಿಚಕ್ರ ಗಸ್ತು ವಾಹನ ಚಾಲನ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಮಹಿಳೆಯರ ಮತ್ತು ಮಕ್ಕಳ ಸಂರಕ್ಷಣೆಗೆ ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ನಡೆಯುವ ಅಪರಾಧವನ್ನು ತಡೆಯಲಿಕ್ಕೆ, ತೊಂದರೆಗೆ ಒಳಗಾದ ಯಾವುದೇ ವ್ಯಕ್ತಿಗಳು ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿದಾಗ ಅವರನ್ನು ರಕ್ಷಣೆ ಮಾಡಲು ಈ ಬೈಕ್ ಸಹಾರಿಯಾಗಿದೆ ಎಂದರು.



ಮಹಿಳೆಯರು, ಮಕ್ಕಳು ಸೇರಿದಂತೆ ಅಪರಾಧ ತಡೆಯಲು ಸಜ್ಜುಗೊಂಡಿರುವ ಬೈಕ್‌ಗಳು.


ಮಂಡ್ಯ ಜಿಲ್ಲಾ ಪೊಲೀಸ್ ವತಿಯಿಂದ 40 ದ್ವಿಚಕ್ರ ಗಸ್ತು ವಾಹನಗಳು ಜಿಲ್ಲೆಯ 7 ತಾಲೂಕು ಕೇಂದ್ರಗಳಲ್ಲಿ ಮಹಿಳೆಯರ ರಕ್ಷಣೆ ಹಾಗೂ ಅಪರಾಧ ತಡೆ ಸಂಬಂಧ ಕಾರ್ಯ ನಿರ್ವಹಿಸಲಿವೆ.

ಶಾಲಾ ಕಾಲೇಜುಗಳ ಪ್ರಾರಂಭ ಮತ್ತು ಮುಕ್ತಾಯದ ಸಮಯದಲ್ಲಿ ವಿದ್ಯಾರ್ಥಿನಿಯರಿಗೆ ಯಾವುದೇ ಕಿರುಕುಳ/ಲೈಂಗಿಕ ಕಿರುಕುಳ ಹಾಗೂ ಚುಡಾಯಿಸುವ ಘಟನೆಗಳು ನಡೆಯದಂತೆ ಶಾಲಾ ಕಾಲೇಜು ವ್ಯಾಪ್ತಿಯಲ್ಲಿ ಗಸ್ತು ಮಾಡಿ ರಕ್ಷಣೆ ನೀಡುತ್ತದೆ.

ಹಬ್ಬ–ಹರಿದಿನಗಳಲ್ಲಿ, ಜಾತ್ರೆ, ದೇವಸ್ಥಾನ, ಮಸೀದಿ, ಚರ್ಚ್‌ಗಳಂತಹ ಪ್ರದೇಶಗಳಲ್ಲಿ ಜನಸಂದಣಿ ಸಮಯದಲ್ಲಿ ಹೆಚ್ಚು ಗಸ್ತು ಮಾಡಿ ಮಹಿಳೆಯರ ಮತ್ತು ಮಕ್ಕಳ ರಕ್ಷಣೆ ಮಾಡುವುದು. ಸಾರ್ವಜನಿಕರು, ಮಹಿಳೆಯರು ತಮ್ಮ ದೂರುಗಳಿದ್ದಲ್ಲಿ ಮಂಡ್ಯ ಜಿಲ್ಲೆಯ ನಿಸ್ತಂತು ಕೇಂದ್ರದ ದೂ.ಸಂ: 08232–224888 ಗೆ ಅಥವಾ 112 ಗೆ ಕರೆ ಮಾಡಿ ಮಾಹಿತಿ ತಿಳಿಸಿದ್ದಲ್ಲಿ, ಮಾಂಡ್ಯ ರಕ್ಷಣೆಯ ವಾಹನ ಹಾಗೂ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಧಾವಿಸಿ ನೆರವು ನೀಡಲಿದ್ದಾರೆ.

ಕಾರ್ಯಕ್ರಮದಲ್ಲಿ ಮೈಸೂರು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಅಧ್ಯಕ್ಷ ಹಾಗೂ ಶ್ರೀರಂಗಪಟ್ಟಣ ಶಾಸಕ ಎ.ಬಿ ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಶೇಕ್ ತನ್ವಿರ್ ಆಸೀಫ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಆ.20ರಂದು ಅರಸು ಜನ್ಮ ದಿನಾಚರಣೆ



ಮಂಡ್ಯ: ಡಿ ದೇವರಾಜ ಅರಸುರವರ 109ನೇ ಜನ್ಮ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಆ.20 ರಂದು ಡಾ ಬಿ ಆರ್ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಜಿಲ್ಲೆಯ ಸಾರ್ವಜನಿಕರು, ಎಲ್ಲಾ ಸಂಘ ಸಂಸ್ಥೆಗಳ ಸಮುದಾಯದ ಅಧ್ಯಕ್ಷರುಗಳು ಹಾಗೂ ಮುಖಂಡರುಗಳು ಭಾಗವಹಿಸಿ ಕಾರ್ಯಕ್ರಮವು ಯಶಸ್ವಿಯಾಗಲು ಸಹಕರಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08232–220835 ಅನ್ನು ಸಂಪರ್ಕಿಸಬಹುದು ಎಂದು ಮಂಡ್ಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೇತ್ರದಾನ ಮಾಡುವ ಮೂಲಕ ಸಾವಿನಲ್ಲೂ ಸಾರ್ಥಕತೆ



ಮೈಸೂರು, ಆ.13– ನೇತ್ರದಾನ ಮಾಡುವ ಮೂಲಕ ವ್ಯಕ್ತಿಯೊಬ್ಬರು ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ. ಮೈಸೂರಿನ ವಿದ್ಯಾರಣ್ಯಪುರಂ ಅಂದಾನಿ ಸರ್ಕಲ್ ನಿವಾಸಿ ಟಿ.ಜಿ.ಶ್ರೀನಿವಾಸಮೂರ್ತಿ(65) ಹೃದಯಾಘಾತದಿಂದ ಸೋಮವಾರ ಮೃತರಾದರು.

ಅಂಧರಿಗೆ ಬೆಳಕಾಗಬೇಕು ಎಂಬ ಉದ್ದೇಶದಿಂದ ಇವರ ಕುಟುಂಬದವರು ಮೈಸೂರು ಕೆ.ಆರ್.ಆಸ್ಪತ್ರೆಗೆ ನೇತ್ರಗಳನ್ನು ದಾನ ಮಾಡಿದರು. ರೈಲ್ವೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಮೃತರು ಸರಳ ವ್ಯಕ್ತಿತ್ವದಿಂದ ಚಿರಪರಿಚಿತರಾಗಿದ್ದರು.

ಮೃತರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಮೃತರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ಹಿಂದೂ ರುದ್ರಭೂಮಿಯಲ್ಲಿ ಸೋಮವಾರ ಸಂಜೆ ನೆರವೇರಿತು.

ಶಿವಲಿಂಗೇಗೌಡ ನಿಧನ



ಕೆ.ಆರ್.ಪೇಟೆ: ತಾಲೂಕಿನ ಹೆಗ್ಗಡಹಳ್ಳಿ ಗ್ರಾಮದ ಶಿವಲಿಂಗೇಗೌಡ(70) ನಿಧನ ಹೊಂದಿದ್ದಾರೆ.

ಮೃತರು ಪತ್ನಿ ತಾಯಮ್ಮ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮಂಗಳವಾರ ಮಧ್ಯಾಹ್ನ ನಡೆಯಿತು. ಶಿವಲಿಂಗೇಗೌಡರ ನಿಧನಕ್ಕೆ ತಾಲೂಕಿನ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸೊಳ್ಳೆಗಳ ನಿಯಂತ್ರಣಕ್ಕೆ ಲಾರ್ವಾ, ಗಪ್ಪಿ, ಗ್ಯಾಂಬೂಸಿಯ ಮೀನುಗಳ ಬಳಕೆ

ಶ್ರೀರಂಗಪಟ್ಟಣ, ಆ.13– ಡೆಂಗ್ಯೂ, ಚಿಕೂನ್ ಗುನ್ಯಾ, ಮಲೇರಿಯಾ ಮುಂತಾದ ರೋಗಗಳಿಗೆ ಕಾರಣವಾಗುವ ಸೊಳ್ಳೆಗಳ ಹರಡುವಿಕೆ ಮತ್ತು ಸೊಳ್ಳೆ ಉತ್ಪತ್ತಿ ತಡೆಯಲು ಲಾರ್ವಾ, ಗಪ್ಪಿ, ಗ್ಯಾಂಬೂಸಿಯ ಮೀನುಗಳನ್ನು ಬಳಸಲು ಆರೋಗ್ಯ ಇಲಾಖೆ ಮುಂದಾಗಿದೆ ಎಂದು ಪ್ರಭಾರಿ ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ಟಿ. ಮಂಜುನಾಥ್ ಹೇಳಿದರು.

ತಾಲೂಕಿನ ತಡಗವಾಡಿ ಗ್ರಾಮದ ಕಲ್ಯಾಣಿಯಲ್ಲಿ ಗಪ್ಪಿ, ಗ್ಯಾಂಬೂಸಿಯಾ ಮೀನುಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ನಿರಂತರವಾಗಿ ನೀರು ನಿಲ್ಲುವ ಕೆರೆ, ಕುಂಟೆ, ಬಾವಿ, ಕಲ್ಯಾಣಿ, ಕ್ವಾರಿ ಮುಂತಾದ ಶಾಶ್ವತ ನೀರಿನ ತಾಣಗಳಲ್ಲಿ ಈ ಮೀನುಗಳನ್ನು ಬಿಡಲಾಗುವುದು. ಸಾರ್ವಜನಿಕರ ಆರೋಗ್ಯದ ಮೇಲೆ ಪ್ರಭಾವ ಬೀರುವ ಸೊಳ್ಳೆಗಳ ನಿಯಂತ್ರಿಸಲು ಇದು ಸಹಕಾರಿಯಾಗಲಿದೆ. ಇದರಿಂದ ಸೊಳ್ಳೆಗಳ ಉತ್ಪತ್ತಿ ತಡೆಗಟ್ಟಬಹುದಾಗಿದೆ ಎಂದ ಅವರು, ಈಗಾಗಲೇ ತಾಲೂಕಿನ ಮಹದೇವಪುರ, ಕೆ.ಆರ್. ಸಾಗರ, ಪಾಲಹಳ್ಳಿ, ಬೆಳಗೊಳ, ಕೆ.ಶೆಟ್ಟಹಳ್ಳಿ, ಟಿ.ಎಂ. ಹೊಸೂರ್, ಸಾರ್ವಜನಿಕ ಆಸ್ಪತ್ರೆ ಶ್ರೀರಂಗಪಟ್ಟಣ, ಸಮುದಾಯ ಆರೋಗ್ಯ ಕೇಂದ್ರ, ಅರಕೆರೆ ಆರೋಗ್ಯ ಕೇಂದ್ರಗಳ ಆವರಣದಲ್ಲಿಯೇ ತೊಟ್ಟಿ ನಿರ್ಮಿಸಿ ಗಪ್ಪಿ, ಗ್ಯಾಂಬೂಸಿಯ ಮೀನುಗಳನ್ನು ಪೋಷಿಸಲಾಗುತ್ತಿದೆ. ಸೊಳ್ಳೆಗಳ ಮರಿಗಳೆ ಈ ಮೀನುಗಳಿಗೆ ಆಹಾರವಾಗಿದ್ದು ಇದರಿಂದ ಸೊಳ್ಳೆಗಳನ್ನು ನಿಯಂತ್ರಿಸಬಹುದಾಗಿದೆ. ಹಾಗಾಗಿ ರೈತಾಪಿ ಜನರು ತಮ್ಮ ಕೃಷಿ ಹೊಂಡದಲ್ಲಿ ಈ ಮೀನು ಬಳಕೆ ಮಾಡಬಹುದಾಗಿದೆ ಎಂದು ಹೇಳಿದರು.



ತಡಗವಾಡಿ ಕಲ್ಯಾಣಿಯಲ್ಲಿ ಗಪ್ಪಿ ಗ್ಯಾಂಬೂಸಿಯಾ ಮೀನುಗಳನ್ನು ಬಿಡುಗಡೆ ಗೊಳಿಸಿದರು.

ಈ ದಿನ ತಡಗವಾಡಿ ಕಲ್ಯಾಣಿ, ಬಳ್ಳೇಕೆರೆ, ಹಂಗರಹಳ್ಳಿ ಕ್ವಾರಿ ಮುಂತಾದ ಕಡೆಗಳಲ್ಲಿ ಮೀನುಗಳನ್ನು ಬಿಡಲಾಗುವುದೆಂದು ಹೇಳಿದರು. ಈ ಸಂದರ್ಭದಲ್ಲಿ ತಡಗವಾಡಿ ಗ್ರಾಪಂ ಉಪಾಧ್ಯಕ್ಷ ರಘು, ಮುಖಂಡರಾದ ಬಳ್ಳಾರಿಗೌಡ, ಆನಂದ, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಎಸ್.ಡಿ ಬೆನ್ನೂರ, ಸಮುದಾಯ ಆರೋಗ್ಯ ಅಧಿಕಾರಿ ನವೀನ್ ಕುಮಾರ,ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಎನ್.ಕೃಷ್ಣೇಗೌಡ ಇತರರು ಇದ್ದರು.

ಪುಟ್ಟರಾಜುಗೆ 'ಜೀವನದಿ' ರಾಷ್ಟ್ರೀಯ ಪ್ರಶಸ್ತಿ ಪ್ರದಾನ

ಬದ್ಧತೆಯಿಂದ ಕೆಲಸ ಮಾಡಿ ಜಲಚಿಹ್ನೆ ನಿರ್ಮಿಸಿರುವ ವ್ಯಕ್ತಿ ಪುಟ್ಟರಾಜು



ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಪತ್ನಿ ನಾಗಮ್ಮಪುಟ್ಟರಾಜು ಅವರಿಗೆ ಮಠದ ವತಿಯಿಂದ ನೀಡುವ ಮರಿದೇವರು ಶಿವಯೋಗಿ 'ಜೀವನದಿ' ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಚಿನಕುರಳಿ,ಆ.13– ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರು ಹೃದಯ ಶ್ರೀಮಂತಿಕೆಯುಳ್ಳ ವ್ಯಕ್ತಿ, ಸಮಾಜದ ಒಳಿತಿಗಾಗಿ ಬದ್ಧತೆಯಿಂದ ಕೆಲಸ ಮಾಡುವ ಮೂಲಕ ಕ್ಷೇತ್ರದಲ್ಲಿ ಜಲಚಿಹ್ನೆ ನಿರ್ಮಿಸಿದ್ದಾರೆ ಎಂದು ವಾಗ್ಮಿ ಪ್ರೊ.ಎಂ.ಕೃಷ್ಣೇಗೌಡ ಬಣ್ಣಿಸಿದರು.

ಬೇಬಿಗ್ರಾಮದ ದುರ್ದಂಡೇಶ್ವರ ಮಠದ ವತಿಯಿಂದ ಮಂಗಳವಾರ ನಡೆದ ಲಿಂಗೈಕ್ಯ ಶ್ರೀಮರೀದೇವರುಸ್ವಾಮಿಗಳ 16ನೇ ವರ್ಷದ ಪುಣ್ಯಸ್ಮರಣೆ ಹಾಗೂ 8ನೇ ವರ್ಷದ ಮಹಾರಥೋತ್ಸವ ಮತ್ತು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರಿಗೆ ಮಠದ ವತಿಯಿಂದ ನೀಡಲಾದ ಮಹಾಚೇತನ ಶ್ರೀ ಮರಿದೇವರು ಶಿವಯೋಗಿ 'ಜೀವನದಿ' ರಾಷ್ಟ್ರೀಯ ಪ್ರಶಸ್ತಿ ಪುರಸ್ಕಾರ ನೀಡಿದ ಬಳಿಕ ಅಭಿನಂದನೆ ಭಾಷಣ ಮಾಡಿದರು.

ಪುಟ್ಟರಾಜು ಅವರದು ನನ್ನದು ರಾಜಕೀಯ ಹೊರತಾದ ಹೃದಯ ಸಂಬಂಧ, ಅವರು ವೈಯಕ್ತಿಕವಾಗಿ ನನ್ನ ಬಹಳ ಪ್ರಿಯವಾದ ವ್ಯಕ್ತಿ. ನನ್ನಂತಹವರು ಯಾವ ರಾಜಕಾರಣಿಗಳನ್ನು ಯಾವುದೇ ಭಿನ್ನಾಭಿಪ್ರಾಯ ಇಲ್ಲದೆ ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ಆದರೆ, ಪುಟ್ಟರಾಜು ಅವರನ್ನು ಒಪ್ಪಿಕೊಳ್ಳುತ್ತೇನೆ ಎಂದರು.

ಒಬ್ಬ ಶಾಸಕ, ಮಂತ್ರಿ ಆಗೋಕೆ ಒಂದು ಪಕ್ಷ ಇದ್ದರೆ ಸಾಕು. ಅದೇ ಒಬ್ಬ ನಾಯಕನಾಗಿ ಬೆಳೆಯೋಕೆ ಅಂತರ್ಯ, ಗಟ್ಟಿತನ, ತಾಕತ್, ಬದ್ಧತೆ ಬೇಕು, ಪುಟ್ಟರಾಜು ಗಟ್ಟಿತನ, ತಾಕತ್, ಬದ್ಧತೆಯಿಂದ ಲೀಡರ್ ಆಗಿ ಬೆಳೆದಿದ್ದಾರೆ. ಎಂಎಲ್‌ಎ, ಮಂತ್ರಿಗಳು ಮಾಜಿ ಆಗಬಹುದು. ಒಬ್ಬ ನಾಯಕ ಎಂದಿಗೂ ಮಾಜಿ ನಾಯಕನಾಗೋಕೆ ಸಾಧ್ಯವಿಲ್ಲ. ಪುಟ್ಟರಾಜು ಅವರು ಮಾಜಿ ಮಂತ್ರಿ ಆಗಿರಬಹುದು ಆದರೆ ಮಾಜಿ ನಾಯಕನಲ್ಲ ಎಂದು ಬಣ್ಣಿಸಿದರು.

ನಾನು ಯಾವುದೇ ದೇಶಕ್ಕೆ ಹೋದರು ಅಲ್ಲಿ ಪುಟ್ಟರಾಜು ಅವರಿಗೆ ಸ್ನೇಹಿತರಿದ್ದಾರೆ. ಅಮೇರಿಕದಲ್ಲಿ ಸಾಕಷ್ಟು ಭಾರತೀಯರು ರಾಜಕೀಯಕ್ಕೆ ಬಂದಿದ್ದಾರೆ. ಹಾಗಾಗಿ ಪುಟ್ಟರಾಜು ಅವರಿಗೆ ಒಂದು ಸಲಹೆ ಕೊಡೋಣ ಎಂದಿದ್ದೇನೆ. ಪುಟ್ಟರಾಜು ಅವರನ್ನು ಅಮೇರಿಕದಲ್ಲಿ ಚುನಾವಣೆಗೆ ನಿಲ್ಲಿಸಿಬಿಡೋಣ ಎಂದಿದ್ದೇನೆ ಅವಾಗ ಸರಿಹೋಗುತ್ತದೆ ಅಮೇರಿಕದಿಂದ ಬಂದವರನ್ನು ಇಲ್ಲಿ ಗೆಲ್ಲಿಸೋದು, ಇಲ್ಲಿಂದ ಹೋದವರನ್ನು ಅಮೇರಿಕದಲ್ಲಿ ಗೆಲ್ಲಿಸಿದಂತಾಗುತ್ತದೆ ಎಂದು ತಮಾಷೆ ಮಾಡಿದರು.

ಮಾಜಿ ಸಚಿವ ಪುಟ್ಟರಾಜು ಮಾತನಾಡಿ, ಮರಿದೇವರುಸ್ವಾಮೀಜಿಗಳು ನನ್ನ ಗುರು ಶಿಷ್ಯ ಸಂಬಂಧ, 2004ರಲ್ಲಿ ಮೊದಲ ಬಾರಿಗೆ ಶಾಸಕನಾದ ಸಂದರ್ಭದಲ್ಲಿ ಶ್ರೀಗಳು ಆಶೀರ್ವಾದ ಮಾಡಿ ಮೊದಲ ಬಾರಿಗೆ ಬಂದು ನನಗೆ ಮತಚಲಾಯಿಸಿದ ಫಲವಾಗಿ ನಾನು ಶಾಸಕನಾದೆ, ಇದೀಗ ನಾನು ಸೋತಿರಬಹುದು ಆದರೆ ಶ್ರೀಗಳ ಆಶೀರ್ವಾದ ನನ್ನ ಮೇಲೆ ಸದಾ ಇರುತ್ತದೆ. ಜೀವನದಿ ಪುರಸ್ಕಾರದೊಂದಿಗೆ ನೀಡಿರುವ 50 ಸಾವಿರ ಹಣದ ಜತೆಗೆ ನನ್ನ ತಂದೆ–ತಾಯಿ ಹೆಸರಿನಲ್ಲಿ 50 ಸಾವಿರ ಸೇರಿಸಿ ಬೇಬಿಗ್ರಾಮದ ಡಿಎಂಎಸ್ ಶಾಲೆಯ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಒಂದು ಲಕ್ಷ ನೀಡಲಾಗುವುದು ಎಂದರು.

ಚಿತ್ರನಟಿ ತಾರಾ, ವಿರಕ್ತಮಠದ ಗೌರಿಶಂಕರ ಸ್ವಾಮೀಜಿ, ಪಾಂಡೋಮಟ್ಟಿ ಮಠದ ಡಾ.ಶ್ರೀ ಗುರುಬಸವಸ್ವಾಮೀಜಿ, ಗವಿಮಠದ ಮಲ್ಲಿಕಾರ್ಜುನಸ್ವಾಮಿ, ಕೆಆರ್‌ಐಡಿಎಲ್ ಮಾಜಿ ಅಧ್ಯಕ್ಷ ಎಂ.ರುದ್ರೇಶ್ ಮಾತನಾಡಿದರು.

ಇದೇ ವೇಳೆ ಮಾಜಿ ಸಚಿವ ಪುಟ್ಟರಾಜು, ಪತ್ನಿ ನಾಗಮ್ಮ ಪುಟ್ಟರಾಜು ಅವರಿಗೆ ಮಠದ ವತಿಯಿಂದ ನೀಡುವ ಮರಿದೇವರು ಶಿವಯೋಗಿ 'ಜೀವನದಿ' ರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಡಿಎಂಎಸ್ ಶಾಲೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಶ್ರೀಮರೀದೇವರು ಶ್ರೀಗಳ ರಥೋತ್ಸವ ನಡೆಯಿತು. ಭಕ್ತರು ರಥ ಎಳೆದು ಪುನೀತರಾದರು.

ಸಮಾರಂಭದಲ್ಲಿ ಮೈಶುಗರ್ ಮಾಜಿ ನಾಗರಾಜಪ್ಪ, ಜಿಪಂ ಮಾಜಿ ಸದಸ್ಯರಾದ ಸಿ.ಅಶೋಕ್, ಎಚ್.ಮಂಜುನಾಥ್, ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಎಸ್. ಆನಂದ, ತಾಲೂಕು ಅಧ್ಯಕ್ಷ ಶಿವಕುಮಾರ್, ಜೆಡಿಎಸ್ ತಾಲೂಕು ಅಧ್ಯಕ್ಷಎಸ್.ಎಮಲ್ಲೇಶ್, ಎಸ್.ಟಿ.ನಾಗಣ್ಣ, ಉದ್ಯಮಿ ನಾಗೇಶ್, ಡೈರಿ ಅಧ್ಯಕ್ಷ ಶಿವಕುಮಾರ್, ಗ್ರಾಪಂ ಅಧ್ಯಕ್ಷೆ ಪುಟ್ಟಲಿಂಗಮ್ಮ, ಸಿದ್ದರಾಜು, ಮಂಗಳಮ್ಮ ಶಾಂತಮ್ಮ, ಮಠದ ಕಾರ್ಯದರ್ಶಿ ಟಿ.ಪಿ.ಶಿವಕುಮಾರ್ ಸೇರಿದಂತೆ ಅನೇಕ ಗಣ್ಯರು ಹಾಜರಿದ್ದರು.

ಒಂದನೇ ಪುಟದಿಂದ

ರಾಜ್ಯ ರಾಜಕಾರಣಕ್ಕೆ ಪಾದಾರ್ಪಣೆ ಮಾಡುವೆ

ಕ್ಷೇತ್ರದಲ್ಲಿ ಹಿಂದುಳಿದ ವರ್ಗದವರಿಗೆ ಟಿಕೆಟ್ ಕೊಡುತ್ತೇವೆ ಎಂದರಲ್ಲಾ, ಅದೇ ಲಿಂಗಾಯಿತರು ಹೆಚ್ಚಿರುವ ದಾವಣಗೆರೆ, ಬೀದರ್, ಹಾವೇರಿಯಲ್ಲಿ ಹಿಂದುಳಿದವರಿಗೆ ಟಿಕೆಟ್ ನೀಡಲಿಲ್ಲವೇಕೆ, ಈಡಿಗರು ಹಾಗೂ ಮುಸ್ಲಿಂ ಹೆಚ್ಚಿರುವ ಶಿವಮೊಗ್ಗದಲ್ಲಿ ಏಕೆ ಲಿಂಗಾಯಿತರಿಗೆ ಟಿಕೆಟ್ ನೀಡಿದರು.

ಟಿಕೆಟ್ ಹಂಚಿಕೆಗೆ ಜಾತಿ ಲೆಕ್ಕಾಚಾರ ಹಾಕುತ್ತಾರೆ, ಆದರೆ ಇಲ್ಲೇಕೆ ಆ ಮಾನದಂಡ ಅನುಸರಿಸಲಿಲ್ಲ ಎಂದ ಪ್ರತಾಪ್ ಸಿಂಹ, ಒಂದಂತೂ ಸ್ಪಷ್ಟ ನನಗೆ ಟಿಕೆಟ್ ತಪ್ಪಿಸಲು ಹಿಂದುಳಿದ ವರ್ಗದವರ ದಾಳ ಉರುಳಿಸಿದರು ಎಂದು ಆರೋಪಿಸಿದರು.

ಲಿಂಗಾಯಿತರಿಗೆ ಟಿಕೆಟ್ ತಪ್ಪಿಸಿದ್ದರೆ ಸ್ವಾಮೀಜಿಗಳನ್ನು ಬೀದಿಯಲ್ಲಿ ಕೂರಿಸಿ ಪ್ರತಿಭಟನೆ ನಡೆಸುತ್ತಿದ್ದರು, ನಾನು ಹಾಗೆ ಮಾಡಿದ್ದೇನಾ ಎಂದು ಮರು ಪ್ರಶ್ನಿಸಿದ ಪ್ರತಾಪ್ ಸಿಂಹ, ಕೇಂದ್ರ ಬಿಜೆಪಿ ಸಂಸದೀಯ ಮಂಡಳಿಯಲ್ಲಿ ಬಿ.ಎಸ್.ಯಡಿಯೂರಪ್ಪ ಇದ್ದರು. ಅವರ ಮಗನೇ ರಾಜ್ಯಾಧ್ಯಕ್ಷ ಅನಂತಕುಮಾರ್ ಅವರಿದ್ದಿದ್ದರೆ ನನಗೆ ಟಿಕೆಟ್ ಕೈತಪ್ಪುತ್ತಿರಲಿಲ್ಲ. ಕೇಂದ್ರ ಸಂಸದೀಯ ಮಂಡಳಿಯಲ್ಲಿದ್ದ ಯಡಿಯೂರಪ್ಪ, ರಾಜ್ಯಾಧ್ಯಕ್ಷರಾಗಿದ್ದ ಅವರ ಪುತ್ರ ವಿಜಯೇಂದ್ರ, ಹಠ ಹಿಡಿದು ಕೆಲವರಿಗೆ ಟಿಕೆಟ್ ಕೊಡಿಸಿದಂತೆ ಪ್ರತಾಪ್ ಸಿಂಹ ಅಭಿವೃದ್ಧಿ ಕೆಲಸ ಮಾಡಿದ್ದಾನೆ. ಜನ ಬೆಂಬಲ ಇದೆ. ಅವನಿಗೆ ಟಿಕೆಟ್ ಕೊಡಿ ಎಂದು ಯಾಕೆ ಹಠ ಹಿಡಿಯಲಿಲ್ಲ ಎಂದು ವಾಗ್ಬಾಣ ಬಿಟ್ಟರು.

ರಾಜಕಾರಣದಲ್ಲಿ ಆಸಕ್ತಿ ಇಲ್ಲ ಎಂದಿದ್ದ ಯದುವೀರ್...: ನನಗೆ ಟಿಕೆಟ್ ಕೈತಪ್ಪಿಸಲು ಹಿಂದುಳಿದ ವರ್ಗದ ಕಾರ್ಡ್ ಪ್ಲೇ ಮಾಡಿದವರು ಯದುವೀರ್ ಹೆಸರನ್ನು ಮುನ್ನೆಲೆಗೆ ತಂದಿದ್ದರು. ಒಂದು ತಿಂಗಳ ಹಿಂದೆಯೇ ಯದವೀರ್ ಹಾಗೂ ಅವರ ತಾಯಿ ಪ್ರಮೋದಾ ದೇವಿ ಒಡೆಯರ್‌ಗೆ ಫೋನ್ ಮಾಡಿ ಚುನಾವಣೆಗೆ ನಿಲ್ಲುತ್ತೀರಾ ಎಂದು ಕೇಳಿದಾಗ ಅವರು ಚುನಾವಣೆಯಲ್ಲಿ ನಿಲ್ಲುವ ಆಸಕ್ತಿ ಇಲ್ಲ ಎಂದು ಹೇಳಿದ್ದರು. ಮತ್ತೊಮ್ಮೆ ನಿಮ್ಮ ಹೆಸರಿಟ್ಟುಕೊಂಡು ಕೆಲವರು ರಾಜಕಾರಣ ಮಾಡುತ್ತಿದ್ದಾರೆ. ಹಾಗೊಂದು ವೇಳೆ ನೀವೇನಾದರೂ ಚುನಾವಣೆಯಲ್ಲಿ ನಿಲ್ಲುವುದಾದರೆ ಹೇಳಿಬಿಡಿ, ನನಗೆ ಅವಮಾನ ಆಗುವುದು ಬೇಡ ಎಂದು ಹೇಳಿದೆ. ಆಗ ಯದುವೀರ್ ಸ್ಪಷ್ಟ ಪ್ರಸ್ತಾವನೆ ಬರಲಿ ನೋಡೋಣ ಎಂದರು. ಆಗ ನಾನು ನೀವು ಸ್ಪರ್ಧಿಸಿದರೆ ನನ್ನ ಮನೆ ಹಾಳಾಗುತ್ತದೆ ಎಂದು ಹೇಳಿದಾಗ ಹಾಗಾಗಲು ಬಿಡುವುದಿಲ್ಲ ಎಂದು ಹೇಳಿದ ಯದುವೀರ್, ಟಿಕೆಟ್ ಸಿಕ್ಕ ನಂತರ ಒಂದು ವರ್ಷದಿಂದ ತಯಾರಿ ನಡೆಸಿದ್ದೇ ಎಂದು ಹೇಳಿದರಲ್ಲಾ, ಇದು ನ್ಯಾಯವೇ? ಎಂದು ಸಿಂಹ ಪ್ರಶ್ನಿಸಿದರು.

ಯದುವೀರ್ ಮಹಾರಾಜ, ನಾನು ಸಾಮಾನ್ಯ ಪ್ರಜೆ. ಮಹಾರಾಜರ ಬಳಿ ಸಾಮಾನ್ಯ ಪ್ರಜೆ ಕೇಳುವುದು ಸಹಜ. ಆದರೆ ಪ್ರಜೆಯ ಸ್ಥಾನವೇ ತನಗೆ ಬೇಕೆಂದು ಮಹಾರಾಜ ಕೇಳಿದರೆ ಏನು ಮಾಡುವುದು? ಬಿಟ್ಟುಬಿಟ್ಟೆ ಎಂದು ಹತಾಶರಾಗಿ ನುಡಿದರು.

ರಾಜಕಾರಣಿಗಳ ಮನೆಯಿಂದಲೇ ನಾಯಕತ್ವ: ಇಂದು ನಾಯಕತ್ವ ಬರುತ್ತಿರುವುದೇ ರಾಜಕಾರಣಿಗಳ ಮನೆಯಿಂದ. ಒಬ್ಬ ರಾಜಕಾರಣಿ ಕಷ್ಟಪಟ್ಟು ಮೇಲೆ ಬಂದು ಮುಖ್ಯಮಂತ್ರಿಯೋ, ಮಂತ್ರಿಯೋ ಯಾವುದಾದರೂ ಸ್ಥಾನ ಪಡೆಯುತ್ತಾರೆ. ಅವರ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸ ದೊರೆಯುತ್ತದೆ. ಅವರ ವಿದ್ಯಾಭ್ಯಾಸಕ್ಕೂ ರಾಜಕಾರಣಕ್ಕೂ ಸಂಬಂಧವೇ ಇರುವುದಿಲ್ಲ. ಅವರ ತಂದೆ ರಾಜಕಾರಣದಲ್ಲಿ ಹೇಗೆ ಬೆಳೆದು ಬಂದರು ಎಂಬುದು ಅವರಿಗೆ ಗೊತ್ತಿರಲ್ಲ. ಆದರೆ ರಾಜಕಾರಣಿಗಳು ತಮ್ಮ ಮಕ್ಕಳನ್ನೇ ಅಧಿಕಾರಕ್ಕೆ ತರುತ್ತಾರೆ. ವೈದ್ಯರ ಮಗ ವೈದ್ಯನಾಗಬೇಕಾಗದರೆ ಎಂಬಿಬಿಎಸ್ ಮಾಡಿರಬೇಕು. ಇಂಜಿನಿಯರ್ ಮಗ ಇಂಜಿನಿಯರ್ ಆಗಬೇಕಾದರೆ ಇಂಜಿನಿಯರಿಂಗ್ ಮಾಡಿರಬೇಕು. ನಟನ ಮಗ ಸಿನಿಮಾ ಕ್ಷೇತ್ರದಲ್ಲಿ ಯಶಸ್ವಿಯಾಗಬೇಕಾದರೆ ಅವನಿಗೆ ಅಂತಹ ಒಂದು ಪ್ರತಿಭೆ ಇರಬೇಕು. ಕ್ರೀಡಾ ಕ್ಷೇತ್ರದಲ್ಲಿ ಅಪ್ಪನಂತೆ ಮಗ ಮಿಂಚಬೇಕಾದರೆ ಕ್ರೀಡಾ ಕೌಶಲ್ಯವಿರಬೇಕು. ಆದರೆ ರಾಜಕಾರಣದಲ್ಲಿ ಅದ್ಯಾವುದೂ ಬೇಕಿಲ್ಲ. ಸಿದ್ದರಾಮಯ್ಯನವರಾಗಲೀ, ಯಡಿಯೂರಪ್ಪನವರಾಗಲೀ ಕಷ್ಟಪಟ್ಟು ಎಲ್ಲಾ ಜಾತಿ ಜನಾಂಗದವರ ವಿಶ್ವಾಸ ಗಳಿಸಿ, ಜನರ ಕಷ್ಟ–ಸುಖಗಳಿಗೆ ಸ್ಪಂದಿಸಿ ಅಧಿಕಾರಕ್ಕೆ ಬಂದಿದ್ದಾರೆ. ಆದರೆ ಅವರ ಮಕ್ಕಳಿಗೆ ತಮ್ಮ ಅಪ್ಪಂದಿರಂತೆ ಜನರ ಕಷ್ಟ–ಸುಖ ಗೊತ್ತಿದೆಯೇ? ಸಂಘಟನೆ ಬಗ್ಗೆ ಗೊತ್ತಿದೆಯೇ? ಎಂದು ಕೇಳಿದ ಪ್ರತಾಪ್ ಸಿಂಹ, ಕಲ್ಬುರ್ಗಿಯಲ್ಲಿ ಬಹಳಷ್ಟು ಹಿರಿಯರಿದ್ದರೂ ಮಲ್ಲಿಕಾರ್ಜುನ ಖರ್ಗೆ ತಮ್ಮ ಪುತ್ರ ಪ್ರಿಯಾಂಕ್ ಖರ್ಗೆಯನ್ನು ಸಚಿವರಾಗಿ ಮಾಡಿದರು, ಯಡಿಯೂರಪ್ಪ ತಮ್ಮ ಮಕ್ಕಳಿಗೆ ಅಧಿಕಾರ ಕೊಡಿಸಿದ್ದಾರೆ. ಸಿದ್ದರಾಮಯ್ಯ ಮಗ ಡಾ. ಯತೀಂದ್ರನನ್ನು ವಿಧಾನಪರಿಷತ್ ಸದಸ್ಯರಾಗಿ ಮಾಡಿದ್ದು, ಮುಂದೆ ಮಂತ್ರಿ ಮಾಡುತ್ತಾರೆ, ತಮ್ಮ ಪುತ್ರ ಚುನಾವಣೆಯಲ್ಲಿ ಎರಡು ಬಾರಿ ಸೋತಿದ್ದರೂ ಹೆಚ್.ಡಿ.ಕುಮಾರಸ್ವಾಮಿ ನಿಖಿಲ್‌ಗೆ ರಾಜಕೀಯ ಸ್ಥಾನಮಾನ ನೀಡಿದ್ದಾರೆ. ಹೀಗೆ ದೇಶಾದ್ಯಂತ ರಾಜಕಾರಣಿಗಳು ತಮ್ಮ ಮಕ್ಕಳನ್ನು ರಾಜಕಾರಣದಲ್ಲಿ ತಮ್ಮ ವಾರಸುದಾರರಾಗಿ ಬೆಳೆಸಿದ್ದಾರೆ, ಬೆಳೆಸುತ್ತಲೂ ಇದ್ದಾರೆ. ಇಲ್ಲಿ ನಮ್ಮ ಜನರು ಮಂಗ್ಯಾಗಳಾಗುತ್ತಿದ್ದಾರೆ. ರಾಜಕಾರಣದಲ್ಲಿ ಮಕ್ಕಳ ಬೆಳೆಸುವ ಅಪ್ಪಂದಿರು ಇರುವವರೆಗೂ ಕಂಡವರ ಮಕ್ಕಳಿಗೆ ಭವಿಷ್ಯವಿಲ್ಲ. ಜನರು ಮೊದಲು ಬುದ್ಧಿ ಕಲಿಯಬೇಕು. ಎಲ್ಲಿ ತನಕ ಜಾತಿಯ ಭಾವದಿಂದ ನೋಡುತ್ತಾರೊ ಅಲ್ಲಿ ತನಕ ರಾಜಕಾರಣಿಗಳು ಜನರನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ಈ ಮೂಲಕ ತಮ್ಮ ಮಕ್ಕಳಿಗೆ ರಾಜಕೀಯ ನಾಯಕತ್ವ ನೀಡುತ್ತಾರೆಯೇ ಹೊರತು, ಜನ ಸಾಮಾನ್ಯರಿಗೆ ಏನು ಮಾಡುವುದಿಲ್ಲ ಎಂದರು.

ಸಂಘ ನನಗೆ ರಕ್ತಗತವಾಗಿದೆ: ನಮ್ಮ ತಂದೆ 1968ರಲ್ಲಿ ಜನಸಂಘದ ಗುರುತಿನಲ್ಲಿ ಗೆದ್ದು ಗ್ರಾಮ ಪಂಚಾಯ್ತಿ ಛೇರ್ಮನ್ ಆದರು. 10 ವರ್ಷ ಅವರು ಛೇರ್ಮನ್ ಆಗಿದ್ದರು. ಹಾಸನ ಜಿಲ್ಲೆಯಲ್ಲಿ ಜನ ಸಂಘದಿಂದ ಛೇರ್ಮನ್ ಆದ ಮೊದಲಿಗರು ಅವರು. ನನಗೆ ಸಂಘ ಚಟುವಟಿಕೆ ರಕ್ತಗತವಾಗಿದೆ. ನಾನೂ ಕೂಡ ತಂದೆಯನ್ನು ಅನುಸರಿಸಿ ಸಂಘದ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡಿದ್ದೇನೆ. 2008ರಲ್ಲಿ ಮೋದಿಯವರ ಆತ್ಮ ಚರಿತ್ರೆ ಬರೆದಿದ್ದೇನೆ. ನನಗೆ ಮೊಟ್ಟ ಮೊದಲ ಬಾರಿಗೆ ಟಿಕೆಟ್ ಕೊಟ್ಟು ಸಂಸದನಾಗಲು ಸಹಕರಿಸಿದ್ದು ಆರ್‌ಎಸ್‌ಎಸ್ ಹೊರತು ಬಿಜೆಪಿಯಲ್ಲ. ಆರ್‌ಎಸ್‌ಎಸ್ ತತ್ವ ಸಿದ್ಧಾಂತವನ್ನು ನಾನು ಬಿಡುವುದಿಲ್ಲ. ಆರ್‌ಎಸ್‌ಎಸ್ ನನ್ನನ್ನು ಕೈಹಿಡಿದು ಬೆಳೆಸಿದೆ. ಕೊಡಗು–ಮೈಸೂರು ಕ್ಷೇತ್ರದಲ್ಲಿ ನನಗೆ ಟಿಕೆಟ್ ತಪ್ಪಿದೆ ಎಂದಾಗ ಬೇರೆ ಪಕ್ಷದ ಉನ್ನತ ಮಟ್ಟದ ನಾಯಕರೇ ನನಗೆ ಆಹ್ವಾನ ನೀಡಿದ್ದರು. ನಾನು ಆ ಪಕ್ಷದಿಂದ ಸ್ಪರ್ಧಿಸಿದ್ದರೆ ಪ್ರತಿಸ್ಪರ್ಧಿ ಯಾರೇ ಆಗಿದ್ದರೂ ಸೋಲಿಸುತ್ತಿದ್ದೆ. ಆದರೆ ತತ್ವ ಸಿದ್ಧಾಂತವನ್ನು ಬಿಟ್ಟು ಹೋಗಲಿಲ್ಲ. ಅಧಿಕಾರ ನನಗೆ ಮುಖ್ಯವಲ್ಲ. ತತ್ವ ಸಿದ್ಧಾಂತವೇ ಮುಖ್ಯ. ಹಿಂದುತ್ವಕ್ಕಾಗಿ ಹೋರಾಟ ಮಾಡುವವರ ಜೊತೆ ಇರುತ್ತೇನೆ ಎಂದು ಪ್ರತಾಪ್ ಸಿಂಹ ಹೇಳಿದರು.

ರಾಜ್ಯ ಸರ್ಕಾರ ಸಹಕರಿಸುತ್ತಿಲ್ಲ

ಇಲಾಖೆಗೆ ಸೇರಿದ್ದು, ಅದನ್ನು ಸ್ವಾಧೀನಪಡಿಸಿಕೊಳ್ಳುವಂತೆ ಇಲ್ಲಿನ ಇಲಾಖಾ ಕಾರ್ಯದರ್ಶಿಗಳು ಪತ್ರ ಬರೆದಿದ್ದಾರೆ. ನಾನು ಈ ಕಾರ್ಖಾನೆಗೆ ಭೇಟಿ ಕೊಟ್ಟೆ ಎಂಬ ಒಂದೇ ಕಾರಣಕ್ಕೆ ತನ್ನದಲ್ಲದ ಭೂಮಿಯನ್ನು ತನ್ನದೆಂದು ತಗಾದೆ ತೆಗೆದು ರಾಜ್ಯ ಸರ್ಕಾರ ಖಾಸಗಿಯವರಿಗೆ ನೀಡಲು ಹೊರಟಿದೆ. ಎಚ್‌ಎಂಟಿ ಭೂಮಿ ವಿಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಈಗಾಗಲೇ ರಾಜ್ಯ ಸರ್ಕಾರಕ್ಕೆ ಕಪಾಳಮೋಕ್ಷ ಮಾಡಿದೆ, ಆದರೂ ಇವರು ಮತ್ತೆ ಈ ವಿಷಯದಲ್ಲಿ ಕೈಹಾಕುತ್ತಿದ್ದಾರೆ, ಕಾರ್ಖಾನೆ ವಿಚಾರ ನ್ಯಾಯಾಲಯದ ಮೆಟ್ಟಿಲು ಹತ್ತಲಿದೆ ಎಂದರು. ನಾನು ಕೇಂದ್ರದಲ್ಲಿ ಮಂತ್ರಿಯಾದ ಮೇಲೆ ಕೆಲಸ ನಿರ್ವಹಣೆ ಮಾಡಲು ಬಿಡದೆ ರಾಜ್ಯ ಸರ್ಕಾರ ಯಾವ ರೀತಿ ನಡೆದು ಕೊಳ್ಳುತ್ತಿದೆ ಎಂಬುದಕ್ಕೆ ಇದು ಉದಾಹರಣೆ. ಇವರು ಏನೇ ಅಸಹಕಾರ ತೋರಲಿ, ಪ್ರಧಾನಿ ಅವರ ಸಹಕಾರದಿಂದ ಕೇಂದ್ರ ಸ್ವಾಮ್ಯದ ಕೈಗಾರಿಕೆಗಳ ಅಭಿವೃದ್ಧಿ ಜೊತೆಗೆ ಉದ್ಯೋಗ ಸೃಷ್ಟಿಗೆ ಒತ್ತು ಕೊಡುವುದಾಗಿ ತಿಳಿಸಿದರು.

ಆ.28, ಬೆಂಗಳೂರಲ್ಲಿ 'ಕಾಂಗ್ರೆಸ್ ಹಟಾವೋ, ದಲಿತ್ ಬಚಾವೋ' ಸಮಾವೇಶ

ಮೈಸೂರು, ಆ.13(ಜಿಎ)–ಸಂವಿಧಾನ ಪರ, ಸಂವಿಧಾನ ರಕ್ಷಕ ಎಂದು ಹೇಳಿಕೊಂಡು ಅಧಿಕಾರಕ್ಕೆ ಬಂದ ಸಿಎಂ ಸಿದ್ದರಾಮಯ್ಯ ಅವರ ನೇತೃತ್ವದ ರಾಜ್ಯ ಸರ್ಕಾರ ಸಂವಿಧಾನದ ಯಾವುದೇ ಆಶಯಗಳನ್ನೂ ಪಾಲಿಸುತ್ತಿಲ್ಲ. ಹೀಗಾಗಿ ಆ.28ರಂದು ಬೆಳಗ್ಗೆ 11 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ 'ಕಾಂಗ್ರೆಸ್ ಹಟಾವೋ, ದಲಿತ್ ಬಚಾವೋ' ಎಂಬ ಪ್ರತಿಭಟನಾ ಸಮಾವೇಶವನ್ನು ಕರ್ನಾಟಕ ಅಹಿಂದ ಸಂಘಟನೆಗಳ ಒಕ್ಕೂಟದ ವತಿಯಿಂದ ಆಯೋಜಿಸಲಾಗಿದೆ ಎಂದು ಹೋರಾಟಗಾರ ಹರಿರಾಂ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ದಲಿತರಿಗೆ ಯಾವುದೇ ರಕ್ಷಣೆ ಇಲ್ಲವಾಗಿದೆ. ದಲಿತರಿಗೆ ಮೀಸಲಾದ ಎಸ್‌ಸಿಎಸ್‌ಪಿ, ಟಿಎಸ್‌ಪಿ ಯೋಜನೆಯ ಸುಮಾರು 26 ಸಾವಿರ ಕೋಟಿ ರೂ.ಗಳನ್ನು ಸರ್ಕಾರ ತನ್ನ ಗ್ಯಾರಂಟಿ ಯೋಜನೆಗೆ ಬಳಸಿ, ಈ ಸಮುದಾಯಗಳನ್ನು ವಂಚಿಸಿದೆ ಎಂದು ಕಿಡಿಕಾರಿದರು.

ದಲಿತ ವಿದ್ಯಾರ್ಥಿಗಳು ವಿದೇಶಿ ವಿವಿಗಳಲ್ಲಿ ಪಿಎಚ್.ಡಿ ಮಾಡಲು ಅನುಕೂಲವಾಗಿದ್ದ ಪ್ರಬುದ್ಧ ಯೋಜನೆ ರದ್ದುಗೊಳಿಸಲಾಗಿದೆ. ವಿದ್ಯಾರ್ಥಿ ವೇತನ ನೀಡುತ್ತಿಲ್ಲ, ಒಳ ಮೀಸಲಾತಿ ಜಾರಿಗೊಳಿಸಿಲ್ಲ. ದಲಿತರಿಗೆ ಭೂಮಿ ಹಂಚಿಕೆ ಮಾಡುತ್ತಿಲ್ಲ. ಇದರೊಡನೆ ರಾಜ್ಯದಲ್ಲಿ ದಲಿತರ ಮಾರಣಹೋಮ ನಡೆದಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ತಿಂದು ತೇಗಲಾಗಿದೆ. ಹೀಗಾಗಿ ಈ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಮೈಸೂರು ಜಿಲ್ಲೆಯಿಂದ ಸಾವಿರ ಮಂದಿ ಪಾಲ್ಗೊಳ್ಳುತ್ತಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ನಟ ಅಹಿಂಸಾ ಚೇತನ್, ಭಾಸ್ಕರ್ ಪ್ರಸಾದ್, ರಮೇಶ್, ಮೋಹನ್ ದಾಸ್, ಶಂಕರಲಿಂಗಯ್ಯ, ಸೋಸಲೆ ಸಿದ್ದರಾಜು ಮತ್ತಿತರರು ಉಪಸ್ಥಿತರಿದ್ದರು.

ಬ್ಯಾಂಕ್ ಸಾಲ ಪಡೆದು ಉದ್ಯಮ ಆರಂಭಿಸಿ, ಉದ್ಯೋಗ ಸೃಷ್ಟಿಸಿ

ರಾಷ್ಟ್ರೀಯ ಜೀವನೋಪಾಯ ಮಿಷನ್ ನಿರ್ದೇಶಕಿ ಪಿ.ಐ.ಶ್ರೀವಿದ್ಯಾ ಸಲಹೆ



ಮೈಸೂರಿನ ಕೆಎಸ್‌ಓಯು ಘಟಿಕೋತ್ಸವ ಭವನದಲ್ಲಿ ಕೆನರಾ ಬ್ಯಾಂಕ್ ವತಿಯಿಂದ ಬೃಹತ್ ಸ್ವ ಸಹಾಯ ಸಂಘಗಳಿಗೆ ಸಾಲ ಸಂಯೋಜನೆ ಹಾಗೂ ಸಾಲ ವಿತರಣಾ ಮೇಳದಲ್ಲಿ ಸ್ವಸಹಾಯ ಸಂಘಕ್ಕೆ ಸಾಲ ಮಂಜೂರಾತಿ ಪತ್ರ ವಿತರಿಸಲಾಯಿತು.

ಮೈಸೂರು, ಆ.13(ಜಿಎ)–ಬ್ಯಾಂಕ್‌ಗಳಿಂದ ಸಾಲ ಪಡೆದುಕೊಳ್ಳುವ ಮಹಿಳೆಯರು ಉದ್ಯಮ ಆರಂಭಿಸಿ, ಉದ್ಯೋಗ ಸೃಷ್ಟಿ ಮಾಡುವ ರೀತಿ ಆಲೋಚಿಸಿ ಎಂದು ರಾಷ್ಟ್ರೀಯ ಜೀವನೋಪಾಯ ಮಿಷನ್ ನಿರ್ದೇಶಕಿ ಪಿ.ಐ.ಶ್ರೀವಿದ್ಯಾ ಸಲಹೆ ನೀಡಿದರು.

ಮೈಸೂರಿನ ಕೆಎಸ್‌ಓಯು ಘಟಿಕೋತ್ಸವ ಭವನದಲ್ಲಿ ಕೆನರಾ ಬ್ಯಾಂಕ್ ವತಿಯಿಂದ ಬೃಹತ್ ಸ್ವ ಸಹಾಯ ಸಂಘಗಳಿಗೆ ಸಾಲ ಸಂಯೋಜನೆ ಹಾಗೂ ಸಾಲ ವಿತರಣಾ ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಹಿಳೆಯರು ಆರ್ಥಿಕವಾಗಿ ಶಕ್ತರಾಗಲು ಈ ರೀತಿಯ ಕಾರ್ಯಕ್ರಮಗಳು ಪ್ರಮುಖ ಪಾತ್ರ ವಹಿಸಲಿವೆ. 580 ಸ್ವಸಹಾಯ ಸಂಘಗಳಿಗೆ ಸುಮಾರು 68 ಕೋಟಿ ರೂ. ಸಾಲ ನೀಡಿರುವುದು ಸಣ್ಣ ವಿಷಯವಲ್ಲ. ಕೆನರಾ ಬ್ಯಾಂಕ್ ಕಾರ್ಯ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಸಾಲ ಮೇಳದಲ್ಲಿ ಸಾಲ ತೆಗೆದುಕೊಂಡು ಉತ್ತಮವಾದ ಯೋಜನೆಗಳನ್ನು ಹಾಕಿಕೊಂಡು ಉದ್ಯಮ ಆರಂಭಿಸಿ, ಉತ್ತಮ ಲಾಭ ಗಳಿಸಿ. ಆದರೆ, ನಿಮ್ಮ ಜೀವನ ನಿರ್ವಹಣೆಗೆ ಮಾತ್ರ ಸಾಲುವಷ್ಟು ಲಾಭ ಮಾಡಬೇಡಿ ಉದ್ಯಮವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುವ ರೀತಿ ಆಲೋಚಿಸಿ ಎಂದು ತಿಳಿಸಿದರು.

ನಿಮ್ಮ ಸ್ವಯಂ ಉದ್ಯೋಗ ಆರಂಭಿಸಲು ಬೇಕಿರುವ ತರಬೇತಿಯನ್ನು ನಮ್ಮ ಸಂಸ್ಥೆ ನೀಡಲಿದ್ದು, ಈಗಾಗಲೇ ಪ್ರತಿಯೊಂದು ಪಂಚಾಯಿತಿಗಳಲ್ಲಿ ಕೃಷಿ ಸಖಿ, ಪಶು ಸಖಿಯರು ತರಬೇತಿಯನ್ನು ನೀಡುತ್ತಿದ್ದಾರೆ. ಇದ್ದರಿಂದ ಕೆಎಂಎಫ್ ಜೊತೆಗೆ ಒಪ್ಪಂದ ಮಾಡಿಕೊಂಡು ಮಹಿಳಾ ಸಹಕಾರ ಸಂಘ ಮಾಡಿಕೊಳ್ಳಲಾಗುತ್ತಿದೆ. ನಿಮಗೆ ಯಾವುದೇ ತೊಂದರೆಯಾದರೂ ನಮ್ಮ ಸಂಸ್ಥೆ ಸಂಪರ್ಕಿಸಿ ಎಂದ ಅವರು, ಈ ರೀತಿ ಉತ್ತಮ ಆಲೋಚನೆ ಮತ್ತು ಯೋಜನೆಗಳೊಂದಿಗೆ ಉದ್ಯಮ ಆರಂಭಿಸಿ ನಿಮ್ಮ ಅಕ್ಕ-ಪಕ್ಕದಲ್ಲಿರುವ ಮನೆಯವರಿಗೂ ಉದ್ಯೋಗ ಸೃಷ್ಟಿ ಮಾಡಿ ಅವರನ್ನು ಸ್ವಾವಲಂಬಿಗಳಾಗಿ ಮಾಡಿ ಎಂದು ಸಲಹೆ ನೀಡಿದರು.

ಮಹಿಳೆಯರಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಮಹಿಳೆಯರು ಸ್ವಾವಲಂಬನೆ ಸಾಧಿಸಲು ಕೆನರಾ ಬ್ಯಾಂಕ್ ಸಾಲ ಸೌಲಭ್ಯವನ್ನು ಒದಗಿಸಲಾಯಿತು. ವಿದ್ಯಾಜ್ಯೋತಿ ಯೋಜನೆಯಲ್ಲಿ ಮಕ್ಕಳಿಗೆ ಶಿಕ್ಷಣಕ್ಕಾಗಿ ವಿದ್ಯಾರ್ಥಿ ವೇತನ ಮತ್ತು ರಸ್ತೆ ಬದಿ ವ್ಯಾಪಾರಿಗಳಿಗೆ ಛತ್ರಿ ಗಳನ್ನು ನೀಡಲಾಯಿತು. ಈ ವೇಳೆ ಕೆನರಾ ಬ್ಯಾಂಕ್ ಮಹಾಪ್ರಬಂಧಕರಾದ ಮಮತ ಜೋಶಿ, ಮಹೇಶ್ ಎಂ.ಪೈ ಮತ್ತಿತರರು ಉಪಸ್ಥಿತರಿದ್ದರು.

ಕೋಲ್ಕತ್ತಾ ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣ

ಸಿಬಿಐ ತನಿಖೆಗೆ ಹೈಕೋರ್ಟ್ ಆದೇಶ

ಕೋಲ್ಕತ್ತಾ: ಕೋಲ್ಕತ್ತಾದ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ವೈದ್ಯೆ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿದ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸುವಂತೆ ಕೋಲ್ಕತ್ತಾ ಹೈಕೋರ್ಟ್ ಮಹತ್ವದ ಆದೇಶ ನೀಡಿದೆ.

ಸರ್ಕಾರಿ ಸ್ವಾಮ್ಯದ ಆರ್‌ಜಿ ಕಾರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ವೈದ್ಯೆ ಮೇಲೆ ಅತ್ಯಾಚಾರ ಮತ್ತು ಹತ್ಯೆ ಪ್ರಕರಣದ ಕುರಿತು ಸಿಬಿಐ ತನಿಖೆಗೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್, ಪ್ರಕರಣವನ್ನು ಸಿಬಿಐಗೆ ಒಪ್ಪಿಸುವಂತೆ ಮತ್ತು ಕೂಡಲೇ ಎಲ್ಲಾ ದಾಖಲೆಗಳನ್ನು ಸಿಬಿಐಗೆ ಹಸ್ತಾಂತರಿಸುವಂತೆ ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸೂಚಿಸಿದೆ. ಅಲ್ಲದೆ ಮುಷ್ಕರ ಕೈಬಿಡುವಂತೆ ವೈದ್ಯರಿಗೆ ಸೂಚಿಸಿದೆ. 31 ವರ್ಷದ ಸ್ನಾತಕೋತ್ತರ ವೈದ್ಯ ವಿದ್ಯಾರ್ಥಿನಿ ಅತ್ಯಾಚಾರ ಹಾಗೂ ಕೊಲೆ ಪ್ರಕರಣದ ತನಿಖಾ ಪ್ರಗತಿ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಕೋಲ್ಕತ್ತಾ ಹೈಕೋರ್ಟ್, ರಸ್ತೆಬದಿಯಲ್ಲಿ ವಿದ್ಯಾರ್ಥಿನಿಯ ಶವ ಪತ್ತೆಯಾಗಿಲ್ಲ. ಆಸ್ಪತ್ರೆಯಲ್ಲಿ ಶವ ಪತ್ತೆಯಾಗಿದೆ. ಈ ಬಗ್ಗೆ ಆಸ್ಪತ್ರೆಯ ಅಧೀಕ್ಷಕರು ಅಥವಾ ಪ್ರಾಂಶುಪಾಲರು ದೂರು ಸಲ್ಲಿಸಬಹುದಿತ್ತು ಎಂದಿದೆ.

ಮುಡಾ, ವಾಲ್ಮೀಕಿ ನಿಗಮದ ಹಗರಣ ನೆಪದಲ್ಲಿ ಪ್ರಜಾಸತ್ತಾತ್ಮಕ ಸರ್ಕಾರ ಉರುಳಿಸಲು ಹುನ್ನಾರ

ದಸಂಸ ರಾಜ್ಯ ಸಂಚಾಲಕ ದೇವಗಳ್ಳಿ ಸೋಮಶೇಖರ್ ಆರೋಪ

ಮೈಸೂರು, ಆ.13(ಜಿಎ)–ವಾಲ್ಮೀಕಿ ಹಾಗೂ ಮುಡಾ ಹಗರಣ ನೆಪದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಗುರಿಯಾಗಿರಿಸಿಕೊಂಡಿರುವುದು ಪ್ರಜಾಸತ್ತಾತ್ಮಕ ಹಾಗೂ ಸಂವಿಧಾನ ಪರ ಇರುವ ರಾಜ್ಯ ಸರ್ಕಾರವನ್ನು ಉರುಳಿಸಿ, ಕೋಮುವಾದ ಮರು ಸ್ಥಾಪಿಸುವ ಹುನ್ನಾರವಾಗಿದೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಮಿತಿ ರಾಜ್ಯ ಸಂಚಾಲಕ ದೇವಗಳ್ಳಿ ಸೋಮಶೇಖರ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಡಾದಲ್ಲಿ ಸಿಎಂ ಸಿದ್ದರಾಮಯ್ಯ ಅವರಿಂದ ಯಾವುದೇ ಹಗರಣ ನಡೆದಿಲ್ಲ. ಅದು ಸಿಎಂ ವಿರುದ್ಧ ಪಾದಯಾತ್ರೆ ನಡೆಸಿದ ಬಿಜೆಪಿ–ಜೆಡಿಎಸ್ ನಾಯಕರಿಂದಲೇ ಆಗಿದೆ. ಹೀಗಾಗಿ ತನಿಖೆ ನಡೆದಲ್ಲಿ ನಿಜವಾದ ಭೂಗಳ್ಳರು ಯಾರು ಎಂಬುದು ಸಮಾಜಕ್ಕೆ ತಿಳಿಯುತ್ತದೆ. ಇವರು ಸಿದ್ದರಾಮಯ್ಯ ಅವರನ್ನು ಗುರಿಯಾಗಿರಿಸಿಕೊಂಡಿದ್ದು, ಇದರ ಹಿಂದೆ ಮೋದಿ ಹಾಗೂ ಅಮಿತ್ ಶಾ ಅವರ ಕೈವಾಡವಿದೆ. ಸಾಮಾಜಿಕ ನ್ಯಾಯ ಪರಿಕಲ್ಪನೆ ನುಚ್ಚುನೂರು ಮಾಡಿ, ಕೋಮು ದ್ವೇಷವೇ ತುಂಬಿರುವ ಹಿಂದುತ್ವವಾದಿ ಸರ್ಕಾರಗಳನ್ನು ರಚಿಸುವುದು ಇವರ ಉದ್ದೇಶವಾಗಿದೆ ಎಂದು ಆರೋಪಿಸಿದರು.

ಮುಡಾ ಹಗರಣ ಕುರಿತಂತೆ ಆರೋಪ ಮಾಡುತ್ತಿರುವವರನ್ನು ಮಂಪರು ಪರೀಕ್ಷೆಗೆ ಒಳಪಡಿಸಿದಲ್ಲಿ ಯಾರ ಯಾರ ಹೆಸರಿನಲ್ಲಿ ಎಷ್ಟು ನಿವೇಶನ ಇವೆ, ನಿಜವಾದ ಕಳ್ಳರು ಯಾರು ಎಂಬುದು ತಿಳಿಯುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಿನಕಹಳ್ಳಿ ಬಿ.ರಾಚಯ್ಯ, ಬೆಲವತ್ತ ರಾಮಚಂದ್ರ, ಟಿ.ನಾರಾಯಣ, ಪ್ರಸನ್ನ ತಳೂರು, ಎ.ಆರ್.ಕಾಂತರಾಜು ಉಪಸ್ಥಿತರಿದ್ದರು.

ನಾಳೆ ಸ್ವಾತಂತ್ರ್ಯ ದಿನಾಚರಣೆ



ಮೈಸೂರು,ಆ.13(ಜಿಎ)–ಜಿಲ್ಲಾ ಬ್ರಾಹ್ಮಣ ಮಹಾಸಭಾ, ಸಂಧ್ಯಾ ಸುರಕ್ಷಾ ಟ್ರಸ್ಟ್, ಶಾಕಾಂಬರಿ ಧಾರ್ಮಿಕ ಶ್ರದ್ಧಾಕೇಂದ್ರ ಹಾಗೂ ಕರ್ನಾಟಕ ಬ್ರಾಹ್ಮಣ ಹಿರಿಯ ನಾಗರಿಕರ ವೇದಿಕೆ ಸಂಯುಕ್ತಾಶ್ರಯದಲ್ಲಿ ಆ.15ರಂದು ಬೆಳಗ್ಗೆ 11ಕ್ಕೆ ಶ್ರೀರಾಂಪುರ ಹುಣಸೆಮರ ಹತ್ತಿರದ ದೇವಯ್ಯನಹುಂಡಿ ಮುಖ್ಯ ರಸ್ತೆಯ ಭಾರತ ಮಾತಾ ಧ್ವಜಕಟ್ಟೆಯಲ್ಲಿ 77ನೇ ಸ್ವಾತಂತ್ರ್ಯ ದಿನಾಚರಣೆ ಏರ್ಪಡಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹಿರಿಯ ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ ಈ ವಿಷಯ ತಿಳಿಸಿ, ಕಾರ್ಯಕ್ರಮದಲ್ಲಿ ಮಾಜಿ ಲೋಕಾಯುಕ್ತ ಸಂತೋಷ್ ಎನ್.ಹೆಗ್ಡೆ ಅವರಿಗೆ ಸರ್ದಾರ್ ವಲ್ಲಭಭಾಯಿ ಪಟೇಲ್ ರಾಷ್ಟ್ರೀಯ ಸದ್ಭಾವನಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಶಾಸಕ ಟಿ.ಎಸ್.ಶ್ರೀವತ್ಸ, ಡಾ.ಎಂ.ಚಿದಾನಂದಗೌಡ ಹಾಗೂ ಇನ್ನಿತರ ಗಣ್ಯರು ಆಗಮಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಬಿ.ಆರ್.ನಟರಾಜ ಜೋಯಿಸ್, ಲತಾ ಮೋಹನ್ ಇದ್ದರು.

ಕಂಡೇಶ್‌ಗೆ ಅಭಿನಂದನೆ...



ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಕಾರ್ಯಕಾರಿಣಿ ಸಮಿತಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾದ ಕೆ.ಕೆ.ಕಂಡೇಶ್ ಅವರನ್ನು ಮುಖಂಡರಾದ ಕೆ.ಜೆ.ರಮೇಶ್, ಜಯರಾಮ್, ಜಯಶಂಕರ್, ಡಿ.ಪಿ.ಸುರೇಶ್, ಉಪೇಂದ್ರ, ಆದಿತ್ಯ ಇನ್ನಿತರರು ಆತ್ಮೀಯವಾಗಿ ಅಭಿನಂದಿಸಿದರು.

ವಿದ್ಯಾರ್ಥಿನಿಲಯ ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಮೈಸೂರು,ಆ.13– ಮೈಸೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರ (ಸಾಮಾನ್ಯ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಮಾತ್ರ) ಬಾಲಕ, ಬಾಲಕಿಯರ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ–1, 2ಎ, 2ಬಿ, 3ಎ, 3ಬಿ, ಪ.ಜಾತಿ, ಪ.ವರ್ಗ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಂದ 2024–2025ನೇ ಸಾಲಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಪ್ರವರ್ಗ–1, ಎಸ್‌ಸಿ ಮತ್ತು ಎಸ್‌ಟಿ ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ರೂ. 2.50 ಲಕ್ಷ ಹಾಗೂ ಪ್ರವರ್ಗ–2ಎ, 2ಬಿ, 3ಎ, 3ಬಿ ಇತರೆ ಹಿಂದುಳಿದ ವರ್ಗಗಳ ಹಾಗೂ ಇತರೆ ವಿದ್ಯಾರ್ಥಿಯ ಪೋಷಕರ ವಾರ್ಷಿಕ ಆದಾಯ ರೂ. 1 ಲಕ್ಷದೊಳಗಿರುವ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ https://shp.karnataka.gov.in/bcwd ಸೆ.4ರೊಳಗೆ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ತಾಂತ್ರಿಕ ತೊಂದರೆಗಳಾದಲ್ಲಿ bcwdhelp line @gmail.comಗೆ ಇ–ಮೇಲ್ ಮುಖಾಂತರ ಅಥವಾ ಜಿಲ್ಲಾ–ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗೆ ಅಗತ್ಯ ದಾಖಲೆಗಳೊಂದಿಗೆ ಸಂಪರ್ಕಿಸಬಹುದು. ಹೆಚ್ಚಿನ ಮಾಹಿತಿಗೆ ಸಹಾಯವಾಣಿ: 8050770004, 8050370005 ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉತ್ತಮ ಪುಸ್ತಕಗಳಿಂದ ಯುವಕರಲ್ಲಿ ಮಾನವೀಯ ಮೌಲ್ಯ, ವ್ಯಕ್ತಿತ್ವ ರೂಪಿಸಬಹುದು

ಮೈಸೂರು ವಿವಿ ಪ್ರಾಧ್ಯಾಪಕ ಡಾ.ಬಿ.ನಾಗರಾಜು ಅಭಿಮತ



'ಡಾ.ರಂಗನಾಥನ್ ಅವರ 132ನೇ ಜಯಂತಿ ಕಾರ್ಯಕ್ರಮದಲ್ಲಿ ಡಾ.ರಂಗನಾಥನ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಮೈಸೂರು, ಆ.12(ಎಸ್‌ಪಿಎನ್)–ಯುವಕರಲ್ಲಿ ಮಾನವೀಯ ಮೌಲ್ಯ, ವ್ಯಕ್ತಿತ್ವ ಬೆಳೆಸಬೇಕೆಂದರೆ ಉತ್ತಮ ಪುಸ್ತಕಗಳ ಅಧ್ಯಯನದಿಂದ ಮಾತ್ರ ಸಾಧ್ಯ ಎಂದು ಮೈಸೂರು ವಿಶ್ವವಿದ್ಯಾ ನಿಲಯ ವಾಣಿಜ್ಯ ವಿಭಾಗದ ಪ್ರಾಧ್ಯಾಪಕ ಡಾ.ಬಿ.ನಾಗರಾಜು ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ಗ್ರಂಥಾಲಯದ ವಿಭಾಗದ ವತಿಯಿಂದ 'ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ', 'ಡಾ.ಎಸ್.ಆರ್.ರಂಗನಾಥನ್ ಅವರ 132ನೇ ಜಯಂತಿ' ಹಾಗೂ ಗ್ರಂಥಾಲಯದ ಬಳಕೆ: ಅಂದು–ಇಂದು ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಹಿಂದಿನ ಕಾಲದಲ್ಲಿ ಪುಸ್ತಕಗಳನ್ನು ಹಣ ಕೊಟ್ಟು ಓದುವ ಶಕ್ತಿ ನಮ್ಮ ಕಾಲಘಟ್ಟದವರಿಗೆ ಇರಲಿಲ್ಲ. ಜೊತೆಗೆ ಮೈಸೂರು ವಿವಿ ಗ್ರಂಥಾಲಯಕ್ಕೆ ಬರುವುದೆಂದರೆ ನಮಗೆ ಹೆಮ್ಮೆ ಎನಿಸುತ್ತಿತ್ತು. ಮನುಷ್ಯನ ಸರ್ವತೋಮುಖ ಬೆಳವಣಿಗೆ ಆಗಬೇಕು ಎಂದರೆ, ವಿದ್ಯಾರ್ಥಿಗಳ ದುರ್ವರ್ತನೆಯ ವ್ಯಕ್ತಿತ್ವ ಬದಲಿಸಬೇಕೆಂದರೆ, ಯುವಕರಲ್ಲಿ ಮಾನವೀಯ ಮೌಲ್ಯ ಬೆಳೆಸಬೇಕೆಂದರೆ, ಅದು ಪುಸ್ತಕಗಳ ಅಧ್ಯಯನದಿಂದ ಮಾತ್ರ ಸಾಧ್ಯ ಅದೇ ರೀತಿ ಪುಸ್ತಕದ ಮೌಲ್ಯ ಮತ್ತು ಸಾರ್ಥಕತೆ ಉಳಿಸಿಕೊಳ್ಳಬೇಕಾದರೆ, ಗ್ರಂಥಾಲಯಗಳ ಅವಶ್ಯ ಹಾಗೂ ಗ್ರಂಥಪಾಲಕನ ಪಾತ್ರ ಅತೀ ಮುಖ್ಯ ಎಂದರು.

ಮೈಸೂರು ವಿವಿ ಗ್ರಂಥಾಲಯದ ನಿವೃತ್ತ ಗ್ರಂಥಪಾಲಕ ಡಾ.ಸಿ.ಪಿ.ರಾಮಶೇಷ ಅವರು, ಓದುವ ಹವ್ಯಾಸ ಮತ್ತು ವಿಧಾನ ಕುರಿತು ಮಾತನಾಡಿ, ಮೊಬೈಲ್ ಹಿಡಿಯುವ ಯುವಕ–ಯುವತಿಯರ ಕೈಗಳಲ್ಲಿ ಪುಸ್ತಕ ಹಿಡಿಯವಂತಾಗಬೇಕು. ಆಗ ಮಾತ್ರ ಸುಶಿಕ್ಷಿತ ಸಮಾಜ ನಿರ್ಮಾಣ ಸಾಧ್ಯ. ಇತ್ತೀಚಿನ ದಿನಗಳಲ್ಲಿ ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗುವ ಮೋಜಿನ ಕಾರ್ಯಕ್ರಮಗಳತ್ತ ಎಲ್ಲರ ಒಲವು ಹೆಚ್ಚಿದೆ. ಇದರ ಬದಲು ಯುವಕರು ಪುಸ್ತಕಗಳನ್ನು ಓದಿದರೆ, ಪರ್ವತದೆತ್ತರಕ್ಕೆ ಅವರ ಜ್ಞಾನ ಬೆಳೆಯುತ್ತದೆ. ಟಿವಿ ಮುಂದೆ ಕುಳಿತರೆ ಅವರ ಜ್ಞಾನ ಪಾತಾಳಕ್ಕೆ ಇಳಿಯುತ್ತದೆ. ಹಾಗಾಗಿ ವಿದ್ಯಾರ್ಥಿಗಳು ಗ್ರಂಥಾಲಯಗಳ ಬಳಕೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಡಾ.ಎಸ್.ಆರ್.ರಂಗನಾಥನ್ ಜೀವಿತಾವಧಿಯಲ್ಲಿ ಪ್ರತಿಪಾದಿಸಿದ್ದರು ಎಂದರು.

ಡಾ ಎಸ್.ಆರ್.ರಂಗನಾಥನ್ ಅವರ ಜೀವನ ಮತ್ತು ಸಾಧನೆ ವಿಷಯದ ಕುರಿತು ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಪಾಲಕಿ ಡಾ.ಪಿ.ಸರಸ್ವತಿ ಮಾತನಾಡಿದರು. ಈ ವೇಳೆ ಸಹಾಯಕ ಗ್ರಂಥಪಾಲಕರಾದ ರಮೇಶ್, ಜಯಶ್ರೀ ಜಗದೀಶ್, ಬಿ.ಈರಣ್ಣ ಉಪಸ್ಥಿತರಿದ್ದರು.

ಬಾಂಗ್ಲಾದಲ್ಲಿ ಹಿಂದೂಗಳ ಮೇಲಿನ ದೌರ್ಜನ್ಯಕ್ಕೆ ಖಂಡನೆ

ಮೈಸೂರು, ಆ.13(ಜಿಎ)–ನೆರೆಯ ಬಾಂಗ್ಲಾದೇಶದಲ್ಲಿ ತೀವ್ರ ಹಿಂಸಾಚಾರದಿಂದ ತತ್ತರಿಸಿರುವ ಅಲ್ಲಿನ ಹಿಂದೂ ಸಮುದಾಯದ ರಕ್ಷಣೆಗೆ ಕೇಂದ್ರ ಸರ್ಕಾರ ಹಾಗೂ ವಿಶ್ವ ಸಮುದಾಯ ಮುಂದಾಗಬೇಕೆಂದು ಆಗ್ರಹಿಸಿ ಹಿಂದೂ ಹಿತರಕ್ಷಣಾ ಸಮಿತಿ ವತಿಯಿಂದ ನಗರದ ವಿವಿಧೆಡೆ ಮಾನವ ಸರಪಳಿ ರಚಿಸಲಾಯಿತು ಎಂದು ಪ್ರಾಂತ ಪ್ರಮುಖ ಕೆ.ಟಿ. ಉಲ್ಲಾಸ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಾಂಗ್ಲಾ ಪ್ರಧಾನಿ ಶೇಖ್ ಹಸೀನಾ ರಾಜೀನಾಮೆ ನೀಡಿ ದೇಶ ತೊರೆದ ಬಳಿಕ ಅಲ್ಲಿನ ಕಾನೂನು ಮತ್ತು ಸುವ್ಯವಸ್ಥೆ ಸಂಪೂರ್ಣ ನಿಷ್ಕ್ರಿಯವಾಗಿದೆ. ಅಲ್ಲಿ ನೂರಕ್ಕೂ ಹೆಚ್ಚು ದೇವಾಲಯಗಳಿಗೆ ಹಾನಿಯಾಗಿದೆ. ಹಿಂದೂ ವ್ಯಾಪಾರ ಸಂಸ್ಥೆಗಳು ಹಾಗೂ ಹಿಂದೂಗಳ ಮನೆಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಯುತ್ತಿದೆ. ಅಲ್ಲಿನ ಅಲ್ಪಸಂಖ್ಯಾತ ಹಿಂದೂಗಳ ಮಾನವ ಹಕ್ಕು ಮತ್ತು ಧಾರ್ಮಿಕ ಹಕ್ಕಿಗೆ ಚ್ಯುತಿ ಬಂದಿದೆ. ಹೀಗಾಗಿ ಒಕ್ಕೂಟ ಅವರ ರಕ್ಷಣೆಗೆ ಮುಂದಾಗಬೇಕೆಂದು ಆಗ್ರಹಿಸಿದೆ ಎಂದರು.

ಅಲ್ಲಿನ ಹದಗೆಟ್ಟ ಪರಿಸ್ಥಿತಿ ಲಾಭ ಪಡೆದು ಗಡಿಯಾಚೆಯಿಂದ ಭಾರತಕ್ಕೆ ಜಿಹಾದಿಗಳು ನುಸುಳುವ ಸಾಧ್ಯತೆ ಇದೆ. ಹೀಗಾಗಿ ಕೇಂದ್ರ ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಕೋರಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಮಹೇಶ್ ಕಾಮತ್, ಲೋಹಿತ್ ಅರಸ್, ಮಹೇಶ್ ಕಡಗದಾಳು, ರಂಗಸ್ವಾಮಿ, ಮಧುಶೇಖರ್ ಉಪಸ್ಥಿತರಿದ್ದರು.

ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನ



ವಿವಿಧ ಕ್ಷೇತ್ರದ 17 ಮಂದಿ ಸಾಧಕರನ್ನು ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ನಿಗ್ರಹ ಸಂಘಟನೆ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು, ಆ.13(ಎಸ್‌ಪಿಎನ್)–ಮೈಸೂರು ವಿಶ್ವೇಶ್ವರನಗರದಲ್ಲಿರುವ ಬಿಲ್ಡರ್ಸ್ ಅಸೋಸಿಯೇಷನ್ ಇಂಡಿಯಾ ಮೈಸೂರು ಘಟಕದ ಸಭಾಂಗಣದಲ್ಲಿ ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ನಿಗ್ರಹ ಸಂಘಟನೆ ವತಿಯಿಂದ ವಿವಿಧ ಕ್ಷೇತ್ರದ ಸಾಧಕರಿಗೆ ಸನ್ಮಾನಿಸಲಾಯಿತು.

ವೈದ್ಯರತ್ನ ಪ್ರಶಸ್ತಿ ಡಾ.ರಘುನಂದನಾ ಶೇಖರಪ್ಪ, ಡಾ.ಸುಗಂಧಿ ಉಡುಪ, ಡಾ.ಕೃತಿಕಾದೇವಿ, ಡಾ.ವಿದ್ಯಾಸಾಗರ್ ಅವರಿಗೆ, ಡಿ.ಎಸ್.ಭಾರತೀಶ್ (ಯೋಗ ರತ್ನ), ಮಮತಾ ಪ್ರಭು(ಶಿಕ್ಷಣ ರತ್ನ), ಸಮಾಜ ಸೇವಾ ರತ್ನ ಪ್ರಶಸ್ತಿ ಅಕ್ಕಯ್ಯ ಪದ್ಮಶಾಲಿ, ಅಶೋಕ್ ಗೋವಿಂದೇಗೌಡ, ಧರ್ಮಪ್ರಸಾದ್, ಸಿ.ಎನ್.ದಾನಿ ಅವರಿಗೆ, ಸ್ವರ್ಣಲತಾ ಶಾಸ್ತ್ರಿ(ನಾಟ್ಯ ರತ್ನ), ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ (ಮಾಧ್ಯಮ ರತ್ನ), ಡಾ.ಚಂದ್ರಶೇಖರನ್(ಉದ್ಯೋಗ ರತ್ನ), ಕರ್ನಾಟಕ ರಾಜ್ಯ ಮುಕ್ತ ವಿವಿ ಪತ್ರಿಕೋದ್ಯಮ ವಿಭಾಗದ ಡಾ.ಶೈಲೇಶ್ ಅರಸ್(ಶಿಕ್ಷಣ ರತ್ನ), ಸಹನಾಗೌಡ (ಯುವಚೇತನ), ಕಿರಣ್‌ಗೌಡ (ಕೃಷಿರತ್ನ) ಅವರನ್ನು ಸನ್ಮಾನಿಸಲಾಯಿತು.

ಸಾಮಾಜಿಕ ಹಕ್ಕು ಹೋರಾಟಗಾರ ಸತೀಶ್ ವೆಂಕಟಸುಬ್ಬ ಅವರು ಸೈಬರ್ ಕ್ರೈಂ ಅಪರಾಧ ಕುರಿತು ವಿಶೇಷ ಉಪನ್ಯಾಸ ನೀಡಿದರು. ನಂತರ ಚಂದನ್ ಮತ್ತು ತಂಡದವರು ಪೊಲೀಸ್ ಇಲಾಖೆಯಲ್ಲಿ ಭ್ರಷ್ಟಾಚಾರ ಕುರಿತು ಬೆಳಕು ಚೆಲ್ಲುವ ಬೀದಿ ನಾಟಕ ಪ್ರದರ್ಶಿಸಿದರು. ಮಾನವ ಹಕ್ಕುಗಳು ಮತ್ತು ಭ್ರಷ್ಟಾಚಾರ ನಿಗ್ರಹ ಸಂಘಟನೆ ರಾಜ್ಯಾಧ್ಯಕ್ಷ ಸಿ.ವಿ.ಶ್ರೀನಾಥಶೆಟ್ಟಿ, ಉಪಾಧ್ಯಕ್ಷ ಆರ್.ಪಿ.ಪ್ರವೀಣ್‌ಕುಮಾರ್, ಪದಾಧಿಕಾರಿಗಳಾದ ಅಮೃತವಾಣಿ, ವಿ.ಪ್ರಶಾಂತ್, ಕವಿತಾ, ವೆಂಕಟೇಶಮೂರ್ತಿ, ನರಸಿಂಹ, ಸೋಹನ್ ಸೇರಿದಂತೆ ಇತರರಿದ್ದರು.

ಆ.17, 18 ರಾಜ್ಯ ವೇಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್

ಮೈಸೂರು, ಆ.13(ಜಿಎ)–ಮೈಸೂರು ಜಿಲ್ಲಾ ವೇಟ್ ಲಿಫ್ಟಿಂಗ್ ಸಂಸ್ಥೆ ಹಾಗೂ ಫಿಸಿಕಲ್ ಎಜುಕೇಷನ್ ಟೀಚರ್ಸ್ ಅಕಾಡೆಮಿ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ರಾಜ್ಯ ಸಂಸ್ಥೆ ಆಶ್ರಯದಲ್ಲಿ ಆ.17 ಮತ್ತು 18ರಂದು ನಗರದ ಜಯಲಕ್ಷ್ಮಿಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಕಾಲೇಜು ಸಭಾಂಗಣದಲ್ಲಿ ರಾಜ್ಯ ವೇಟ್ ಲಿಫ್ಟಿಂಗ್ ಚಾಂಪಿಯನ್‌ಷಿಪ್ ಪಂದ್ಯಾವಳಿ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಎಂದು ಜಿಲ್ಲಾ ಸಂಘದ ಅಧ್ಯಕ್ಷ ಡಾ.ಸಿ.ಕೃಷ್ಣ ಈ ವಿಷಯ ತಿಳಿಸಿ, ಆ.17ರಂದು ಬೆಳಗ್ಗೆ 10 ಗಂಟೆಗೆ ಉದ್ಘಾಟನೆ ನಡೆಯಲಿದ್ದು, 18ರಂದು ಸಂಜೆ 4ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆ. ಈ ಸ್ಪರ್ಧೆಗಳಲ್ಲಿ 350ಕ್ಕೂ ಹೆಚ್ಚು ವೇಟ್ ಲಿಫ್ಟಿಂಗ್ ಪಟುಗಳು ಪಾಲ್ಗೊಳ್ಳುತ್ತಿದ್ದಾರೆ. ನಗರದಲ್ಲಿ ಇದೇ ಪ್ರಥಮ ಬಾರಿಗೆ ಈ ರೀತಿಯ ಪಂದ್ಯಾವಳಿ ನಡೆಯುತ್ತಿದ್ದು, ಆರು ವಿಭಾಗಗಳಲ್ಲಿ ಸ್ಪರ್ಧೆ ನಡೆಯುತ್ತಿದ್ದು, ಉದ್ಘಾಟನೆಯನ್ನು ಕಾಮನ್‌ವೆಲ್ತ್ ಚಿನ್ನದ ಪದಕ ವಿಜೇತರಾದ ಪುಷ್ಪರಾಜ್ ಹೆಗ್ಡೆ ನೆರವೇರಿಸುವರು ಎಂದರು. ಗೋಷ್ಠಿಯಲ್ಲಿ ಪ್ರೊ.ಸೌಮ್ಯ, ಸಿ.ಕೆ.ಮುರಳೀಧರ್, ಡಾ.ಸದಾಶಿವ ಭಟ್, ಪ್ರೊ.ಗುರುಮೂರ್ತಿ ಭಟ್ ಇದ್ದರು.

ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ


ಮೈಸೂರು,ಆ.13– ಶಾಲಾ ಶಿಕ್ಷಣ ಇಲಾಖೆ ವತಿಯಿಂದ 2024 ನೇ ಸಾಲಿನ ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ತಾಲೂಕಿನ ಅರ್ಹ ಶಿಕ್ಷಕರು http://www.school education.kar.nic.in ಪೋರ್ಟಲ್ ಮೂಲಕ ಆ.16ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಆ.13–ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ 2024–25ನೇ ಸಾಲಿನ ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಯೋಜನೆಯಡಿ ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ವೈಯಕ್ತಿಕ ಸಾಲ ಯೋಜನೆ, ಗಂಗಾ ಕಲ್ಯಾಣ ನೀರಾವರಿ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ, ವಿದೇಶಿ ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸಾಲ ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಸ್ವಯಂ ಉದ್ಯೋಗ ಸಾಲ ಯೋಜನೆ ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ, ಹೊಲಿಗೆ ಯಂತ್ರ ವಿತರಣೆ ಯೋಜನೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು http://sevasindhu.karnataka.gov.in ಮೂಲಕ ಆ.31ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಸಹಾಯವಾಣಿ: 080–22374832, 8050770004, 8050770005 ಸಂಪರ್ಕಿಸಿ.

ದೇಶ - ವಿದೇಶ


ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಕ್ ಹಸೀನಾ ವಿರುದ್ಧ ಕೊಲೆ ಕೇಸ್



ಢಾಕಾ: ಬಾಂಗ್ಲಾದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ವಿರುದ್ಧ ಕೊಲೆ ಕೇಸ್ ದಾಖಲಾಗಿದೆ. ಕಳೆದ ತಿಂಗಳು ನಡೆದ ಹಿಂಸಾತ್ಮಕ ಘರ್ಷಣೆ ವೇಳೆ ಕಿರಾಣಿ ಅಂಗಡಿ ಮಾಲೀಕನ ಸಾವಿನ ಹಿನ್ನೆಲೆಯಲ್ಲಿ ಶೇಖ್ ಹಸೀನಾ ಮತ್ತಿತರ ಆರು ಜನರ ವಿರುದ್ಧ ಕೊಲೆ ಪ್ರಕರಣವನ್ನು ದಾಖಲಿಸಲಾಗಿದೆ.

ಮೊಹಮ್ಮದ್‌ಪುರದಲ್ಲಿ ಜುಲೈ 19 ರಂದು ಮೀಸಲಾತಿ ಸುಧಾರಣಾ ಹೋರಾಟಗಾರರು ಪ್ರತಿಭಟನಾ ಮೆರವಣಿಗೆ ನಡೆಸುತ್ತಿದ್ದಾಗ ನಡೆದ ಪೊಲೀಸ್ ಗುಂಡಿನ ದಾಳಿಯಲ್ಲಿ ಕಿರಾಣಿ ಅಂಗಡಿ ಮಾಲೀಕ ಅಬು ಸೈಯದ್ ಅವರು ಸಾವನ್ನಪ್ಪಿದ್ದರು. ಅವರ ಹಿತೈಷಿ ಈ ಪ್ರಕರಣವನ್ನು ದಾಖಲಿಸಿದ್ದಾರೆ. ಅವಾಮಿ ಲೀಗ್‌ನ ಪ್ರಧಾನ ಕಾರ್ಯದರ್ಶಿ ಒಬೈದುಲ್ ಕ್ವಾಡರ್, ಮಾಜಿ ಗೃಹ ಸಚಿವ ಅಸಾದುಝಮಾನ್ ಖಾನ್ ಕಮಾಲ್ ಮತ್ತು ಮಾಜಿ ಪೊಲೀಸ್ ಮಹಾನಿರೀಕ್ಷಕ ಚೌಧರಿ ಅಬ್ದುಲ್ಲಾ ಅಲ್ ಮಾಮುನ್ ಇತರ ಆರೋಪಿಗಳಾಗಿದ್ದಾರೆ. ಅಲ್ಲದೆ ಉನ್ನತ ಶ್ರೇಣಿಯ ಪೊಲೀಸ್ ಅಧಿಕಾರಿಗಳು ಮತ್ತು ಸರ್ಕಾರಿ ಅಧಿಕಾರಿಗಳು ಕೂಡ ಪ್ರಕರಣದಲ್ಲಿ ಆರೋಪಿಗಳಾಗಿದ್ದಾರೆ.


ಡೇರಾ ಮುಖ್ಯಸ್ಥ ಗುರ್ಮಿತ್ ರಾಮ್ ರಹೀಮ್ ಸಿಂಗ್‌ಗೆ ಮತ್ತೆ 21 ದಿನಗಳ ಪೆರೋಲ್



ಚಂಡೀಗಢ: ಕೊಲೆ, ಲೈಂಗಿಕ ಕಿರುಕುಳ ಪ್ರಕರಣದಲ್ಲಿ ಜೈಲುಪಾಲಾಗಿರುವ ಡೇರಾ ಸಚ್ಚಾ ಸೌಧದ ಮುಖ್ಯಸ್ಥ ಗುರ್ಮೀತ್ ರಾಮ್ ರಹೀಮ್ ಸಿಂಗ್‌ಗೆ ಮತ್ತೆ 21 ದಿನಗಳ ಪೆರೋಲ್ ನೀಡಲಾಗಿದೆ. ಈ ಮೂಲಕ ಕಳೆದ 4 ವರ್ಷಗಳಲ್ಲಿ ಇದು ಹತ್ತನೇ ಬಾರಿ ಜೈಲಿನಿಂದ ಹೊರ ಬಂದಿದ್ದಾರೆ. ಜೈಲಿನಿಂದ ಹೊರ ಬಂದ ಬಳಿಕ ಗುರ್ಮೀತ್ ಅವರು ಬಾಗ್‌ಪತ್‌ನ ಬರ್ನಾವಾದಲ್ಲಿರುವ ಡೇರಾ ಆಶ್ರಮದಲ್ಲಿ ತಂಗಲಿದ್ದಾರೆಂದು ಮೂಲಗಳು ತಿಳಿಸಿವೆ.

56 ವರ್ಷದ ರಾಮ್ ರಹೀಮ್, ಪಂಜಾಬ್, ಹರಿಯಾಣ, ಹಿಮಾಚಲ ಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿ ಗಮನಾರ್ಹ ಅನುಯಾಯಿಗಳನ್ನು ಹೊಂದಿದ್ದು, ಅನಾರೋಗ್ಯದಿಂದ ಬಳಲುತ್ತಿರುವ ತನ್ನ ತಾಯಿಯನ್ನು ಭೇಟಿ ಮಾಡಲು ಮನವಿ ಸೇರಿದಂತೆ ವಿವಿಧ ಕಾರಣಗಳಿಗಾಗಿ ಎಂಟು ಪ್ರತ್ಯೇಕ ಸಂದರ್ಭಗಳಲ್ಲಿ ಪೆರೋಲ್ ಮೇಲೆ ಜೈಲಿನಿಂದ ಬಿಡುಗಡೆ ಮಾಡಲಾಗಿದೆ ಎಂದು ತಿಳಿದುಬಂದಿದೆ.


ಪಾಕಿಸ್ತಾನದ ಮಾಜಿ ಐಎಸ್‌ಐ ಮುಖ್ಯಸ್ಥ ಫೈಜ್ ಹಮೀದ್ ಸೇನಾ ಕಸ್ಟಡಿಗೆ



ಇಸ್ಲಾಮಾಬಾದ್: ವಸತಿ ಯೋಜನೆ ಹಗರಣಕ್ಕೆ ಸಂಬಂಧಿಸಿದಂತೆ ಪಾಕಿಸ್ತಾನದ ಮಾಜಿ ಐಎಸ್‌ಐ ಮುಖ್ಯಸ್ಥ, ನಿವೃತ್ತ ಲೆಫ್ಟಿನೆಂಟ್ ಜನರಲ್ ಫೈಜ್ ಹಮೀದ್ ಅವರನ್ನು ಮಿಲಿಟರಿ ಬಂಧಿಸಿದೆ.


ಫೈಜ್ ಹಮೀದ್ ವಿರುದ್ಧದ ದೂರುಗಳ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಪಾಕಿಸ್ತಾನದ ಸರ್ವೋಚ್ಚ ನ್ಯಾಯಾಲಯದ ಆದೇಶಗಳಿಗನುಗುಣವಾಗಿ ವಿವರವಾದ ತನಿಖೆಯನ್ನು ನ್ಯಾಯಾಲಯ ಕೈಗೊಂಡಿದೆ ಎಂದು ಸೇನೆಯ ಮಾಧ್ಯಮ ವಿಭಾಗ ಹೇಳಿದೆ. ತನಿಖೆ ಹಿನ್ನೆಲೆಯಲ್ಲಿ ಪಾಕಿಸ್ತಾನ ಸೇನಾ ಕಾಯ್ದೆಯ ನಿಬಂಧನೆಗಳಡಿ ನಿವೃತ್ತ ಲೆಫ್ಟಿನೆಂಟ್ ಜನರಲ್ ಫೈಜ್ ಹಮೀದ್ ವಿರುದ್ಧ ಸೂಕ್ತ ಶಿಸ್ತು ಕ್ರಮವನ್ನು ಪ್ರಾರಂಭಿಸಲಾಗಿದೆ. ಅವರ ವಿರುದ್ಧ ಅಧಿಕಾರ ದುರುಪಯೋಗದ ಆರೋಪಗಳ ತನಿಖೆಗಾಗಿ ಏಪ್ರಿಲ್‌ನಲ್ಲಿ ತನಿಖಾ ಸಮಿತಿಯನ್ನು ಮಿಲಿಟರಿ ರಚಿಸಿತ್ತು ಎಂದು ವರದಿಯಾಗಿದೆ. ಹಮೀದ್ ಅವರು 2019ರಿಂದ 2021ರವರೆಗೆ ಬೇಹುಗಾರಿಕಾ ಸಂಸ್ಥೆಯ ಮುಖ್ಯಸ್ಥರಾಗಿದ್ದಾಗ ಅತ್ಯಂತ ಶಕ್ತಿಶಾಲಿ ಎಂದು ಪರಿಗಣಿಸಲ್ಪಟ್ಟಿದ್ದರು.

ಭಾರತದ 10 ಪ್ರಮುಖ ನಗರಗಳಲ್ಲಿ ಹೆಚ್ಚುತ್ತಿರುವ ಓಝೋನ್‌ನ ಸಾಂದ್ರತೆ



ನವದೆಹಲಿ: ಈ ವರ್ಷ ಬೇಸಿಗೆ ಆರಂಭವಾಗುವ ಮೊದಲೇ ಬಿಸಿಲಿನ ತಾಪಮಾನ ಹೆಚ್ಚಿತ್ತು. ಈ ಹೊಸ ಪರಿಸರ ಬಿಕ್ಕಟ್ಟು ಭಾರತೀಯ ನಗರಗಳ ಮೇಲೆ ತೀವ್ರವಾದ ಪ್ರಭಾವ ಬೀರಿದೆ. ಅದರಲ್ಲೂ ಗ್ರೌಂಡ್ ಲೆವೆಲ್ ಓಝೋನ್‌ನ ಪ್ರಭಾವವು ಅಪಾಯಕಾರಿ ಮಾಲಿನ್ಯಕಾರಕ ಕಣಗಳ ಮಾಲಿನ್ಯದ ಸಮಸ್ಯೆ ಮತ್ತು ಅನೇಕ ಗಂಭೀರವಾದ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡಿದೆ. ದೆಹಲಿ ಮೂಲದ ಥಿಂಕ್ ಟ್ಯಾಂಕ್ ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್ವಿರಾನ್‌ಮೆಂಟ್ (ಸಿಎಸ್‌ಇ)ನ ಇತ್ತೀಚಿನ ಸಂಶೋಧನೆಗಳು ಗ್ರೌಂಡ್ ಲೆವೆಲ್ ಓಝೋನ್‌ನ ಸ್ಪಷ್ಟವಾದ ಚಿತ್ರಣವನ್ನು ಚಿತ್ರಿಸಿವೆ. ದೆಹಲಿ–ಎನ್‌ಸಿಆರ್, ಮುಂಬೈ–ಎಂಎಂಆರ್, ಕೋಲ್ಕತ್ತಾ–ಕೆಎಂಎ, ಹೈದರಾಬಾದ್, ಬೆಂಗಳೂರು, ಚೆನ್ನೈ, ಪುಣೆ, ಅಹಮದಾಬಾದ್, ಲಕ್ನೋ ಮತ್ತು ಜೈಪುರ ಈ 10 ಪ್ರಮುಖ ನಗರಗಳಲ್ಲಿ ನೆಲಮಟ್ಟದ ಓಝೋನ್ ಸಾಂದ್ರತೆಯು ಹೆಚ್ಚಿದೆ ಎಂದು ಹೇಳಲಾಗಿದೆ. ಒಮ್ಮೆ ಓಝೋನ್ ರೂಪುಗೊಂಡರೆ, ಇದು ತೀವ್ರವಾದ ಆರೋಗ್ಯದ ಅಪಾಯಗಳನ್ನು ಉಂಟುಮಾಡುತ್ತದೆ. ವಿಶೇಷವಾಗಿ ಉಸಿರಾಟದ ಪರಿಸ್ಥಿತಿಗಳು, ಅದರಲ್ಲೂ ಮಕ್ಕಳು ಮತ್ತು ವೃದ್ಧರಿಗೆ ಅನೇಕ ಗಂಭೀರ ಆರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತವೆ. ಇದು ಆಸ್ತಮಾವನ್ನು ಉಲ್ಬಣಗೊಳಿಸುತ್ತದೆ ಮತ್ತು ದೀರ್ಘ ಕಾಲದ ಉಸಿರಾಟದ ಕಾಯಿಲೆಗಳಿಗೆ ಕಾರಣವಾಗಬಹುದು.

ಪಾಕಿಸ್ತಾನದಲ್ಲಿ ವಿದ್ಯುತ್ ಶುಲ್ಕ ಮನೆ ಬಾಡಿಗೆಗಿಂತ ಹೆಚ್ಚು !



ಇಸ್ಲಾಮಾಬಾದ್: ಪಾಕಿಸ್ತಾನವು ಅತಿದೊಡ್ಡ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ದಿನನಿತ್ಯದ ಅಗತ್ಯ ವಸ್ತುಗಳ ಕೊರತೆಯಿಂದ ಹಿಟ್ಟಿನಿಂದ ಹಿಡಿದು ಬೇಳೆಕಾಳುಗಳವರೆಗೆ ದರ ಹೆಚ್ಚಳವಾಗಿದೆ. ಇದೀಗ ಜನರು ವಿದ್ಯುತ್ ಶುಲ್ಕದ ಬಗ್ಗೆ ಚಿಂತೆಗೀಡಾಗಿದ್ದಾರೆ. 13 ತಿಂಗಳಲ್ಲಿ 15 ಪಟ್ಟು ಬೆಲೆ ಹೆಚ್ಚಾಗಿದ್ದು, ಮನೆ ಬಾಡಿಗೆಗಿಂತ ವಿದ್ಯುತ್ ಶುಲ್ಕವೇ ಹೆಚ್ಚು ಎಂದು ಹೇಳಲಾಗುತ್ತಿದೆ.

ಜುಲೈ 2023 ರಿಂದ ಆಗಸ್ಟ್ 2024 ರವರೆಗೆ 14 ಬಾರಿ ವಿದ್ಯುತ್ ಬೆಲೆಗಳನ್ನು ಪರಿಷ್ಕರಿಸಲಾಗಿದೆ. ಈ ಏರುತ್ತಿರುವ ವಿದ್ಯುತ್ ಬೆಲೆಗಳು ಗ್ರಾಹಕರಿಗೆ 455 ಶತಕೋಟಿ ರೂಪಾಯಿಗಳ ಹೆಚ್ಚುವರಿ ವೆಚ್ಚವನ್ನು ಉಂಟುಮಾಡುತ್ತದೆ.

ಈ ಹೊಂದಾಣಿಕೆಗಳು ವಿದ್ಯುಚ್ಛಕ್ತಿಯ ಬೆಲೆಗಳಲ್ಲಿ ಗಮನಾರ್ಹ ಹೆಚ್ಚಳಕ್ಕೆ ಕಾರಣವಾಗಿವೆ, ವಿದ್ಯುತ್ ಬೆಲೆಗಳಲ್ಲಿ ಆಗಾಗ ಬದಲಾವಣೆಗಳಿಂದಾಗಿ ನಾಗರಿಕರಿಗೆ ತಮ್ಮ ವೆಚ್ಚಗಳನ್ನು ನಿರ್ವಹಿಸುವುದು ಸವಾಲಾಗಿದೆ. ಸಾರ್ವಜನಿಕರಿಗೆ ಪರಿಹಾರ ಒದಗಿಸಲು ಇಂಧನ ಹೊಂದಾಣಿಕೆ ಕಾರ್ಯವಿಧಾನವನ್ನು ಪರಿಶೀಲಿಸುವಂತೆ ಜನರು ಪಾಕಿಸ್ತಾನ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಹರ್ ಘರ್ ತಿರಂಗಾ ಅಭಿಯಾನಕ್ಕೆ ಚಾಲನೆ

ವಿವಿಧ ಇಲಾಖೆಯಿಂದ ಮೂರು ದಿನ ವೈವಿಧ್ಯಮಯ ಕಾರ್ಯಕ್ರಮ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ತಿರಂಗಾ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

> ಈಗಾಗಲೇ ಶಾಲಾ-ಕಾಲೇಜು ಹಾಗೂ ಜಿಲ್ಲೆಯ ಐತಿಹಾಸಿಕ ಸ್ಥಳಗಳಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಕಾರ್ಯಕ್ರಮ ಯಶಸ್ಸಿಗೆ ಎಲ್ಲರೂ ಕೈಜೋಡಿಸಬೇಕು.
> -ವಿನಾಯಕ ನರ್ವಾಡೆ, ಉಪ ವಿಭಾಗಾಧಿಕಾರಿ ಹಾಗೂ ಹರ್ ಘರ್ ತಿರಂಗಾ ಅಭಿಯಾನದ ನೋಡಲ್ ಅಧಿಕಾರಿ

ಮಡಿಕೇರಿ, ಆ.13-ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಜಿಲ್ಲಾಡಳಿತ ವತಿಯಿಂದ ವಿವಿಧ ಕಾರ್ಯಕ್ರಮಗಳ ಆಯೋಜನೆ ಮೂಲಕ ಮೂರು ದಿನ ಏರ್ಪಡಿಸಿರುವ ಹರ್ ಘರ್ ತಿರಂಗಾ ಅಭಿಯಾನಕ್ಕೆ ಮಂಗಳವಾರ ಚಾಲನೆ ನೀಡಲಾಯಿತು.

ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ಡಿಸಿ ವೆಂಕಟ್‌ರಾಜಾ ತಿರಂಗಾ ಅಭಿಯಾನಕ್ಕೆ ಚಾಲನೆ ನೀಡಿದರು. ಕಂದಾಯ, ಪಂಚಾಯತ್ ರಾಜ್, ಶಾಲಾ ಶಿಕ್ಷಣ ಮತ್ತು ಸಾಕ್ಷರತೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ, ನಗರಾಭಿವೃದ್ಧಿ, ಪೌರಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ವಿವಿಧ ಕಾರ್ಯಕ್ರಮಗಳು ಆರಂಭಗೊಂಡವು.

ನಂತರ ಜಿಲ್ಲಾಧಿಕಾರಿ ವೆಂಕಟ್ ರಾಜಾ ಮಾತನಾಡಿ, ಸರ್ಕಾರದ ನಿರ್ದೇಶನದಂತೆ ತಿರಂಗಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಶಾಲಾ-ಕಾಲೇಜುಗಳಲ್ಲಿ ಚಿತ್ರಕಲೆ ಹಾಗೂ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದೆ ಕಾಲ್ನಡಿಗೆ ಜಾಥಾ ಜಿಲ್ಲೆಯ ವಿವಿಧೆಡೆ ನಡೆಯಲಿದೆ. ತಿರಂಗಾ ಅಭಿಯಾನ ಪ್ರಯುಕ್ತ ಜಿಲ್ಲಾ, ತಾಲೂಕು ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ವೈವಿಧ್ಯಮಯ ಕಾರ್ಯಕ್ರಮ ಆಯೋಜಿಸಲಾಗಿದೆ. ಜೊತೆಗೆ ರಾಜಾಸೀಟ್, ಅಬ್ಬಿ ಜಲಪಾತ, ದುಬಾರೆ ಮತ್ತಿತರ ಪ್ರವಾಸಿ ಸ್ಥಳಗಳಲ್ಲಿ ಸೆಲ್ಫಿ ಪಾಯಿಂಟ್ ತೆಗೆದು ಅಪ್‌ಲೋಡ್ ಮಾಡುವಂತಾಗಬೇಕು. ಅಭಿಯಾನದಲ್ಲಿ ಭಾಗವಹಿಸುವ ಎಲ್ಲರೂ ತಮ್ಮ ಸೆಲ್ಫಿಗಳನ್ನು https://hargartiranga.comನಲ್ಲಿ ಹಂಚಿಕೊಳ್ಳಬಹುದು ಎಂದು ತಿಳಿಸಿದರು.

ನಗರಸಭೆ, ಪುರಸಭೆ ಪಟ್ಟಣ ಪಂಚಾಯಿತಿಗಳಲ್ಲಿ ಸಂವಿಧಾನ ಜಾಗೃತಿ ಕಾರ್ಯಕ್ರಮದಂತೆ ವೈವಿಧ್ಯ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ಶಾಲಾ-ಕಾಲೇಜು, ವಸತಿ ಶಾಲೆಗಳಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಅಭಿಯಾನದಲ್ಲಿ ಪ್ರತಿಯೊಬ್ಬರೂ ಪಾಲ್ಗೊಳ್ಳುವುದು ಮುಖ್ಯವಾಗಿದೆ ಎಂದರು.

ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ ನಿರ್ದೇಶಕ ವಿಶಾಲ್ ಕುಮಾರ್, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಉಪ ನಿರ್ದೇಶಕ ರಂಗಧಾಮಪ್ಪ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕಿ ಮಂಜುಳಾ, ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಬಿ.ಬಸಪ್ಪ, ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಎಸ್.ಹೊನ್ನೇಗೌಡ, ಪೌರಾಯುಕ್ತ ವಿಜಯ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ, ತಾಪಂ ಇಓ ಶೇಖರ್ ತಹಸೀಲ್ದಾರ್‌ಗಳು, ತಾಪಂ ಇಓಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ವಸತಿ ಶಾಲೆ ಪ್ರಾಂಶುಪಾಲರು, ಪುರಸಭೆ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿಗಳು ಇತರರು ಇದ್ದರು.

ಎಲ್ಲರ ಶ್ರಮದಿಂದ 7ನೇ ವೇತನ ಆಯೋಗ ಜಾರಿ



ಮಡಿಕೇರಿ ಕೊಡಗು ಗೌಡ ಸಮಾಜದಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಸಂಘದ ಜಿಲ್ಲಾಧ್ಯಕ್ಷ ಪೊನ್ನಚ್ಚನ ಶ್ರೀನಿವಾಸ ಉದ್ಘಾಟಿಸಿದರು.

ಮಡಿಕೇರಿ, ಆ.13-ಎಲ್ಲರ ಶ್ರಮದಿಂದ 7ನೇ ವೇತನ ಆಯೋಗ ಜಾರಿಯಾಗಿದೆ ಎಂದು ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಪೊನ್ನಚ್ಚನ ಶ್ರೀನಿವಾಸ ತಿಳಿಸಿದರು.

ನಗರದ ಕೊಡಗು ಗೌಡ ಸಮಾಜದಲ್ಲಿ ನಡೆದ ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಂಘದ ಸರ್ವ ಸದಸ್ಯರ ಪ್ರಯತ್ನದ ಫಲವಾಗಿ ಸಂಘದ ಹೆಸರಿಗೆ ನಿವೇಶನ ಕಾಯ್ದಿರಿಸಲಾಗಿದೆ. ಆ.17ರಂದು ಬೆಂಗಳೂರಿನಲ್ಲಿ ಕ್ರೀಡಾಕೂಟ ಆಯೋಜನೆ ಹಾಗೂ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಗಳಿಗೆ ಅಭಿನಂದನಾ ಸಮಾರಂಭ ಆಯೋಜಿಸಲಾಗಿದೆ ಎಂದರು.

ಸಂಘದ ರಾಜ್ಯ ಖಜಾಂಚಿ ಡಾ.ಎಸ್.ಸಿದ್ದರಾಮಣ್ಣ ಮಾತನಾಡಿ, ಸಂಘ ಬೆಳೆದು ಬಂದ ಹಾದಿ ಹಾಗೂ 7ನೇ ವೇತನ ಆಯೋಗದ ರೂಪುರೇಷೆಗಳ ಬಗ್ಗೆ ತಿಳಿಸಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಸಂಘದ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಸಂಘದ ಜಿಲ್ಲಾ ಉಪಾಧ್ಯಕ್ಷೆ ಬಿ.ಐ.ಚಿತ್ರಾವತಿ, ಸೋಮವಾರಪೇಟೆ ತಾಲೂಕು ಅಧ್ಯಕ್ಷ ಪ್ರದೀಪ್ ಮತ್ತು ವಿರಾಜಪೇಟೆ ತಾಲೂಕು ಅಧ್ಯಕ್ಷ ಗುರುರಾಜ್, ಕೊಡಗು ಗೌಡ ಸಮಾಜ ಅಧ್ಯಕ್ಷ ಪೇರಿಯನ ಜಯಾನಂದ, ಪ್ರೌಢಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸಿ.ಟಿ.ಸೋಮಶೇಖರ್, ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಸದಾಶಿವ ಪಲ್ಲೆದ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ನಂಜುಂಡಯ್ಯ, ವೈದ್ಯರಾದ ಡಾ.ನವೀನ್, ಡಾ.ರಾಜೇಶ್ವರಿ, ಆರೋಗ್ಯ ಇಲಾಖೆಯ ರೋಹಿಣಿ, ರಾಜೇಶ್, ವಾಹನ ಚಾಲಕರ ಸಂಘದ ಜಿಲ್ಲಾಧ್ಯಕ್ಷ ಬಾಬು, ಗುರುರಾಜ್, ಪ್ರದೀಪ್, ಅನಿತಾ ಮತ್ತಿತರರಿದ್ದರು.

ಅನುದಾನಿತ ಪಪೂ ಕಾಲೇಜು ನೌಕರರ ಸಂಘದ ಅಧ್ಯಕ್ಷರಾಗಿ ಸಿದ್ದರಾಜು ಆಯ್ಕೆ



ಮಡಿಕೇರಿ ಸಂತ ಮೈಕಲ್ ಕಾಲೇಜಿನಲ್ಲಿ ಕೊಡಗು ಜಿಲ್ಲೆ ಅನುದಾನಿತ ಪದವಿಪೂರ್ವ ಕಾಲೇಜು ನೌಕರರ ಸಂಘದ ಸಭೆ ನಡೆಯಿತು.

ವಿರಾಜಪೇಟೆ, ಆ.13-ಕೊಡಗು ಜಿಲ್ಲೆ ಅನುದಾನಿತ ಪದವಿಪೂರ್ವ ಕಾಲೇಜು ನೌಕರರ ಸಂಘದ ಅಧ್ಯಕ್ಷರಾಗಿ ಮದೆ ಮಹದೇಶ್ವರ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಬಿ.ಸಿದ್ದರಾಜು ಆಯ್ಕೆಯಾಗಿದ್ದಾರೆ.

ಮಡಿಕೇರಿ ಸಂತ ಮೈಕಲ್ ಪದವಿ ಪೂರ್ವ ಕಾಲೇಜಿನಲ್ಲಿ ನಡೆದ ಸಭೆಯಲ್ಲಿ ಸಂಘದ ಗೌರವಾಧ್ಯಕ್ಷರಾಗಿ ಚೇರಂಬಾಣೆಯ ಅರುಣ, ಪ್ರಾಂಶುಪಾಲ ಡಿ.ಎಸ್.ರಾಮಕೃಷ್ಣ, ಉಪಾಧ್ಯಕ್ಷರಾಗಿ ಉಪನ್ಯಾಸಕ ಹೇಮಂತ್ ಕುಮಾರ್, ಸಂಘಟನಾ ಕಾರ್ಯದರ್ಶಿಯಾಗಿ ಪ್ರಾಂಶುಪಾಲ ಸಿ.ಜಿ.ಮಂದಪ್ಪ, ಕಾರ್ಯದರ್ಶಿಯಾಗಿ ಪ್ರಾಂಶುಪಾಲ ಎಂ.ಎಂ.ಸೋಮಯ್ಯ, ಖಜಾಂಚಿಯಾಗಿ ಡಾ.ಹೇಮಂತ್ ಕುಮಾರ್ ಹಾಗೂ ರಾಜ್ಯ ಪ್ರತಿನಿಧಿಯಾಗಿ ಮಾದಪುರ ಡಿ.ಚೆನ್ನಮ್ಮ, ಮೋಹನ್ ಎಸ್.ಹೆಗ್ಡೆ ಹಾಗೂ ನಿರ್ದೇಶಕರಾಗಿ ಎನ್.ಎಸ್.ವಾಣಿ, ಎಸ್.ಡಿ.ದಮಯಂತಿ, ಬಿ.ಪ್ರತಿಭಾ ಗಿರಿಧರಗೌಡ, ಗೋಪಾಲ ಕೃಷ್ಣ ಭಟ್, ಡಿ.ಟಿ.ಸೋಮಶೇಖರ್, ಕೆ.ಎಸ್.ಕೃಷ್ಣ, ಹಾಗೂ ವಿ.ಎಸ್.ಶಾಂತ ಕುಮಾರ್ ಅವರನ್ನು ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಪ್ರಾಂಶುಪಾಲರಾದ ಮಹೇಶ್, ದೇವಕಿ, ವಿವಿಧ ಅನುದಾನಿತ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಗಾಂಧಿ ಸ್ಮಾರಕ ಉದ್ಯಾನ ಅಭಿವೃದ್ಧಿ ಸಮಿತಿ ಸಭೆ



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಗಾಂಧಿ ಸ್ಮಾರಕ ಉದ್ಯಾನ ಅಭಿವೃದ್ಧಿ ಸಮಿತಿ ಸಭೆಯಲ್ಲಿ ಡಿಸಿ ವೆಂಕಟ್ ರಾಜಾ ಮಾತನಾಡಿದರು.

ಮಡಿಕೇರಿ, ಆ.13-ಗಾಂಧಿ ಸ್ಮಾರಕ ಉದ್ಯಾನ ಅಭಿವೃದ್ಧಿ ಸಮಿತಿ ಸಭೆ ಜಿಲ್ಲಾಧಿಕಾರಿ ವೆಂಕಟ್ ರಾಜಾ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆಯಿತು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಸಚಿನ್ ಮಾತನಾಡಿ, ಗಾಂಧಿ ಸ್ಮಾರಕ ಉದ್ಯಾನ ಕಾಮಗಾರಿ ಪ್ರಗತಿಯಲ್ಲಿದೆ. ಸದ್ಯ 60 ಲಕ್ಷ ರೂ. ವೆಚ್ಚದಲ್ಲಿ ತಾತ್ಕಾಲಿಕ ಕಟ್ಟಡ ಕಾಮಗಾರಿ ಪೂರ್ಣಗೊಳಿಸಬಹುದು. ಉದ್ಯಾನ ಪೂರ್ಣ ಕಾಮಗಾರಿ ಗ್ರಂಥಾಲಯ, ಬೆಳಕು, ಮತ್ತಿತರ ಕಾಮಗಾರಿಗೆ ಸುಮಾರು 1.98 ಕೋಟಿ ರೂ. ಅಂದಾಜು ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಸರ್ವೋದಯ ಸಮಿತಿ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್ ಮಾತನಾಡಿ, ಸರ್ಕಾರ ರಾಜ್‌ಘಾಟ್ ಮಾದರಿಯಲ್ಲಿ ಗಾಂಧಿ ಸ್ಮಾರಕ ಉದ್ಯಾನ ನಿರ್ಮಾಣಕ್ಕೆ ಈಗಾಗಲೇ 50 ಲಕ್ಷ ರೂ. ಬಿಡುಗಡೆ ಮಾಡಿದೆ. ಕಾಮಗಾರಿ ಆರಂಭವಾಗಿದ್ದು, ಹೆಚ್ಚಿನ ಅನುದಾನ ಬಿಡುಗಡೆಗೆ ಮನವಿ ಮಾಡಲಾಗುವುದು ಎಂದರು.

ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವರು, ಸ್ಥಳೀಯ ಶಾಸಕರು ಮತ್ತು ವಿಧಾನ ಪರಿಷತ್ ಸದಸ್ಯರು ತಲಾ 5 ಲಕ್ಷ ರೂ. ನೀಡಲು ಒಪ್ಪಿಗೆ ನೀಡಿದ್ದಾರೆ. ಮತ್ತೆ 1 ಕೋಟಿ ರೂ. ಬಿಡುಗಡೆಗೆ ಸರ್ಕಾರಕ್ಕೆ ಮನವಿ ಮಾಡಲಾಗುವುದು. ಈ ಸಂಬಂಧ ಪ್ರಸ್ತಾವನೆ ಸಲ್ಲಿಕೆಗೆ ಮನವಿ ಮಾಡಿದರು.

ಬಳಿಕ ಮಾತನಾಡಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ, ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಸ್ಮಾರಕ ಉದ್ಯಾನವನ್ನು ಆಕರ್ಷಣೀಯವಾಗಿ ನಿರ್ಮಿಸಬೇಕಿದೆ. ಈಗಾಗಲೇ ಸರ್ಕಾರ ಬಿಡುಗಡೆ ಮಾಡಿರುವ ಅನುದಾನದ ಜೊತೆಗೆ ಶಾಸಕರು, ಸಂಸದರು, ವಿಧಾನ ಪರಿಷತ್ ಸದಸ್ಯರಲ್ಲೂ ಅನುದಾನ ಬಿಡುಗಡೆಗೆ ಮನವಿ ಮಾಡಲಾಗುವುದು ಎಂದು ತಿಳಿಸಿದರು.

ಈಗಾಗಲೇ ಬಿಡುಗಡೆಯಾಗಿರುವ 50 ಲಕ್ಷ ರೂ. ಜೊತೆಗೆ ಎರಡನೇ ಹಂತದಲ್ಲಿ ಹೆಚ್ಚುವರಿಯಾಗಿ 1 ಕೋಟಿ ರೂ. ಬಿಡುಗಡೆಗೆ ಪ್ರಯತ್ನಿಸಬೇಕು. ಸರ್ಕಾರದ ಹಂತದಲ್ಲಿ ಆಡಳಿತಾತ್ಮಕ ಅನುಮೋದನೆ ದೊರೆಯಬೇಕಿದೆ ಎಂದು ಹೇಳಿದರು.

ಸಭೆಯಲ್ಲಿ ಬುಧವಾರ (ಇಂದು) ಮಡಿಕೇರಿಗೆ ಆಗಮಿಸುವ ಜಿಲ್ಲಾ ಉಸ್ತುವಾರಿ ಸಚಿವರು ಗಾಂಧಿ ಸ್ಮಾರಕ ಉದ್ಯಾನ ಕಾಮಗಾರಿ ವೀಕ್ಷಿಸಲಿದ್ದು, ಹೆಚ್ಚಿನ ಅನುದಾನ ಬಿಡುಗಡೆಗೆ ಮನವಿ ಮಾಡಲು ತೀರ್ಮಾನಿಸಲಾಯಿತು. ಸರ್ವೋದಯ ಸಮಿತಿ ಜಿಲ್ಲಾಧ್ಯಕ್ಷ ಅಂಬೆಕಲ್ಲು ಕುಶಾಲಪ್ಪ, ಸದಸ್ಯರಾದ ಮುನೀರ್ ಅಹ್ಮದ್, ಕೆ.ಟಿ.ಬೇಬಿ ಮ್ಯಾಥ್ಯೂ, ಕಾನೆಹಿತ್ಲು ಮೊಣ್ಣಪ್ಪ, ರೇವತಿ ರಮೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಇತರರು ಹಾಜರಿದ್ದರು.

ಕಾರು, ಆಟೋ ಮುಖಾಮುಖಿ ಡಿಕ್ಕಿ

ಆಟೋ ಚಾಲಕನ ತಲೆಗೆ ಪೆಟ್ಟು



ಮಡಿಕೇರಿ, ಆ.13-ಕಾರು ಮತ್ತು ಆಟೋ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿದ ಪರಿಣಾಮ ಆಟೋ ಚಾಲಕ ಗಂಭೀರವಾಗಿ ಗಾಯಗೊಂಡಿರುವ ಘಟನೆ ನಾಪೋಕ್ಲು-ಮೂರ್ನಾಡು ಮುಖ್ಯ ರಸ್ತೆಯ ಬೊಳಿಬಾಣೆಯಲ್ಲಿ ನಡೆದಿದೆ.

ನಾಪೋಕ್ಲುವಿನ ಆಟೋ ಚಾಲಕ ಮಚ್ಚಂಡ ಶಂಭು ತಲೆಗೆ ಗಂಭೀರ ಗಾಯವಾಗಿದ್ದು, ಈತನನ್ನು ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಕೊಟ್ಟಮುಡಿ ಕಡೆಯಿಂದ ಮೂರ್ನಾಡು ಕಡೆಗೆ ಹೊದವಾಡ ಆಜಾದ್ ನಗರದ ನಿವಾಸಿ ಬುರ್ಹಾನ್ ಕಾರಿನಲ್ಲಿ ಹೋಗುತ್ತಿದ್ದರು. ಇದೇ ಮಚ್ಚಂಡ ಶಂಭು ಆಟೋದಲ್ಲಿ ಮೂರ್ನಾಡು ಕಡೆಯಿಂದ ನಾಪೋಕ್ಲುವಿಗೆ ಬರುತ್ತಿದ್ದರು. ಬೊಳಿಬಾಣೆ ಬಳಿಯ ರಸ್ತೆ ತಿರುವಿನಲ್ಲಿ ಮುಖಾಮುಖಿ ಡಿಕ್ಕಿ ಸಂಭವಿಸಿದೆ.

ಡಿಕ್ಕಿ ರಭಸಕ್ಕೆ ಆಟೋ ಜಖಂಗೊಂಡಿದ್ದು, ಕಾರಿನ ಮುಂಭಾಗ ಚಕ್ರ ಕಳಚಿ ಬಿದ್ದಿದೆ. ಆಟೋ ಚಾಲಕ ಮಚ್ಚಂಡ ಶಂಭು ತಲೆಗೆ ತೀವ್ರವಾಗಿ ಗಾಯವಾಗಿದೆ. ತಕ್ಷಣ ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಮಡಿಕೇರಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

ಅಪಘಾತ ನಡೆದ ಪಕ್ಕದಲ್ಲೇ ಕಾವೇರಿ ನದಿ ಹರಿಯುತ್ತಿದ್ದು, ಕೂದಲೆಳೆ ಅಂತರದಲ್ಲಿ ಆಟೋ ಚಾಲಕ ನದಿ ದಂಡೆಗೆ ಉರುಳಿ ಬಿದ್ದ ಪರಿಣಾಮ ದೊಡ್ಡ ಅನಾಹುತ ತಪ್ಪಿದಂತಾಗಿದೆ. ಈ ರಸ್ತೆಯಲ್ಲಿ ಹಲವು ಅಪಘಾತಗಳು ನಡೆದು ಪ್ರಾಣಹಾನಿ ಸಂಭವಿಸಿದ್ದು, ಸಂಬಂಧಿಸಿದ ಇಲಾಖೆ ಕೂಡಲೇ ಈ ರಸ್ತೆಬದಿಗೆ ತಡೆಗೋಡೆ ನಿರ್ಮಿಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ನಾಪೋಕ್ಲು ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅರ್ಥಪೂರ್ಣ ತಿರಂಗ ಅಭಿಯಾನ ನಡೆಸಿ

ಸ್ವಾತಂತ್ರ್ಯ ದಿನಾಚರಣೆ ಸಿದ್ಧತಾ ಸಭೆಯಲ್ಲಿ ಅಧಿಕಾರಿಗಳಿಗೆ ಡಿಸಿ ಶಿಲ್ಪನಾಗ್ ಸೂಚನೆ



ಜಿಲ್ಲಾ ಪೊಲೀಸ್ ಕವಾಯತು ಮೈದಾನಕ್ಕೆ ಜಿಲ್ಲಾಧಿಕಾರಿ ಶಿಲ್ಪನಾಗ್ ಭೇಟಿ ನೀಡಿ, ಸಿದ್ಧತೆ ಪರಿಶೀಲಿಸಿದರು.

ಪೊಲೀಸ್ ಕವಾಯತು ಮೈದಾನದಲ್ಲಿ ಕಾರ್ಯಕ್ರಮ

ಚಾಮರಾಜನಗರ: ಸತತ ಮಳೆಯಿಂದ ನಗರದ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣದಲ್ಲಿ ತೇವಾಂಶವಿರುವ ಕಾರಣ ಈ ಬಾರಿ ಸ್ವಾತಂತ್ರ್ಯೋತ್ಸವ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ನಡೆಸಲಾಗುವುದು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ತಿಳಿಸಿದ್ದಾರೆ.

ಪ್ರತಿವರ್ಷದಂತೆ ಈ ಬಾರಿ ಜಿಲ್ಲಾಡಳಿತದಿಂದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಸ್ವಾತಂತ್ರ್ಯೋತ್ಸವ ದಿನಾಚರಣೆಗೆ ಎಲ್ಲಾ ಸಿದ್ಧತೆ ಮಾಡಲಾಗಿತ್ತು. ಆದರೆ, ಸತತ ಮಳೆಯಾಗುತ್ತಿದ್ದು, ಅಂಬೇಡ್ಕರ್ ಕ್ರೀಡಾಂಗಣ ಒದ್ದೆಯಾಗಿದೆ. ಇದರಿಂದ ಪಥಸಂಚಲನ, ಸಾಂಸ್ಕೃತಿಕ ಕಾರ್ಯಕ್ರಮ ನಡೆಸಲು ತೊಂದರೆಯಾಗಿದೆ. ಹೀಗಾಗಿ ಈ ಬಾರಿ ಸ್ವಾತಂತ್ರ್ಯೋತ್ಸವ ದಿನಾಚರಣೆಯನ್ನು ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ದಿನಾಚರಣೆ ಆ.15ರಂದು ಬೆಳಗ್ಗೆ 9 ಗಂಟೆಗೆ ಪೊಲೀಸ್ ಕವಾಯತು ಮೈದಾನದಲ್ಲಿ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಧ್ವಜಾರೋಹಣ ನೆರವೇರಿಸಲಿದ್ದಾರೆ. ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದು, ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್ ಪ್ರಸಾದ್, ಎಂ.ಆರ್.ಮಂಜುನಾಥ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ, ರಾಜ್ಯ ಉಗ್ರಾಣ ನಿಗಮ ಅಧ್ಯಕ್ಷ ಎಸ್.ಜಯಣ್ಣ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಲಾಗಿದೆ.

ಚಾಮರಾಜನಗರ, ಆ.13-ಜಿಲ್ಲಾಡಳಿತ ವತಿಯಿಂದ ಸ್ವಾತಂತ್ರ್ಯೋತ್ಸವ ದಿನಾಚರಣೆ ಹಾಗೂ ಹರ್ ಘರ್ ತಿರಂಗ ಅಭಿಯಾನವನ್ನು ಅರ್ಥಪೂರ್ಣವಾಗಿ ನಡೆಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸ್ವಾತಂತ್ರ್ಯ ದಿನಾಚರಣೆ ಸಿದ್ಧತಾ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಜಿಲ್ಲಾ ಕೇಂದ್ರದಲ್ಲಿ ಆ.15ರಂದು ನಡೆಯುವ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಪಥಸಂಚಲನ, ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ಸ್ವಾತಂತ್ರ್ಯ ಹೋರಾಟದ ಮಹತ್ವ, ದೇಶಭಕ್ತಿ ಬಿಂಬಿಸುವ ಸಾಂಸ್ಕೃತಿಕ ಕಾರ್ಯಕ್ರಮಗಳು ಉತ್ತಮವಾಗಿ ಮೂಡಿಬರಬೇಕು. ಈ ನಿಟ್ಟಿನಲ್ಲಿ ಅಂತಿಮ ತಾಲೀಮು ನಡೆಸಿ ಸಿದ್ಧತೆ ಕೈಗೊಳ್ಳಬೇಕು ಎಂದು ತಿಳಿಸಿದರು.

ಹರ್ ಘರ್ ತಿರಂಗ ಅಭಿಯಾನವನ್ನು ಜಿಲ್ಲಾದ್ಯಂತ ಹಮ್ಮಿಕೊಳ್ಳಲಾಗಿದ್ದು, ಪ್ರತಿ ಮನೆ, ಸರ್ಕಾರಿ ಕಚೇರಿ ಸೇರಿದಂತೆ ವಿವಿಧೆಡೆ ರಾಷ್ಟ್ರಧ್ವಜ ಹಾರಿಸಲು ಜಾಗೃತಿ ಮೂಡಿಸಬೇಕು. ತಿರಂಗದ ಬಗ್ಗೆ ಹೆಚ್ಚು ಕಾರ್ಯಕ್ರಮ ಆಯೋಜಿಸಬೇಕು. ಅಭಿಯಾನ ಅಂಗವಾಗಿ ಸೈಕಲ್, ಬೈಕ್ ರ‍್ಯಾಲಿ, ಜಾಥಾ, ವಿವಿಧ ಕಾರ್ಯಕ್ರಮ ಆಯೋಜಿಸಬೇಕು. ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳು, ಸ್ವಸಹಾಯ ಸಂಘ-ಸಂಸ್ಥೆಗಳ ನೆರವಿನೊಂದಿಗೆ ಕಾರ್ಯಕ್ರಮ ಏರ್ಪಡಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಜಿಪಂ ಉಪಕಾರ್ಯದರ್ಶಿ ಲಕ್ಷ್ಮೀ, ಡಿವೈಎಸ್‌ಪಿ ಲಕ್ಷ್ಮಯ್ಯ, ಅಬಕಾರಿ ಉಪ ಆಯುಕ್ತ ನಾಗಶಯನ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಚಿದಂಬರ, ತಹಸೀಲ್ದಾರ್ ಗಿರಿಜಾ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಸುಧಾ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಮಂಜುನಾಥ ಪ್ರಸನ್ನ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ರಾಜು, ನಗರಸಭೆ ಆಯುಕ್ತ ಎಸ್.ವಿ.ರಾಮದಾಸ್, ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆ ಬಳಿಕ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿಲ್ಲಾ ಪೊಲೀಸ್ ಕವಾಯತು ಮೈದಾನಕ್ಕೆ ಭೇಟಿ ನೀಡಿ, ಸಿದ್ಧತೆ ವೀಕ್ಷಿಸಿದರು.

ಸಿಎಂ ಪರ ಶ್ರಮಿಕ ವರ್ಗಗಳ ಒಕ್ಕೂಟದಿಂದ ಪ್ರತಿಭಟನೆ



ಚಾಮರಾಜನಗರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಶ್ರಮಿಕ ವರ್ಗಗಳ ಒಕ್ಕೂಟದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಚಾಮರಾಜನಗರ, ಆ.13-ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ರಾಜಕೀಯವಾಗಿ ಅಸ್ಥಿರಗೊಳಿಸಲು ಬಿಜೆಪಿ ಹಾಗೂ ಜೆಡಿಎಸ್ ಷಡ್ಯಂತ್ರ ನಡೆಸುತ್ತಿವೆ ಎಂದು ಆರೋಪಿಸಿ ಶ್ರಮಿಕ ವರ್ಗಗಳ ಒಕ್ಕೂಟ ವತಿಯಿಂದ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಚಾಮರಾಜೇಶ್ವರ ದೇವಸ್ಥಾನದ ಎದುರು ಒಕ್ಕೂಟದ ಮುಖಂಡ ಪು.ಶ್ರೀನಿವಾಸ ನಾಯಕ ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತಕ್ಕೆ ತೆರಳಿ ಮಾನವ ಸರಪಳಿ ರಚಿಸಿ ಬಿಜೆಪಿ ಹಾಗೂ ಜೆಡಿಎಸ್ ನಾಯಕರ ವಿರುದ್ಧ ಘೋಷಣೆ ಕೂಗಿದರು. ನಂತರ ಬಿ.ರಾಚಯ್ಯ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅವರಿಗೆ ಮನವಿ ಸಲ್ಲಿಸಿದರು.

ಸಿದ್ದರಾಮಯ್ಯ ಅವರು ಶ್ರಮಿಕ ವರ್ಗಗಳ ಪರ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿರುವುದನ್ನು ಸಹಿಸದೆ ಬಿಜೆಪಿ, ಜೆಡಿಎಸ್ ರಾಜಕೀಯ ಅಸ್ಥಿರತೆಗೆ ಮುಂದಾಗಿವೆ. ಶ್ರಮಿಕ ವರ್ಗಗಳಿಗೆ ಸಿಗುವ ಸೌಲಭ್ಯಗಳನ್ನು ತಡೆಯುವ ಸಲುವಾಗಿ ಸಿದ್ದರಾಮಯ್ಯ ಮೇಲೆ ಇಲ್ಲಸಲ್ಲದ ಆರೋಪ ಮಾಡುತ್ತಿವೆ. ಆದ್ದರಿಂದ ಶ್ರಮಿಕ ವರ್ಗಗಳಿಗೆ ಅನ್ಯಾಯ ಹಾಗೂ ಆ ವರ್ಗಗಳ ನಾಯಕರ ಮೇಲಿನ ರಾಜಕೀಯ ಅಸ್ಥಿರತೆ ವಿರೋಧಿಸಲಾಗುವುದು ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಯಲ್ಲಿ ಜಿಪಂ ಮಾಜಿ ಅಧ್ಯಕ್ಷರಾದ ಸಿ.ಎ.ಮಹದೇವಶೆಟ್ಟಿ, ಕಾವೇರಿ ಶಿವಕುಮಾರ್, ಎಲ್.ನಾಗರಾಜು ಕಮಲ್, ಮಾಜಿ ಸದಸ್ಯರಾದ ಕೊಪ್ಪಾಳಿ ಮಹದೇವ ನಾಯಕ, ಯೋಗೇಶ್, ಶಿವಕುಮಾರ್, ಮುಖಂಡರಾದ ಜನ್ನೂರು ಮಹದೇವು, ಪಿ.ಸಂಘಸೇನ, ಎನ್.ಶಿವಮಲ್ಲು, ಬಸವನಪುರ ರಾಜಶೇಖರ್, ಚಿನ್ನಸ್ವಾಮಿ, ಮಸಗಾಪುರಸ್ವಾಮಿ, ಅಪ್ಸರ್ ಅಹಮ್ಮದ್, ನಾಗೇಂದ್ರ ನಾಯಕ, ಚಿಕ್ಕಮಹದೇವ, ನಂಜೇಗೌಡ, ಬಸಪ್ಪನಪಾಳ್ಯ ನಟರಾಜು, ಗೌಡಹಳ್ಳಿ ರಾಜೇಶ್, ನಗರಸಭಾ ಸದಸ್ಯ ಚಿನ್ನಮ್ಮ, ಮಾಜಿ ಸದಸ್ಯೆ ಪದ್ಮ ಪುರುಷೋತ್ತಮ್, ಕೆರೆಹಳ್ಳಿ ರೇವಣ್ಣ, ಬಸವಣ್ಣ, ರವಿಶಂಕರ ಮೂರ್ತಿ, ಸೋಮಣ್ಣೇಗೌಡ, ತಾಪಂ ಮಾಜಿ ಸದಸ್ಯ ಶಿವಸ್ವಾಮಿ, ಸೊತ್ತನಹುಂಡಿ ಸೋಮಣ್ಣ, ಹುಚ್ಚಯ್ಯ ಭಾಗವಹಿಸಿದ್ದರು.

ಗುಂಡಿಗೆ ಸಿಲುಕಿದ ಗ್ಯಾಸ್ ಸಿಲಿಂಡರ್ ಲಾರಿ



ಬೇಗೂರಿನ ಹೆದ್ದಾರಿಯಲ್ಲಿ ಗುಂಡಿಗೆ ಗ್ಯಾಸ್ ಸಿಲಿಂಡರ್ ಲಾರಿ ಸಿಲುಕಿರುವುದು.

ಬೇಗೂರು, ಆ.13-ಕಬಿನಿ ನೀರು ಸರಬರಾಜು ಪೈಪ್‌ಲೈನ್ ಅಳವಡಿಕೆ ಕಾಮಗಾರಿ ಗುಂಡಿಗೆ ಗ್ಯಾಸ್ ಸಿಲಿಂಡರ್ ಲಾರಿಯೊಂದು ಸಿಲುಕಿ ಅನಾಹುತದಿಂದ ಪಾರಾಗಿದೆ.

ಬೇಗೂರಿನ ರಾಷ್ಟ್ರೀಯ ಹೆದ್ದಾರಿ ಪಕ್ಕದ ಕಬಿನಿ ಕುಡಿಯುವ ನೀರಿನ ಘಟಕದಿಂದ ಗುಂಡ್ಲುಪೇಟೆಗೆ ಎಕ್ಸ್‌ಪ್ರೆಸ್ ಪೈಪ್‌ಲೈನ್ ಅಳವಡಿಕೆ ಕಾಮಗಾರಿ ನಡೆಯುತ್ತಿದ್ದು, ಗುತ್ತಿಗೆದಾರರು ಸರಿಯಾಗಿ ಗುಂಡಿ ಮುಚ್ಚದೆ ಅನಾಹುತಕ್ಕೆ ಆಹ್ವಾನ ನೀಡುತ್ತಿದೆ. ಸೋಮವಾರ ಬೇಗೂರು ಮುಖ್ಯ ರಸ್ತೆಯಿಂದ ಕಮರಹಳ್ಳಿಗೆ ಹೋಗುವ ರಸ್ತೆಯಲ್ಲಿ ಗ್ಯಾಸ್ ಸಿಲಿಂಡರ್ ಲಾರಿ ಎದುರಿನಿಂದ ಬಂದ ವಾಹನಕ್ಕೆ ದಾರಿ ನೀಡಲು ರಸ್ತೆಯ ಪಕ್ಕಕ್ಕೆ ಹೋದಾಗ ಪೈಪ್‌ಲೈನ್ ಗುಂಡಿಯಲ್ಲಿ ಲಾರಿ ಚಕ್ರ ಸಿಲುಕಿದೆ. ಸದ್ಯ ಬಾರಿ ಅನಾಹುತ ತಪ್ಪಿದಂತಾಗಿದ್ದು, ವಾಹನ ಸವಾರರು ಹಾಗೂ ಸಾರ್ವಜನಿಕರು ಗುತ್ತಿಗೆದಾರರಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಬೇಗೂರಿನ ಬ್ಯಾಂಕ್ ಆಫ್ ಬರೋಡ ಮುಂಭಾಗದ ಸರ್ವಿಸ್ ರಸ್ತೆಯನ್ನು ಅಗೆದು ಹಾಳು ಮಾಡಲಾಗಿದ್ದು, ಪೈಪ್ ಅಳವಡಿಸಿ ಹಳ್ಳಕ್ಕೆ ಮಣ್ಣು ಹಾಕಿ ಕೈತೊಳೆದುಕೊಂಡಿದ್ದಾರೆ. ಆದ್ದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಇತ್ತಕಡೆ ಗಮನಹರಿಸಿ ಗುಂಡಿಗಳನ್ನು ಮುಚ್ಚಲು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಬೃಹತ್ ಪ್ರತಿಭಟನೆ ನಡೆಸುವುದಾಗಿ ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ) ಜಿಲ್ಲಾ ಕಾರ್ಯದರ್ಶಿ ರಿಯಾಜ್ ಪಾಷ ಎಚ್ಚರಿಸಿದ್ದಾರೆ.

ವೈದ್ಯೆ ಅತ್ಯಾಚಾರ ಖಂಡಿಸಿ ಮೊಂಬತ್ತಿ ಮೆರವಣಿಗೆ



ಚಾಮರಾಜನಗರದಲ್ಲಿ ವೈದ್ಯೆ ಕೊಲೆ ಖಂಡಿಸಿ ಜೂನಿಯರ್ ಡಾಕ್ಟರ್ಸ್ ಅಸೋಸಿಯೇಷನ್ ವತಿಯಿಂದ ಮೊಂಬತ್ತಿ ಮೆರವಣಿಗೆ ನಡೆಸಲಾಯಿತು.

ಚಾಮರಾಜನಗರ, ಆ.13-ಕೋಲ್ಕತ್ತದ ಆರ್.ಜಿ.ಕರ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆ ವೈದ್ಯೆ ಮೇಲಿನ ಅತ್ಯಾಚಾರ ಮತ್ತು ಕೊಲೆ ಖಂಡಿಸಿ ಜೂನಿಯರ್ ಡಾಕ್ಟರ್ಸ್ ಅಸೋಸಿಯೇಷನ್ ವತಿಯಿಂದ ನಗರದಲ್ಲಿ ಮಂಗಳವಾರ ಮೊಂಬತ್ತಿ ಮೆರವಣಿಗೆ ಮೂಲಕ ಪ್ರತಿಭಟನೆ ನಡೆಸಲಾಯಿತು.

ಚಾಮರಾಜೇಶ್ವರ ದೇವಸ್ಥಾನ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಅಲ್ಲಿಂದ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆ ಮಾರ್ಗವಾಗಿ ಜಿಲ್ಲಾಡಳಿತ ಭವನದವರೆಗೆ ಮೊಂಬತ್ತಿ ಮೆರವಣಿಗೆ ನಡೆಸಿದರು.

ವೈದ್ಯೆ ಡಾ.ಮಾರುತಿ, ಡೀನ್ ಮಂಜುನಾಥ್, ಪ್ರಾಂಶುಪಾಲರು ಡಾ.ಗಿರೀಶ್ ವಿ.ಪಾಟೀಲ್, ಡಾ.ಕೃಷ್ಣ ಪ್ರಸಾದ್, ಡಾ.ಕಿರಣ್, ಡಾ.ಆರ್. ಮೂರ್ತಿ ಸಿ.ವಿ, ಡಾ.ಪ್ರದೀಪ್ ಎಂ.ಆರ್, ಡಾ.ಮಹೇಶ್ವರ ಎನ್, ಡಾ.ಶ್ರೀನಿವಾಸ ಕೆ, ಡಾ.ಅಜಯ್ ಕೆ.ಟಿ, ಸತೀಶ್ ಜೆ.ವಿ, ಡಾ.ಪುರುಷೋತ್ತಮ ಕೆ, ಡಾ.ಶ್ರೀಧರ್ ಪ್ರಸಾದ್ ವೈ.ಪಿ, ಡಾ.ಪವನ್ ಸಿ, ಡಾ.ಸ್ನೇಹ ಶ್ರೀ, ಡಾ.ಚೈತನ್ಯ ಆರ್, ಡಾ.ನಂದಕಿಶೋರ್ ಬಿಆರ್, ಡಾ.ತರುಣ್ ಎಸ್.ಯರಬಾಳ್ ಮತ್ತಿತರರು ಇದ್ದರು.

ಬೇಗೂರು ಠಾಣೆಯಲ್ಲಿ ಹೆಲ್ಮೆಟ್ ಜಾಗೃತಿ...



ಗುಂಡ್ಲುಪೇಟೆ ತಾಲೂಕಿನ ಬೇಗೂರು ಪೊಲೀಸ್ ಠಾಣೆಯಲ್ಲಿ ಸಾರ್ವಜನಿಕರಿಗೆ ಸಬ್ ಇನ್ಸ್‌ಪೆಕ್ಟರ್ ಚರಣ್‌ಗೌಡ ಹೆಲ್ಮೆಟ್ ಜಾಗೃತಿ ಮೂಡಿಸಿದರು. ಎಎಸ್‌ಐ ಮಹೇಶ್ ಕುಮಾರ್ ಇದ್ದರು.

ಪಿಎಂ ಸೂರ್ಯ ಘರ್ ಯೋಜನೆಯಡಿ ಜಿಲ್ಲೆಗೊಂದು 'ಮಾದರಿ ಸೌರ ಗ್ರಾಮ' ಅನುಷ್ಠಾನ

ನವದೆಹಲಿ: ಪಿಎಂ ಸೂರ್ಯ ಘರ್ ಯೋಜನೆಯಡಿ ಪ್ರತಿ ಜಿಲ್ಲೆಗೊಂದು 'ಮಾದರಿ ಸೌರ ಗ್ರಾಮ' ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ. ಮಾದರಿ ಸೌರ ಗ್ರಾಮ ಅನುಷ್ಠಾನಕ್ಕೆ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವಾಲಯದಿಂದ ಕಾರ್ಯಾಚರಣೆ ಮಾರ್ಗಸೂಚಿಯನ್ನು ಕೂಡ ಬಿಡುಗಡೆ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ದೇಶಾದ್ಯಂತ ಪ್ರತಿ ಜಿಲ್ಲೆಗೆ ಒಂದು ಮಾದರಿ ಸೌರ ಗ್ರಾಮವನ್ನು ರಚಿಸಲು ಒಟ್ಟು ನಿಗದಿಪಡಿಸಿದ್ದು, ಇದಕ್ಕಾಗಿ ಒಟ್ಟು 800 ಕೋಟಿ ರೂ. ಆರ್ಥಿಕ ವೆಚ್ಚವನ್ನು ನಿಗದಿಪಡಿಸಲಾಗಿದೆ. ಸೌರ ಮಾದರಿ ಗ್ರಾಮದಲ್ಲಿ ಪ್ರತಿ ಜಿಲ್ಲೆಯ ವಿಜೇತ ಗ್ರಾಮಕ್ಕೆ ಕೇಂದ್ರದಿಂದ ಹಣಕಾಸು ನೆರವಾಗಿ 1 ಕೋಟಿ ರೂ. ಅನುದಾನ ನೀಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಸೌರಶಕ್ತಿ ಅಳವಡಿಕೆಯನ್ನು ಉತ್ತೇಜಿಸುವ ಮತ್ತು ಗ್ರಾಮ ಸಮುದಾಯಗಳನ್ನು ಸ್ವಾವಲಂಬಿಯಾಗಿಸುವ ನಿಟ್ಟಿನಲ್ಲಿ ಈ ಹೆಜ್ಜೆ ಇರಿಸಿ ಮಾದರಿ ಸೌರ ಗ್ರಾಮ ರಚಿಸುವ ಗುರಿ ಹೊಂದಲಾಗಿದೆ ಎಂದಿದ್ದಾರೆ. ಸೌರ ಮೇಲ್ಛಾವಣಿಯ ಸೂರ್ಯ ಘರ್ ಯೋಜನೆ 75,021 ಕೋಟಿ ರೂ. ವೆಚ್ಚವನ್ನು ಹೊಂದಿದ್ದು, 2026-27ರ ಆರ್ಥಿಕ ವರ್ಷದವರೆಗೆ ಅನ್ವಯವಾಗಲಿದೆ ಎಂದು ಹೇಳಿದ್ದಾರೆ.

ಮಾರ್ಗಸೂಚಿ ವಿವರ:

● ಮಾದರಿ ಸೌರ ಗ್ರಾಮವೆಂದು ಪರಿಗಣಿಸಲು ಆ ಗ್ರಾಮವು 5,000 (ವಿಶೇಷ ವರ್ಗದ ರಾಜ್ಯಗಳಿಗೆ 2,000) ಜನಸಂಖ್ಯೆಯುಳ್ಳ ಕಂದಾಯ ಗ್ರಾಮವಾಗಿರಬೇಕು.

● ಆಯ್ಕೆ ಪ್ರಕ್ರಿಯೆ ಸ್ಪರ್ಧಾತ್ಮಕವಾಗಿದ್ದು ಅಲ್ಲಿ ಜಿಲ್ಲಾ ಮಟ್ಟದ ಸಮಿತಿಯು (DLC) ಸಂಭಾವ್ಯ ಅಭ್ಯರ್ಥಿಯ ಘೋಷಣೆಯ ನಂತರ 6 ತಿಂಗಳ ನಂತರ ಸ್ಥಾಪಿಸಲಾದ ಒಟ್ಟಾರೆ ವಿತರಿಸಿದ ನವೀಕರಿಸಬಹುದಾದ ಶಕ್ತಿ (RE) ಸಾಮರ್ಥ್ಯದ ಮೇಲೆ ಗ್ರಾಮಗಳನ್ನು ಮೌಲ್ಯಮಾಪನ ಮಾಡಲಾಗುತ್ತದೆ.

● ಅತಿ ಹೆಚ್ಚಿನ RE ಸಾಮರ್ಥ್ಯ ಹೊಂದಿರುವ ಪ್ರತಿ ಜಿಲ್ಲೆಯ ವಿಜೇತ ಗ್ರಾಮಕ್ಕೆ 1 ಕೋಟಿ ರೂ ಕೇಂದ್ರ ಹಣಕಾಸು ನೆರವು ಸಿಗಲಿದೆ.

● ಈ ಯೋಜನೆಯ ಅನುಷ್ಠಾನವನ್ನು ರಾಜ್ಯ/ಕೇಂದ್ರಾಡಳಿತ ಪ್ರದೇಶದ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ಏಜೆನ್ಸಿಯು ಜಿಲ್ಲಾ ಮಟ್ಟದ ಸಮಿತಿಯ (DLC) ಮೇಲ್ವಿಚಾರಣೆಯಲ್ಲಿ ಮಾಡುತ್ತದೆ. ಆಯ್ದ ಗ್ರಾಮಗಳು ಸೌರಶಕ್ತಿ-ಚಾಲಿತ ಸಮುದಾಯಗಳಿಗೆ ಪರಿಣಾಮಕಾರಿಯಾಗಿ ಪರಿವರ್ತನೆಯಾಗುವುದನ್ನು ಖಚಿತಪಡಿಸುತ್ತದೆ ಮತ್ತು ದೇಶದಾದ್ಯಂತ ಇತರ ಹಳ್ಳಿಗಳಿಗೆ ಮಾದರಿಯಾಗಿ ಕಾರ್ಯ ನಿರ್ವಹಿಸುತ್ತದೆ.

ಒಂದನೇ ಪುಟದಿಂದ

ಎರಡು ಅರ್ಜಿ ವಿಚಾರಣೆ ಮುಂದೂಡಿಕೆ


ಸಂತೋಷ್ ಗಜಾನನ ಭಟ್, ನನ್ನ ಮುಂದೆ ಮೂರು ಆಯ್ಕೆಗಳಿವೆ, ಖಾಸಗಿ ದೂರು ತಿರಸ್ಕರಿಸುವ ಪೂರ್ವ ಅನುಮತಿ ಬೇಕಿಲ್ಲ, ಪೊಲೀಸರಿಗೆ ತನಿಖೆ ನಡೆಸಲು ಪೂರ್ವಾನುಮತಿ ಬೇಕು, ಮೊಕದ್ದಮೆಯನ್ನು ಪರಿಜ್ಞಾನಕ್ಕೆ ಪಡೆಯುವಾಗಲೂ ಪೂರ್ವಾನುಮತಿ ಬೇಕು. ಹೀಗಾಗಿ ರಾಜ್ಯಪಾಲರ ಪೂರ್ವಾನುಮತಿ ಇಲ್ಲದೆ, ತೀರ್ಮಾನ ಹೇಗೆ ಸಾಧ್ಯ ಎಂದು ದೂರುದಾರರ ಪರ ವಕೀಲರಿಗೆ ನ್ಯಾಯಾಧೀಶರು ಪ್ರಶ್ನೆ ಮಾಡಿದರು.

ಸೆಕ್ಷನ್ 19ರಡಿ ಮೊಕದ್ದಮೆ ಸ್ವೀಕರಿಸಲು ಈ ಹಂತದಲ್ಲಿ ಪೂರ್ವಾನುಮತಿ ಬೇಕಿಲ್ಲ, ಕನಿಷ್ಠ ಪಕ್ಷ ಭಾರತೀಯ ನ್ಯಾಯಸಂಹಿತೆ (ಬಿಎನ್‌ಎಸ್) ಅಡಿ ನ್ಯಾಯಾಲಯ ವಿಚಾರಣೆಗೆ ಸ್ವೀಕರಿಸಬಹುದು ಎಂದು ವಕೀಲರು ವಾದ ಮಂಡಿಸಿದರು. ತದನಂತರ ಟಿ.ಜೆ.ಅಬ್ರಹಾಂ ಮುಖ್ಯಮಂತ್ರಿ ವಿರುದ್ಧವೇ ಮತ್ತೊಂದು ಮೊಕದ್ದಮೆ ದಾಖಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ವಿಚಾರಣೆಗೆ ತೆಗೆದುಕೊಂಡಿತು ಅಬ್ರಹಾಂ ಅವರೇ ವಾದ ಮಂಡಿಸಿ, ಭೂಮಿ ಸ್ವಾಧೀನವಾದಾಗಲೇ ಮುಡಾಗೆ ಹಸ್ತಾಂತರವಾಗಿದೆ, ಮುಡಾ ಭೂಮಿಯಲ್ಲಿ ನಿವೇಶನ ನಿರ್ಮಿಸಿ ಹಂಚಿಕೆ ಮಾಡಿದೆ, ಜಮೀನೇ ಇಲ್ಲದ ಭೂಮಿ ಮಾರಾಟ ಸಾಧ್ಯವಿಲ್ಲ. ಜಮೀನು ಮಾರಾಟ ಮಾಡಿರುವುದೇ ಮೋಸದ ಹಸ್ತಾಂತರ, ಅದಾಗಲೇ ಬಡಾವಣೆ ಆಗಿದ್ದ ಜಮೀನನ್ನು ಕೃಷಿ ಜಮೀನೆಂದು ಪರಿಗಣಿಸಲಾಗಿದೆ.

ಸಿದ್ದರಾಮಯ್ಯ ಅವರ ಒತ್ತಡದ ಮೇಲೆಯೇ ಜಮೀನು ಪರಿವರ್ತನೆ ಮಾಡಲಾಗಿದೆ, ಕಾನೂನುಬಾಹಿರ ಭೂಪರಿವರ್ತನೆ ಮೂಲಕ ಅಧಿಕಾರ ದುರುಪಯೋಗವಾಗಿದೆ. ಭೂಸ್ವಾಧೀನಕ್ಕೆ ಬದಲಿ ನಿವೇಶನ ಪಡೆಯುವಾಗಲೂ ಕಾನೂನು ಉಲ್ಲಂಘನೆಯಾಗಿದೆ, ಹಳೇ ಬಡಾವಣೆಯಲ್ಲಿ ನಿವೇಶನ ಪಡೆದಿದ್ದಾರೆ ಎಂದರು.

ಇದರ ಮಧ್ಯೆ ವಕೀಲರಾದ ಆಲಂ ಪಾಷ ಮಧ್ಯಂತರ ಅರ್ಜಿ ಸಲ್ಲಿಸಿ, ಪ್ರಾಸಿಕ್ಯೂಷನ್‌ಗೆ ಅನುಮತಿ ಇಲ್ಲದೆ ವಿಚಾರಣೆ ನಡೆಸಬಾರದೆಂದು ನ್ಯಾಯಾಲಯಕ್ಕೆ ಮನವಿ ಮಾಡಿದರು. ಯಾವ ಕಾನೂನಿನಡಿ ನೀವು ಅರ್ಜಿ ಸಲ್ಲಿಸಿದ್ದೀರಾ ಎಂದು ವಕೀಲರನ್ನು ಪ್ರಶ್ನಿಸಿದ ನ್ಯಾಯಾಧೀಶರು, ಸಾರ್ವಜನಿಕ ಹಿತಾಸಕ್ತಿ ಮೇಲೆ ಅರ್ಜಿ ಸಲ್ಲಿಸಿದ್ದೇನೆ ಎಂದಾಗ, ಸ್ನೇಹಮಯಿ ಕೃಷ್ಣ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿ ಈ ಹಂತದಲ್ಲಿ ಸಂಬಂಧವಿಲ್ಲದ ವ್ಯಕ್ತಿಯ ವಾದ ಆಲಿಸಬಾರದು. ನ್ಯಾಯಾಲಯದ ಸಮಯ ವ್ಯರ್ಥ ಮಾಡಿರುವುದಕ್ಕೆ ದಂಡ ವಿಧಿಸಬೇಕು ಎಂದು ಮನವಿ ಮಾಡಿದರು. ಕೋರ್ಟ್‌ನಲ್ಲಿ ತಮಾಷೆ ಮಾಡುತ್ತಿದ್ದೀರಾ ಎಂದು ಆಲಂ ಪಾಷ ಅವರನ್ನು ತರಾಟೆಗೆ ತೆಗೆದುಕೊಂಡ ನ್ಯಾಯಾಧೀಶರು, ಅವರ ಅರ್ಜಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಅರ್ಜಿ ತಿರಸ್ಕರಿಸಿದರು.

ವೃದ್ಧೆಯನ್ನು ಹೊತ್ತೊಯ್ದ ಸಂಬಂಧಿಕರು



ವ್ಹೀಲ್‌ಚೇರ್ ಅನ್ನು ಮಂಚಕ್ಕೆ ಸರಪಳಿಯಲ್ಲಿ ಬೀಗ ಹಾಕಿರುವುದು.

ಸಾರ್ವಜನಿಕರೊಬ್ಬರು ಅದನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್‌ಗೌಡ ಅವರಿಗೆ ರವಾನಿಸಿದ್ದರು. ಅದನ್ನು ಕಂಡು ಗರಂ ಆದ ಶಾಸಕರು, ತಕ್ಷಣವೇ ಆಸ್ಪತ್ರೆಯ ಡಾ. ದಾಕ್ಷಾಯಿಣಿ ಮತ್ತು ವ್ಯವಸ್ಥಾಪಕಿ ಶೋಭಾ ಅವರಿಗೆ ಕರೆ ಮಾಡಿ ತೀವ್ರವಾಗಿ ತರಾಟೆಗೆ ತೆಗೆದುಕೊಂಡರು. ತಕ್ಷಣವೇ ರೋಗಿಗಳಿಗೆ ತೊಂದರೆಯಾಗದಂತೆ ಕ್ರಮ ವಹಿಸಬೇಕು ಎಂದು ತಾಕೀತು ಮಾಡಿದರು. ಅಷ್ಟಕ್ಕೇ ನಿಲ್ಲದ ಶಾಸಕರು, ಕೆಲವೇ ನಿಮಿಷಗಳಲ್ಲಿ ಆಸ್ಪತ್ರೆಗೆ ದೌಡಾಯಿಸಿ ಪರಿಸ್ಥಿತಿಯನ್ನು ಕಂಡು ಹೌಹಾರಿದರು. ಮಂಚಕ್ಕೆ ಚೈನ್‌ನಿಂದ ಕಟ್ಟಿಹಾಕಿದ್ದ ವ್ಹೀಲ್ ಚೇರ್ ಅನ್ನು ತೆರವುಗೊಳಿಸಿ ರೋಗಿ ಗಳಿಗೆ ಬಳಸಲು ನೀಡುವಂತೆ ಹೇಳಿದರು.

ಡಾ. ದಾಕ್ಷಾಯಿಣಿ ಮತ್ತು ಶೋಭಾ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡ ಅವರು, ಆಸ್ಪತ್ರೆಯಲ್ಲಿ ಯಾಕೆ ವ್ಹೀಲ್ ಚೇರ್ ಕೊಡುತ್ತಿಲ್ಲ? ಎಷ್ಟು ವ್ಹೀಲ್ ಚೇರ್‌ಗಳಿವೆ? ಕೊರತೆ ಇದ್ದರೆ ಯಾಕೆ ತಿಳಿಸಲಿಲ್ಲ? ಜವಾಬ್ದಾರಿಯುತವಾಗಿರುವ ನೀವು ಇದನ್ನೆಲ್ಲಾ ನೋಡಿಕೊಳ್ಳಬೇಕಲ್ಲವೇ? 80 ವರ್ಷದ ಮಹಿಳೆಯನ್ನು ಪ್ಲಾಸ್ಟಿಕ್ ಚೇರ್‌ನಲ್ಲಿ ಮೆಟ್ಟಿಲ ಮೇಲೆ ಹೊತ್ತೊಯ್ಯುವಾಗ ಕೈಜಾರಿ ಬಿದ್ದಿದ್ದರೆ ಏನು ಗತಿ? ಆಗ ನೀವೇ ಅಲ್ಲವೇ ಶಿಕ್ಷೆಗೊಳಗಾಗುತ್ತಿದ್ದಿರಿ ಎಂದು ಆಕ್ರೋಶ ವ್ಯಕ್ತಪಡಿಸಿದ್ದಲ್ಲದೇ, ಮುಖ್ಯಮಂತ್ರಿಗಳ ತವರು ಜಿಲ್ಲೆಯಲ್ಲಿ ಸರ್ಕಾರಕ್ಕೆ ಕೆಟ್ಟ ಹೆಸರು ತರುತ್ತಿದ್ದೀರಿ ಎಂದು ಗರಂ ಆದರು.

ವ್ಯವಸ್ಥಾಪಕಿ ಶೋಭಾ ಅವರನ್ನುದ್ದೇಶಿಸಿ ಇದನ್ನೆಲ್ಲಾ ನಿರ್ವಹಿಸಬೇಕಾಗಿರುವುದು ನೀವಲ್ಲವೇ? ಎಂದು ಆಕ್ರೋಶದಿಂದ ಕೇಳಿದಾಗ ಶೋಭಾ ಅವರು ಕಣ್ಣೀರು ಹಾಕಿದ್ದಲ್ಲದೇ, 'ನನಗೆ ಈ ಕೆಲಸವೇ ಬೇಡ ಸಾರ್, ರಾಜೀನಾಮೆ ಕೊಟ್ಟುಬಿಡು ತ್ತೇನೆ' ಎಂದು ಹತಾಶರಾಗಿ ನುಡಿದರು. ಅಲ್ಲಿಂದ ತೆರಳಲಾರಂಭಿಸಿದರು. ಅವರನ್ನು ಕರೆದ ಶಾಸಕರು, ಅಲ್ಲಮ್ಮಾ, ನೀವು ರಾಜೀನಾಮೆ ಕೊಟ್ಟರೆ ಸಮಸ್ಯೆ ಇತ್ಯರ್ಥ ವಾಗಿಬಿಡುತ್ತದೆಯೇ? ಜವಾಬ್ದಾರಿ ಯುತವಾಗಿ ನಡೆದುಕೊಳ್ಳಬಾರದೇ? ಹತಾಶರಾಗುವುದು ಯಾಕೆ ಎಂದು ಸಮಾಧಾನಪಡಿಸಿದರು.

ಆಸ್ಪತ್ರೆಯಲ್ಲಿ ವ್ಹೀಲ್ ಚೇರ್ ಮತ್ತು ಸ್ಟ್ರೆಚರ್‌ಗಳನ್ನು ಒಂದು ಕೊಠಡಿಯಲ್ಲಿ ಇರಿಸಲಾಗಿದೆ ಎಂದು ಅರಿತ ಶಾಸಕರು, ಡೀನ್ ಮತ್ತು ವ್ಯವಸ್ಥಾಪಕರನ್ನೊಳಗೊಂಡು ಕೊಠಡಿ ಬಳಿಗೆ ತೆರಳಿದಾಗ ಅದಕ್ಕೆ ಬೀಗ ಜಡಿಯಲಾಗಿತ್ತು. ಅದರ ಕೀ ಎಲ್ಲಿದೆ ಎಂಬುದೇ ಯಾರಿಗೂ ಗೊತ್ತಿರಲಿಲ್ಲ. ಈ ವೇಳೆ ಆಸ್ಪತ್ರೆಯ ಸಿಬ್ಬಂದಿ ಶಾಸಕರ ಸಮ್ಮುಖದಲ್ಲೇ ಕಲ್ಲಿನಿಂದ ಜಜ್ಜಿ ಬೀಗವನ್ನು ಒಡೆದು ಕೊಠಡಿಯನ್ನು ತೆರೆದರು. ಅಲ್ಲಿ ವ್ಹೀಲ್ ಚೇರ್‌ಗಳು ಮತ್ತು ಸ್ಟ್ರೆಚರ್‌ಗಳು ಬಿದ್ದಿರುವುದು ಕಂಡು ಬಂತು.

ಈ ಆಸ್ಪತ್ರೆಯಲ್ಲಿ ಇದರ ನಿರ್ವಹಣೆ ಯನ್ನು ಹೊರಗುತ್ತಿಗೆ ನೀಡಲಾಗಿದೆ ಎನ್ನಲಾಗಿದ್ದು, ಹೊರ ಗುತ್ತಿಗೆ ಮೇಲೆ ಕೆಲಸ ಮಾಡುವ ವಾರ್ಡ್ ಬಾಯ್‌ಗಳು ಮತ್ತು ಆಯಾಗಳು ವೈದ್ಯರು ಹಾಗೂ ಸಿಬ್ಬಂದಿಯ ಮಾತೇ ಕೇಳದೇ ತಮ್ಮ ಇಷ್ಟದಂತೆ ನಡೆಸುಕೊಳ್ಳುತ್ತಿರುವುದೇ ಈ ಅವಾಂತರಕ್ಕೆ ಕಾರಣ. ಅಲ್ಲದೇ ಇದರ ಮೇಲುಸ್ತುವಾರಿ ವಹಿಸಿಕೊಂಡಿರುವ ವ್ಯವಸ್ಥಾಪಕಿ ಶೋಭಾ ಅವರು ಹತಾಶರಾಗಿ ಕಣ್ಣೀರಿಟ್ಟು, ರಾಜೀನಾಮೆ ಕೊಡುವು ದಾಗಿ ಹೇಳಿದ್ದು ಈ ಕಾರಣದಿಂದಲೇ ಎಂಬುದನ್ನು ಮನವರಿಕೆ ಮಾಡಿಕೊಂಡ ಶಾಸಕರು, ತಕ್ಷಣವೇ ಈಗಿರುವ ಹೊರ ಗುತ್ತಿಗೆದಾರರನ್ನು ಹೊರಗಟ್ಟಿ ಹೊಸಬರನ್ನು ನೇಮಿಸಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಡೀನ್ ದಾಕ್ಷಾಯಿಣಿ ಅವರಿಗೆ ಸೂಚಿಸಿದರು.

ಅಧ್ಯಕ್ಷೆಯಾಗಿ ಸೌಮ್ಯಾ ರೆಡ್ಡಿ ನೇಮಕ

ನಂದಿತಾ ಹೂದಾ ಅವರನ್ನು ಕಾಂಗ್ರೆಸ್ ಹೈಕಮಾಂಡ್ ನೇಮಕಗೊಳಿಸಿದ್ದು, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅಂಗೀಕಾರ ಪತ್ರ ಪ್ರಕಟಣೆ ಹೊರಡಿಸಿದ್ದಾರೆ. ಜಯನಗರದ ಮಾಜಿ ಶಾಸಕಿ ಸೌಮ್ಯಾ ರೆಡ್ಡಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದಿಂದ ಸ್ಪರ್ಧಿಸಿ ಪರಾಜಿತರಾಗಿದ್ದರು. ಮೈಸೂರಿನ ಐಶ್ವರ್ಯ ಮಹದೇವ್, ನಯನಾ ಮೋಟಮ್ಮ, ವೀಣಾ ಕಾಶಪ್ಪನವರ್, ಕವಿತಾ ರೆಡ್ಡಿ, ಕುಸುಮ ಹೆಚ್ ಆಕ್ಷ ಕಮಲಾಕ್ಷಿ ಮತ್ತಿತರರು ಕೂಡ ಆಕಾಂಕ್ಷಿಗಳಾಗಿದ್ದರು. ಬಿಬಿಎಂಪಿ ಚುನಾವಣೆ ಹೊತ್ತಿನಲ್ಲಿ ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಬಳಗದಲ್ಲಿ ಗುರುತಿಸಿಕೊಂಡಿರುವ ಸೌಮ್ಯಾ ರೆಡ್ಡಿ ಅವರನ್ನು ಅಂತಿಮವಾಗಿ ಆಯ್ಕೆ ಮಾಡಲಾಗಿದೆ. 2018ರಿಂದ ಈವರೆಗೆ ಮೈಸೂರಿನ ಪುಷ್ಪಾ ಅಮರನಾಥ್ ಈ ಸ್ಥಾನದಲ್ಲಿದ್ದರು.


ವಿದ್ಯಾರ್ಥಿಗಳು ದೇಶ ಮೊದಲು ಎಂಬ ಚಿಂತನೆಗೆ ಪ್ರಥಮ ಆದ್ಯತೆ ನೀಡಬೇಕು

ಸಂಸದ ಯದುವೀರ್ ಕಿವಿಮಾತು

ಮೈಸೂರು, ಆ.13(ಎಸ್‌ಪಿಎನ್)–ದೇಶಕ್ಕಿಂತ ಮಿಗಿಲಾದ ಸಂಗತಿ ಇನ್ನೊಂದಿಲ್ಲ ಹಾಗಾಗಿ ವಿದ್ಯಾರ್ಥಿಗಳಲ್ಲಿ ದೇಶ ಮೊದಲು ಎಂಬ ಚಿಂತನೆ ಬದುಕಿನ ಪ್ರಥಮ ಆದ್ಯತೆಯಾಗಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಿವಿಮಾತು ಹೇಳಿದರು.

ಮೈಸೂರು ಹೊರವಲಯದ ಪೂರ್ಣಚೇತನ ವಿದ್ಯಾಸಂಸ್ಥೆ ಆವರಣದಲ್ಲಿ 78ನೇ ಸ್ವಾತಂತ್ರ್ಯ ದಿನಾಚರಣೆ ಹಾಗೂ ಪುನರ್ ಬಳಕೆಯ ಒರಿಗಾಮಿ ಚೆಂಡುಗಳ ಮೂಲಕ 12x8 ಮೀಟರ್ ಅಳತೆಯ ಅತೀ ದೊಡ್ಡದಾದ ರಾಷ್ಟ್ರಧ್ವಜವನ್ನು 4 ಗಂಟೆ 5 ನಿಮಿಷದಲ್ಲಿ ತಯಾರಿಸಿ, ವಿಶ್ವದಾಖಲೆ ನಿರ್ಮಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ನಮ್ಮ ಹೆಮ್ಮೆಯ ಪ್ರಧಾನ ಮಂತ್ರಿ ನರೇಂದ್ರಮೋದಿ ಅವರು, 2047ರ ವಿಕಸಿತ ಭಾರತದ ಕನಸ್ಸನ್ನು ಇಂದಿನ ಯುವ ಪೀಳಿಗೆಗೆ ನೀಡಿದ್ದಾರೆ. ಇದನ್ನು ಸಾಧಿಸುವ ನಿಟ್ಟಿನಲ್ಲಿ ಯುವಕರ ಕಾರ್ಯೋನ್ಮುಖರಾಗಬೇಕು. ದೇಶದ ಪ್ರಗತಿಯಲ್ಲಿ ತಮ್ಮ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವ ಮೂಲಕ ಇಂದಿನ ಯುವ ಪೀಳಿಗೆ ಸಾಧ್ಯವಾದಷ್ಟು ಕೊಡುಗೆ ನೀಡಬೇಕು ಎಂದು ಸಲಹೆ ಹೇಳಿದರು.



ಪೂರ್ಣಚೇತನ ವಿದ್ಯಾಸಂಸ್ಥೆ ಆವರಣದಲ್ಲಿ ಪುನರ್ ಬಳಕೆಯ ಒರಿಗಾಮಿ ಚೆಂಡುಗಳ ಮೂಲಕ ಅತೀ ದೊಡ್ಡದಾದ ರಾಷ್ಟ್ರಧ್ವಜವನ್ನು 4 ಗಂಟೆ 5 ನಿಮಿಷದಲ್ಲಿ ತಯಾರಿಸಿ, ವಿಶ್ವದಾಖಲೆ ನಿರ್ಮಿಸುವ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಪಾಲ್ಗೊಂಡಿದ್ದರು.

ಜಗತ್ತಿನ ಇತರೆ ರಾಷ್ಟ್ರಗಳ ಸಾಲಿನಲ್ಲಿ ಭಾರತ ವಿಶ್ವಗುರುವಾಗಿ ಹೊರಹೊಮ್ಮುತ್ತಿದೆ. ಈ ಸಾಧನೆಗಾಗಿ ನಾವು ಸದಾ ತ್ಯಾಗಮಯಿಗಳಾಗಬೇಕು ಎಂದ ಸಂಸದ ಯದುವೀರ್, ಈ ದೇಶದ ಇತಿಹಾಸದಲ್ಲಿ ಮೈಸೂರಿಗೆ ಪ್ರಮುಖ ಸ್ಥಾನವಿದೆ. ಅದನ್ನು ಮುಂದುವರೆಸಿಕೊಂಡು ಹೋಗುವ ಜವಾಬ್ದಾರಿ ಇಂದಿನ ಪೀಳಿಗೆ ಮೇಲಿದೆ ಎಂದು ಅಭಿಪ್ರಾಯಪಟ್ಟರು.

ಪೂರ್ಣಚೇತನ ಶಾಲೆಯ ಒಂದರಿಂದ ಹತ್ತನೇ ತರಗತಿಯವರೆಗಿನ ಸುಮಾರು 530 ವಿದ್ಯಾರ್ಥಿಗಳು ಕಣ್ಣಿಗೆ ಬಟ್ಟೆ ಕಟ್ಟಿ ಐದು ನಿಮಿಷಗಳ ಕವಾಯಿತು ನಡೆಸಿದರು. ಅಲ್ಲದೆ. ಪುನರ್ ಬಳಕೆ ಒರಿಗಾಮಿ ಚೆಂಡುಗಳ ಮೂಲಕ ಅತೀ ದೊಡ್ಡದಾದ ರಾಷ್ಟ್ರಧ್ವಜ ತಯಾರಿಸಿ ಇಲ್ಲಿನ ವಿದ್ಯಾರ್ಥಿಗಳು ವಿಶ್ವದಾಖಲೆ ನಿರ್ಮಿಸಿದ್ದು, ಈ ದಾಖಲೆಗೆ ಶಿಕ್ಷಕ ವೃಂದ ಶ್ರಮಿಸಿರುವುದು ಸಂತೋಷ ಸಂಗತಿ ಎಂದರು.

ಈ ವೇಳೆ ಎಲೈಟ್ ವರ್ಲ್ಡ್ ರೆಕಾರ್ಡ್ಸ್‌ನ ತೀರ್ಪುಗಾರರಾದ ಭಾವನಾ ನವನೀತ್, ಏಷ್ಯನ್ ರೆಕಾರ್ಡ್ಸ್ ಅಕಾಡೆಮಿ ಮತ್ತು ಇಂಡಿಯಾ ರೆಕಾರ್ಡ್ಸ್ ಅಕಾಡೆಮಿಯ ತೀರ್ಪುಗಾರರಾದ ಪಿ.ಜಿ. ಪ್ರತಿಭಾ ಅವರು ಒರಿಗಾಮಿ ರಾಷ್ಟ್ರಧ್ವಜದ ವಿಶ್ವ ದಾಖಲೆಯ ಪ್ರಮಾಣ ಪತ್ರವನ್ನು ವಿತರಿಸಿದರು. ಈ ಸಂದರ್ಭದಲ್ಲಿ ಶಾಲೆಯ ಅಧ್ಯಕ್ಷ ಡಾ. ಎಂ.ಆರ್.ರಜನಿ, ಪ್ರಾಂಶುಪಾಲೆ ಬಿ.ಪ್ರಿಯಾಂಕ, ಶಾಲೆಯ ಸಿಇಓ ಬಿ.ದರ್ಶನ್ ರಾಜ್, ಮುಖ್ಯ ಆಡಳಿತಾಧಿಕಾರಿ ಮಾಧುರ್ಯ, ಲಾವಣ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಜಿಎಸ್‌ಟಿ ಹೊರತುಪಡಿಸಿ ಕಾಮಗಾರಿಗಳಿಗೆ ಟೆಂಡರ್: ಸರ್ಕಾರ ಸುತ್ತೋಲೆ

ಬೆಂಗಳೂರು, ಆ. 13– ಜಿಎಸ್‌ಟಿ ಹೊರತುಪಡಿಸಿ ಕಾಮಗಾರಿಗಳಿಗೆ ಟೆಂಡರ್ ಕರೆಯಬೇಕು ಎಂದು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದೆ.

ಸರ್ಕಾರದಿಂದ ಅನುಮೋದಿಸಲಾದ ಏಕರೂಪ ಅನುಸೂಚಿ ದರಗಳ ಅನ್ವಯ, ಅಂದಾಜು ಪಟ್ಟಿಯಲ್ಲಿ ಜಿಎಸ್‌ಟಿ ಮೊತ್ತವನ್ನು ಹೊರತುಪಡಿಸಿ ಟೆಂಡರ್ ಆಹ್ವಾನಿಸಬೇಕು ಎಂದು ಆರ್ಥಿಕ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಸುತ್ತೋಲೆ ಹೊರಡಿಸಿದ್ದಾರೆ.

ಗುತ್ತಿಗೆದಾರರು ಟೆಂಡರ್‌ಗಿಟ್ಟ ಮೊತ್ತಕ್ಕೆ ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ತುಲನೆ ಮಾಡಿ ಎಲ್ 1 ಟೆಂಡರ್‌ದಾರರನ್ನು ನಿರ್ಧರಿಸಲು ತಂತ್ರಾಂಶದಲ್ಲಿ ಕ್ರಮ ವಹಿಸಬೇಕು. ಟೆಂಡರ್‌ಗಿಟ್ಟ ಮೊತ್ತಕ್ಕೆ ಮಾತ್ರ ಇಎಂಡಿ, ಖಾತರಿ/ಭದ್ರತೆಗಳನ್ನು ಪಡೆಯಬೇಕು. ಟೆಂಡರ್‌ಗಿಟ್ಟ ಮೊತ್ತ ಹಾಗೂ ಜಿಎಸ್‌ಟಿ ಮೊತ್ತ ಸೇರಿದಂತೆ ಒಟ್ಟಾರೆ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳಬೇಕು ಎಂದು ರಾಜ್ಯದ ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಯದರ್ಶಿಗಳಿಗೆ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಇದಲ್ಲದೆ, ಜಿಎಸ್‌ಟಿ ವ್ಯತ್ಯಾಸ ಮೊತ್ತವನ್ನು ಸರ್ಕಾರದ ವತಿಯಿಂದ ಪಾವತಿಸಲು ಸುತ್ತೋಲೆ ಹೊರಡಿಸಲಾಗಿದೆ. ಮುಂದಿನ ಕಾಮಗಾರಿಗಳಿಗೆ, ಪರಿಷ್ಕರಣೆಯಾದಂತೆ ಜಿಎಸ್‌ಟಿ ಪಾವತಿಸಲು ಸರ್ಕಾರ ಮತ್ತು ಗುತ್ತಿಗೆದಾರರು ಬದ್ಧರಾಗಿರುತ್ತಾರೆ ಎಂಬ ಅಂಶವನ್ನು ಸೇರಿಸಿ ಪೂರಕ ಒಪ್ಪಂದ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಶೇ 12ರಷ್ಟು ಜಿಎಸ್‌ಟಿಗೆ ಕಾರ್ಯಾದೇಶ ನೀಡಲಾಯಿತು. 2017ರಿಂದ ಜಿಎಸ್‌ಟಿ ಶೇ 18ಕ್ಕೆ ಹೆಚ್ಚಾಯಿತು. ಶೇ 6ರಷ್ಟು ಹೆಚ್ಚುವರಿ ಜಿಎಸ್‌ಟಿಯನ್ನು ಗುತ್ತಿಗೆದಾರರು ಪಾವತಿಸಬೇಕಾಗಿತ್ತು. ಅದಕ್ಕೆ ಈಗ ವಿನಾಯಿತಿ ನೀಡಲಾಗಿದೆ.

ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ನೇತೃತ್ವದ ಬಿಬಿಎಂಪಿ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳಿಂದ ಮನವಿ ಸ್ವೀಕರಿಸಿದ ನಂತರ, ಜಿಎಸ್‌ಟಿ ಮೊತ್ತ ಸೇರಿಸಿ ಟೆಂಡರ್ ಕರೆಯುವುದನ್ನು ರದ್ದುಪಡಿಸಲು ಆರ್ಥಿಕ ಇಲಾಖೆಗೆ ನಿರ್ದೇಶಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜೂನ್ 3ರಂದು ಭರವಸೆ ನೀಡಿದ್ದರು.

ಕಳ್ಳತನಕ್ಕೆ ಹೊಂಚು ಹಾಕುತ್ತಿದ್ದ ಖದೀಮನ ಬಂಧನ

ಮೈಸೂರು, ಆ.13(ಎಸ್‌ಬಿಡಿ)– ಕಳ್ಳತನಕ್ಕೆ ಹೊಂಚು ಹಾಕುತ್ತಿದ್ದ ಖದೀಮನನ್ನು ಮೈಸೂರಿನ ಸರಸ್ವತಿಪುರಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆಂಧ್ರಪ್ರದೇಶ ಮೂಲದ ನಯೀಮ್ ಖಾನ್(38) ಬಂಧಿತನಾಗಿದ್ದು, ಎಸ್‌ಬಿಎಂ ಬಡಾವಣೆಯಲ್ಲಿ ಕಳ್ಳತನಕ್ಕೆ ಹೊಂಚುಹಾಕುತ್ತಿದ್ದಾಗ ಸೋಮವಾರ ಸಂಜೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

ಸರಸ್ವತಿಪುರಂ ಠಾಣೆ ಎಎಸ್‌ಐ ನಾಗರಾಜು, ಸಿಬ್ಬಂದಿಗಳಾದ ಮೋಹನ್ ಕುಮಾರ್ ಹಾಗೂ ರಾಜೇಶ್ ಸೋಮವಾರ ಸಂಜೆ ಗಸ್ತಿನಲ್ಲಿದ್ದಾಗ ಎಸ್‌ಬಿಎಂ ಬಡಾವಣೆಯಲ್ಲಿ ವ್ಯಕ್ತಿಯೊಬ್ಬ ಅನುಮಾನಾಸ್ಪದವಾಗಿ ಓಡಾಡುತ್ತಿರುವ ಬಗ್ಗೆ ಬಾತ್ಮೀದಾರರಿಂದ ಮಾಹಿತಿ ಬಂದಿದೆ. ಕೂಡಲೇ ಗರುಡಾ ವಾಹನದಲ್ಲಿ ಗಸ್ತಿನಲ್ಲಿದ್ದ ಎಎಸ್‌ಐ ಪಾಪಣ್ಣ ಹಾಗೂ ಚಾಲಕರನ್ನು ಕರೆಸಿಕೊಂಡು ಎಸ್‌ಬಿಎಂ ಬಡಾವಣೆಗೆ ಹೋದಾಗ 4ನೇ ಕ್ರಾಸ್‌ನಲ್ಲಿ ಬ್ಯಾಗ್ ಹಾಕಿಕೊಂಡಿದ್ದ ವ್ಯಕ್ತಿ ಅನುಮಾನಾಸ್ಪದವಾಗಿ ಓಡಾಡುವುದು ಕಂಡು ಬಂದಿದೆ.

ಪೊಲೀಸ್ ವಾಹನ ನೋಡಿದ ತಕ್ಷಣ ಓಡಿ ಹೋಗಲು ಯತ್ನಿಸಿದ ಆತನನ್ನು ನಾಗರಾಜು, ಮೋಹನ್ ಕುಮಾರ್ ಹಾಗೂ ರಾಜೇಶ್ ಬೆನ್ನತ್ತಿ ಹಿಡಿದು, ವಿಚಾರಿಸಿದಾಗ ಬೇರೆ ಬೇರೆ ಹೆಸರೇಳಿ ತಡಬಡಾಯಿಸಿದ್ದಾನೆ. ಆತನ ಬಳಿ ಇದ್ದ ಬ್ಯಾಗ್ ಪರಿಶೀಲಿಸಿದಾಗ ಬಟ್ಟೆ, ಸ್ಕ್ರೂ ಡ್ರೈವರ್, ಕಬ್ಬಿಣದ ರಾಡು, ಓಲೆ, ಡಾಲರ್‌ವುಳ್ಳ ಹವಳದ ಸರ ಹಾಗೂ 800 ರೂ. ಪತ್ತೆಯಾಗಿದೆ. ವಿಚಾರಣೆ ತೀವ್ರಗೊಳಿಸಿದಾಗ ತಿಂಗಳ ಹಿಂದೆ ಮನೆಗಳ್ಳತನದ ಮಾಡಿದಾಗ ಸಿಕ್ಕ ಒಡವೆಗಳಾಗಿದ್ದು, ಈಗ ಎಲ್ಲಿಯಾದರೂ ಬೀಗ ಹಾಕಿರುವ ಒಂಟಿ ಮನೆಗಳಲ್ಲಿ ಕಳ್ಳತನ ಮಾಡಿಕೊಂಡು ಎಲ್ಲವನ್ನೂ ಯಾರಿಗಾದರೂ ಮಾರಾಟ ಮಾಡಿ, ಆಂಧ್ರಕ್ಕೆ ಹೋಗಲು ಯೋಚಿಸಿದ್ದಾಗಿ ಹೇಳಿದನೆಂದು ಪೊಲೀಸರು ತಿಳಿಸಿದ್ದಾರೆ. ಈ ಸಂಬಂಧ ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ನಾಳೆ ಜಿಲ್ಲಾಡಳಿತದಿಂದ '78ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ'

ಮೈಸೂರು,ಆ.13(ಪಿಎಂ)– ಜಿಲ್ಲಾಡಳಿತದ ವತಿಯಿಂದ ಆ.15ರಂದು ಬೆಳಗ್ಗೆ 9 ಗಂಟೆಗೆ ಬನ್ನಿಮಂಟಪದ ಪಂಜಿನ ಕವಾಯಿತು ಮೈದಾನದಲ್ಲಿ '78ನೇ ಸ್ವಾತಂತ್ರ್ಯೋತ್ಸವ ದಿನಾಚರಣೆ' ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಕ್ಕು ಮತ್ತು ಬೃಹತ್ ಕೈಗಾರಿಕಾ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಉಪಸ್ಥಿತಿಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಧ್ವಜಾರೋಹಣ ಮಾಡಲಿದ್ದಾರೆ. ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ.

ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರೂ ಆದ ಹೆಚ್.ಡಿ.ಕೋಟೆ ಶಾಸಕ ಸಿ.ಅನಿಲ್ ಕುಮಾರ್, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಚಾಮರಾಜನಗರ ಲೋಕಸಭಾ ಕ್ಷೇತ್ರದ ಸಂಸದ ಸುನಿಲ್ ಬೋಸ್ ಪಾಲ್ಗೊಳ್ಳಲಿದ್ದಾರೆ. ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಕೃಷ್ಣರಾಜನಗರ ಶಾಸಕ ಡಿ.ರವಿಶಂಕರ್, ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ, ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ನಂಜನಗೂಡು ಶಾಸಕ ದರ್ಶನ್ ಧ್ರುವನಾರಾಯಣ್, ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ ಮತ್ತು ವಿವೇಕಾನಂದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ

ಮುಡಾ ಅಧ್ಯಕ್ಷ ಕೆ.ಮರೀಗೌಡ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಅಯೂಬ್ ಖಾನ್, ಕಾವೇರಿ ಜಲಾನಯನ ಯೋಜನೆ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ ಪಾಲ್ಗೊಳ್ಳಲಿದ್ದಾರೆ. ಸಂಜೆ 5 ಗಂಟೆಗೆ ಕರ್ನಾಟಕ ಕಲಾಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ ಎಂದು ವಾರ್ತಾ ಇಲಾಖೆ ಪ್ರಕಟಣೆ ತಿಳಿಸಿದೆ

ಎಎಸ್‌ಐ ಪಾಪಣ್ಣಗೆ ಆರಕ್ಷಕ ಕಲಾರತ್ನ ಪ್ರಶಸ್ತಿ



ಮೈಸೂರು, ಆ.13– ಬೆಂಗಳೂರಿನ ನಬಿರೋಶನ್ ಪ್ರಕಾಶನ ವತಿಯಿಂದ ಬೆಂಗಳೂರಿನ ಕೆಎಸ್‌ಆರ್‌ಪಿ 4ನೇ ಪಡೆಯ ಸಭಾಂಗಣದಲ್ಲಿ ನಡೆದ ಪೊಲೀಸ್ ಕಲಾ ಸಂಗಮ ಮತ್ತು ಆರಕ್ಷಕ ಕಲಾರತ್ನ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಕರ್ತವ್ಯದ ಜೊತೆಗೆ ಕಲೆ, ಸಾಹಿತ್ಯ ಸಂಗೀತ ನಿರೂಪಣೆ ಸೇರಿದಂತೆ ನಾನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಮೈಸೂರಿನ ಸರಸ್ವತಿಪುರಂ ಪೊಲೀಸ್ ಠಾಣೆ ಎಎಸ್‌ಐ ಪಾಪಣ್ಣ ಅವರಿಗೆ ಆರಕ್ಷಕ ಕಲಾರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಈ ವೇಳೆ ಹಿರಿಯ ಸಂಗೀತ ನಿರ್ದೇಶಕ ನಾದಬ್ರಹ್ಮ ಹಂಸಲೇಖ, ಕಾರ್ಯಗೃಹ ಅಧೀಕ್ಷಕ ಎಸ್.ಎಸ್.ಮೇಟಿ, ಎಸಿಪಿ ಎನ್.ಉಮಾರಾಣಿ, ಕಮಾಂಡೆಂಟ್ ಹಂಜಾ ಹುಸೇನ್, ಪೊಲೀಸ್ ಇನ್‌ಸ್ಪೆಕ್ಟರ್ ಕೆ.ವಿಶ್ವನಾಥ್, ಹೊರಕಟ್ಟಿ, ವೀರಲೋಕ ಪ್ರಕಾಶನದ ವೀರಕಪುತ್ರ ಶ್ರೀನಿವಾಸ್ ಸೇರಿದಂತೆ ಇನ್ನಿತರರಿದ್ದರು.

ನಕಲಿ ಜಾತಿ ಪ್ರಮಾಣ ಪತ್ರ: ಕ್ರಮ ಕೈಗೊಂಡ ಬಗ್ಗೆ ಪ್ರಮಾಣ ಪತ್ರ ಸಲ್ಲಿಸಲು ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ

ಬೆಂಗಳೂರು, ಆ.13– ನಕಲಿ ಅಥವಾ ಸುಳ್ಳು ಜಾತಿ ಪ್ರಮಾಣ ಪತ್ರ ಪಡೆದುಕೊಂಡ ಪ್ರಕರಣಗಳಲ್ಲಿ ಈ ತನಕ ಎಷ್ಟು ಜನರಿಗೆ ನೋಟಿಸ್ ಜಾರಿಗೊಳಿಸಲಾಗಿದೆ ಮತ್ತು ಯಾವ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಪ್ರಮಾಣಪತ್ರ ಸಲ್ಲಿಸಿ ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಯಾದಗಿರಿ ಜಿಲ್ಲೆ ಮಗದುಂಪುರದ, ರಾಜ್ಯ ಎಸ್‌ಸಿ–ಎಸ್‌ಟಿ ನಕಲಿ ಜಾತಿ ಪ್ರಮಾಣಪತ್ರಗಳ ತಡೆ ಸಮಿತಿ ಪ್ರಧಾನ ಕಾರ್ಯದರ್ಶಿ ಮಾರಪ್ಪಾಯಕ ಸೇರಿದಂತೆ ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲೆ ಅಶ್ವಿನಿ ಓಬಳೇಶ್, ರಾಜ್ಯದಲ್ಲಿ ಸುಮಾರು 30 ಸಾವಿರ ಸುಳ್ಳು ಜಾತಿ ಪ್ರಮಾಣಪತ್ರಗಳನ್ನು ವಿತರಿಸಲಾಗಿದೆ ಎಂಬ ಮಾಹಿತಿ ಇದೆ. ಆದರೆ, ಸರ್ಕಾರ ಈ ಕುರಿತು ಯಾವುದೇ ಕ್ರಮ ಜರುಗಿಸಿಲ್ಲ ಎಂದು ಆರೋಪಿಸಿದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸರ್ಕಾರದ ವಿಶೇಷ ವಕೀಲ ಸಿ.ಜಗದೀಶ್, ಅರ್ಜಿಯಲ್ಲಿ ಉಲ್ಲೇಖಿಸಲಾಗಿದ್ದ ಪ್ರಕರಣಗಳಿಗೆ ಸಂಬಂಧಿಸಿದಂತೆ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಮೊದಲಿಗೆ ಕಬ್ಬಲಿಗ ಜಾತಿ ಪ್ರಮಾಣ ಪತ್ರ ತೆಗೆದುಕೊಂಡು ಬಳಿಕ ಪರಿವಾರ ನಾಯಕ ಜಾತಿ ಪ್ರಮಾಣ ಪಡೆದುಕೊಂಡವರ ವಿರುದ್ಧ ನೋಟಿಸ್ ನೀಡಲಾಗಿದೆ ಎಂದರು.

ನಾಯಕ ಜನಾಂಗದ ಪರಿವಾರ ಮತ್ತು ತಳವಾರ ಉಪಪಂಗಡಗಳನ್ನು ಮಾತ್ರ ಎಸ್‌ಟಿ ವರ್ಗಕ್ಕೆ ಸೇರಿಸಲಾಗಿದೆ, ಆದರೆ, ಪ್ರವರ್ಗ ಒಂದರಲ್ಲಿ ಬರುವ ಬೆಸ್ತರ ಉಪಜಾತಿಯಾದ ತಳವಾರ ಬೋಯಾ ಉಪಪಂಗಡದವರಿಗೂ ಪರಿಶಿಷ್ಟ ವರ್ಗದ ನಕಲಿ ಜಾತಿ ಪ್ರಮಾಣ ಪತ್ರಗಳನ್ನು ವಿತರಿಸಲಾಗುತ್ತಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ

ಇದೇ ವೇಳೆ ಕರ್ನಾಟಕ ರಾಜ್ಯ ತಳವಾರ ಮಹಾಸಭಾದ ರಾಜ್ಯ ಘಟಕದ ಅಧ್ಯಕ್ಷ ಸಿದ್ದರಾಮ ಸಿ.ಜೇರಟಗಿ ಪರ ವಕೀಲ ಎಚ್. ಸುನಿಲ್ ಕುಮಾರ್ ಮಧ್ಯಂತರ ಅರ್ಜಿ ಸಲ್ಲಿಸಿ, ವಿರೋಧಿ ಅರ್ಜಿದಾರರ ತಪ್ಪು ಮಾಹಿತಿಯಿಂದಾಗಿ ನೈಜ ತಳವಾರ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ. ಹಾಗಾಗಿ, ಈ ಪ್ರಕರಣದಲ್ಲಿ ತಳವಾರ ಮಹಾಸಭಾವನ್ನು ಪ್ರತಿವಾದಿ ಯನ್ನಾಗಿ ಸೇರ್ಪಡೆ ಮಾಡಿಕೊಳ್ಳಬೇಕು ಎಂದು ಮನವಿ ಮಾಡಿದರು. ಈ ಮಧ್ಯಂತರ ಅರ್ಜಿಯನ್ನು ಸ್ವೀಕರಿಸಿದ ನ್ಯಾಯಪೀಠ ವಿಚಾರಣೆಯನ್ನು ಸೆ.18ಕ್ಕೆ ಮುಂದೂಡಿದೆ.

ಇಂದು ಸಂಸದರ ಕಚೇರಿ ಉದ್ಘಾಟನೆ



ಮೈಸೂರು,ಆ.13(ಪಿಎಂ)– ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರ ಕಚೇರಿಯ ಉದ್ಘಾಟನಾ ಸಮಾರಂಭವನ್ನು ಆ.14ರಂದು 'ಸೇವಾರಂಭ' ಶೀರ್ಷಿಕೆಯಡಿ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಸಂಸ್ಕೃತ ಪಾಠಶಾಲೆ ಬಳಿಯ ಸಿಗ್ನಲ್ ಹತ್ತಿರದ ಸಾರ್ವಜನಿಕ ಕಚೇರಿಗಳ ಕಟ್ಟಡದಲ್ಲಿ ವ್ಯವಸ್ಥೆಗೊಳಿಸಿರುವ ನೂತನ ಕಚೇರಿಯ ಕಾರ್ಯಾರಂಭಕ್ಕೆ ಅಂದು ಮಧ್ಯಾಹ್ನ 3ಕ್ಕೆ ಚಾಲನೆ ನೀಡಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

ಸೆ. 9ಕ್ಕೆ ನಿರ್ಮಲಾ ಸೀತಾರಾಮನ್ ಅಧ್ಯಕ್ಷತೆಯಲ್ಲಿ ಜಿಎಸ್‌ಟಿ ಮಂಡಳಿ ಸಭೆ

ನವದೆಹಲಿ, ಆ.13– ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ಸೆಪ್ಟೆಂಬರ್ 9ರಂದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯ 54ನೇ ಸಭೆ ನಡೆಯಲಿದೆ. ಜಿಎಸ್‌ಟಿ ಅಡಿ ರಚಿಸಿರುವ ನಾಲ್ಕು ಸ್ಲ್ಯಾಬ್‌ಗಳನ್ನು ಪರಿಷ್ಕರಿಸುವಂತೆ ನಾಗರಿಕರು ಮತ್ತು ವರ್ತಕರು ಹಲವು ದಿನಗಳಿಂದ ಒತ್ತಾಯಿಸುತ್ತಿದ್ದಾರೆ. ಈ ತೆರಿಗೆ ಪ್ರಮಾಣ ಸರಳಗೊಳಿಸುವ ಸಂಬಂಧ ಪರಿಶೀಲನೆ ನಡೆಸಲು ಏಳು ಸಚಿವರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ. ಬಿಹಾರದ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಇದರ ಸಂಚಾಲಕರಾಗಿದ್ದಾರೆ. ದರ ಸರಳೀಕರಣ ಹಾಗೂ ಯಾವ ವಿಭಾಗಗಳಿಗೆ ವಿನಾಯಿತಿ ಸೌಲಭ್ಯ ನೀಡಬೇಕು ಎಂಬ ಬಗ್ಗೆ ಸಮಿತಿಯು ಸಭೆಯಲ್ಲಿ ವರದಿ ಮಂಡಿಸುವ ನಿರೀಕ್ಷೆಯಿದೆ. ಜಿಎಸ್‌ಟಿ ವರಮಾನ ಹೆಚ್ಚಳಕ್ಕೆ ಸಂಬಂಧಿಸಿದಂತೆ ಸಮಿತಿಯು ಅಧ್ಯಯನ ನಡೆಸಿ ವರದಿ ಸಲ್ಲಿಸಲಿದೆ.

ಸಮಿತಿಯು ಕರಡು ವರದಿ ಮಂಡಿಸಿದರೂ ಅದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು ಎಂದು ಜೂನ್ 23ರಂದು ನಡೆದ ಮಂಡಳಿಯ ಸಭೆಯಲ್ಲಿ ಸಚಿವೆ ನಿರ್ಮಲಾ ಹೇಳಿದ್ದರು.

ಮೈಸೂರು ನಗರದಲ್ಲಿ ರಾತ್ರಿ 1ರವರೆಗೆ ವ್ಯಾಪಾರ–ವಹಿವಾಟಿಗೆ ಅವಕಾಶ ನೀಡಿ

ಜಿಲ್ಲಾಧಿಕಾರಿಗಳಲ್ಲಿ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಮನವಿ

ಮೈಸೂರು,ಆ.13(ಪಿಎಂ)– ರಾಜ್ಯ ಬಜೆಟ್‌ನಲ್ಲಿ ಘೋಷಣೆ ಮಾಡಿರುವಂತೆ ಮೈಸೂರು ನಗರದಲ್ಲಿ ರಾತ್ರಿ 1 ಗಂಟೆಯವರೆಗೆ ವ್ಯಾಪಾರ–ವಹಿವಾಟು ನಡೆಸಲು ಅವಕಾಶ ನೀಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಮನವಿ ಮಾಡಿದೆ.



ರಾಜ್ಯ ಸರ್ಕಾರವು ಬೆಳಗ್ಗೆ 6ರಿಂದ ಮಧ್ಯರಾತ್ರಿ 1 ಗಂಟೆಯವರೆಗೆ ವ್ಯಾಪಾರ–ವಹಿವಾಟು ನಡೆಸಲು ಅವಕಾಶ ನೀಡಿದ್ದು, ಅಂತೆಯೇ ದಸರಾ ಹಿನ್ನೆಲೆಯಲ್ಲಿ ಮೈಸೂರು ನಗರದಲ್ಲಿ ಅವಕಾಶ ನೀಡಬೇಕೆಂದು ಜಿಲ್ಲಾಧಿಕಾರಿಗಳನ್ನು ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು ಪ್ರಕಟಣೆಯಲ್ಲಿ ಕೋರಿದ್ದಾರೆ.

ಮೈಸೂರು ನಗರಕ್ಕೆ ದೇಶ-ವಿದೇಶಗಳಿಂದ ಪ್ರವಾಸಿಗರು ಆಗಮಿಸುವ ಕಾರಣ ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚಿನ ಅವಕಾಶವಿದೆ. ರಾತ್ರಿ 1 ಗಂಟೆಯವರೆಗೂ ವ್ಯಾಪಾರ–ವಹಿವಾಟು ನಡೆಸುವುದರಿಂದ ಹೆಚ್ಚಿನ ಉದ್ಯೋಗಾವಕಾಶ ಸಿಗುವುದಲ್ಲದೆ ವ್ಯಾಪಾರೋದ್ಯಮಕ್ಕೆ ಉತ್ತೇಜನ ದೊರೆಯಲಿದೆ. ಮೈಸೂರು ನಗರಕ್ಕೆ ರಾತ್ರಿ ವೇಳೆಯಲ್ಲಿ ಸಾಕಷ್ಟು ಪ್ರಯಾಣಿಕರು ಬರುವುದರಿಂದ ಪ್ರಯೋಜನವಾಗಲಿದ್ದು, ಮೈಸೂರು ನಗರ ಮತ್ತಷ್ಟು ಅಭಿವೃದ್ಧಿಯಾಗಲಿದೆ. ಆದ್ದರಿಂದ ಜಿಲ್ಲಾಧಿಕಾರಿಗಳು ಮಧ್ಯರಾತ್ರಿ 1 ಗಂಟೆಯವರೆಗೂ ವ್ಯಾಪಾರ–ವಹಿವಾಟಿಗೆ ಮುಕ್ತ ಅವಕಾಶ ನೀಡಬೇಕೆಂದು ಅವರು ಕೋರಿದ್ದಾರೆ.

ಪ್ರತ್ಯೇಕ ಸಭೆಗಳು ನಡೆಯುತ್ತಿದ್ದರೆ ಬಿಜೆಪಿ ಇಬ್ಭಾಗವಾಗುವ ಅಪಾಯವಿದೆ: ಕೆ.ಎಸ್.ಈಶ್ವರಪ್ಪ ಆತಂಕ

ಶಿವಮೊಗ್ಗ, ಆ.13– ರಾಜ್ಯದ ಬಿಜೆಪಿಯ 12 ಜನ ಪ್ರಮುಖ ನಾಯಕರು ಬೆಳಗಾವಿಯಲ್ಲಿ ಸಭೆ ನಡೆಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷರನ್ನು ಬಿಟ್ಟು ಈ ರೀತಿ ಸಭೆಗಳು ನಡೆಯುತ್ತಿವೆ. ಹೀಗೆ ಸಭೆಗಳು ನಡೆಯುತ್ತಾ ಹೋದರೆ ಬಿಜೆಪಿ ಇಬ್ಭಾಗವಾಗುವ ಸಾಧ್ಯತೆ ಇದೆ ಎಂದು ಮಾಜಿ ಡಿಸಿಎಂ ಕೆ.ಎಸ್. ಈಶ್ವರಪ್ಪ ಆತಂಕ ವ್ಯಕ್ತಪಡಿಸಿದರು.



ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಬಿ.ವೈ.ವಿಜಯೇಂದ್ರ ಅವರನ್ನು ರಾಜ್ಯಾಧ್ಯಕ್ಷರನ್ನಾಗಿ ನೇಮಕ ಮಾಡಿದ ನಂತರ ಈ ಎಲ್ಲಾ ಅಸಂತೃಪ್ತಿ ಕಾಣುತ್ತಿದೆ. ಬಿ.ವೈ.ವಿಜಯೇಂದ್ರ ಅವರದು ಏಕಪಕ್ಷೀಯ ನಿರ್ಧಾರವಾಗಿದೆ. ನಮ್ಮ ಕಾಲದಲ್ಲಿ ಹೀಗೆ ಇರಲಿಲ್ಲ. ಸಾಮೂಹಿಕ ನಾಯಕತ್ವ ಇತ್ತು. ಆದರೆ ಈಗ ಅದು ಇಲ್ಲ. ಸ್ವಜನ ಪಕ್ಷಪಾತವೇ ಮುಖ್ಯವಾಗುತ್ತಿದೆ. ಹೊಂದಾಣಿಕೆ ರಾಜಕಾರಣ ಎದ್ದು ಕಾಣುತ್ತಿದೆ. ಇದು ಇಲ್ಲಿಗೆ ಮುಗಿಯಬೇಕು ಎಂದರು.

ಸಭೆ ನಡೆಸಿದವರು ಅನುಭವಿಗಳು, ಪಕ್ಷವನ್ನು ಕಟ್ಟಿದವರು. ಅವರು ಆಗಸ್ಟ್ 17ರಿಂದ ಕೂಡಲ ಸಂಗಮದಿಂದ ಬಳ್ಳಾರಿಗೆ ಪಾದಯಾತ್ರೆ ಮಾಡುವುದಾಗಿ ಹೇಳಿದ್ದಾರೆ. ಆದರೆ, ಅವರು 12 ಜನರಿದ್ದಾರೋ, ಇನ್ನೂ ಹೆಚ್ಚಿದ್ದಾರೋ ಗೊತ್ತಿಲ್ಲ. ಈ ಪಾದಯಾತ್ರೆ ನಡೆದರೆ ರಾಜ್ಯದ ಎಲ್ಲಾ ತಾಲೂಕಿನಲ್ಲೂ ಎರಡೆರಡು ಪಾರ್ಟಿಯಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ವಿಜಯೇಂದ್ರ ಅಧ್ಯಕ್ಷರಾದ ನಂತರ ರಾಜ್ಯದಲ್ಲಿ ಲೋಕಸಭಾ 25 ಸ್ಥಾನದಿಂದ 17ಕ್ಕೆ ಕುಸಿಯಿತು. ಅದೇ ವಿಧಾನಸಭೆಯಲ್ಲಿ 66ಕ್ಕೆ ಕುಸಿಯಿತು. ಮೋದಿ ಹೆಸರು ಮತ್ತು ಬೆಂಬಲವಿದ್ದರೂ ಈ ಪರಿಸ್ಥಿತಿ ಎದುರಾಯಿತು. ಜೆಡಿಎಸ್ ಜೊತೆ ಸಖ್ಯ ಮಾಡಿದ ನಂತರ ಇಷ್ಟಾದರೂ ಸ್ಥಾನ ಸಿಕ್ಕಿದೆ.

ಒಂದೇ ಕುಟುಂಬದ ಕೈಗೆ ಅಧಿಕಾರ ಕೊಟ್ಟದ್ದೇ ಇದಕ್ಕೆ ಕಾರಣ ಎಂದು ಆರೋಪಿಸಿದರು. ಪಕ್ಷದಲ್ಲಿ ಮೊದಲು ಸಾಮೂಹಿಕ ನಾಯಕತ್ವ ಇತ್ತು ಅದರೆ, ಈಗ ಆ ರೀತಿಯಲ್ಲಿ ಇಲ್ಲ. ಬರೀ ಕುಟುಂಬದ ರಾಜಕಾರಣ ಕಂಡು ಬರುತ್ತಿದೆ. ತಮಗೆ ಬೇಕಾದವರಿಗೆ ಪಕ್ಷದಲ್ಲಿ ಸ್ಥಾನಮಾನ ನೀಡಲಾಗಿದೆ ಬಿಜೆಪಿ ಹೈಕಮಾಂಡ್ ತಕ್ಷಣವೇ ಅಸಮಾಧಾನಿತರನ್ನು ಕರೆದು ಮಾತನಾಡಬೇಕು. ಇಲ್ಲದಿದ್ದರೆ ಪಕ್ಷವನ್ನು ಕಟ್ಟಿದವರಿಗೆ ನೋವಾಗುತ್ತದೆ. ರಾಜ್ಯ ಬಿಜೆಪಿಯಲ್ಲಿ ಏನಾಗುತ್ತಿದೆ ಎಂದು ಪಕ್ಷದ ನಾಯಕತ್ವಕ್ಕೆ ಗೊತ್ತಿದೆ. ಆದರೆ, ಏಕೆ ಗಮನ ಹರಿಸುತ್ತಿಲ್ಲವೋ ಗೊತ್ತಿಲ್ಲ. ಹಾಗಾಗಿ ಆದಷ್ಟು ಬೇಗ ರಾಜ್ಯದ ಬಿಜೆಪಿ ಪರಿಸ್ಥಿತಿಯನ್ನು ಸರಿಪಡಿಸಬೇಕು ಎಂದರು.

ಮೈಸೂರು ಜಿಲ್ಲಾ ಹಾಲು ಒಕ್ಕೂಟದ

ರೈತಪರ ಯೋಜನೆಗಳಿಗೆ ಕೆಎಂಎಫ್‌ನಿಂದ ಹೆಚ್ಚಿನ ನೆರವು

ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಭರವಸೆ



ಹಳೇ ಕೆಂಪಯ್ಯನಹುಂಡಿ ಡೈರಿಯನ್ನು ಎಂಎಲ್‌ಸಿ ಡಾ.ಯತೀಂದ್ರ ಉದ್ಘಾಟಿಸಿದರು.

"ಹಾಲು ಉತ್ಪಾದಕರ ಸಂಘದ ಕಟ್ಟಡ ನಿರ್ಮಾಣಕ್ಕೆ ಒಕ್ಕೂಟದಿಂದ 8.50 ಲಕ್ಷ ಅನುದಾನ ನೀಡಲಾಗಿದೆ. ಜಿಲ್ಲೆಯಲ್ಲಿ ನಿತ್ಯ 9.50 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, 3.50 ರಿಂದ 4 ಲಕ್ಷ ಲೀಟರ್ ಹಾಲು ಮತ್ತು ಉತ್ಪನ್ನಗಳು ಮಾರಾಟವಾಗುತ್ತಿವೆ. ಇನ್ನುಳಿದ ಹಾಲನ್ನು ಪುಡಿಯಾಗಿ ಪರಿವರ್ತಿಸಿ ಮಾರಾಟ ಮಾಡಲು ಸಂಗ್ರಹಿಸಿಡಲಾಗುತ್ತಿದೆ.

- ಆರ್.ಚಲುವರಾಜು, ಮೈಮುಲ್ ಅಧ್ಯಕ್ಷ.

ತಿ.ನರಸೀಪುರ, ಆ.13– ಗುಣಮಟ್ಟದ ಹಾಲಿಗೆ ಪ್ರೋತ್ಸಾಹ ನೀಡಿ, ಹೈನುಗಾರಿಕೆ ಉತ್ತೇಜಿಸಲು ರಾಜ್ಯದಲ್ಲಿ ರೈತರ ಹಾಲಿಗೆ ಅಧಿಕ ಬೆಲೆ ನೀಡುತ್ತಿರುವ ಮೈಸೂರು ಜಿಲ್ಲಾ ಹಾಲಲು ಒಕ್ಕೂಟ(ಮೈಮುಲ್)ದ ರೈತಪರ ಯೋಜನೆಗಳಿಗೆ ಕೆಎಂಎಫ್‌ನಿಂದ ಹೆಚ್ಚಿನ ನೆರವು ಕಲ್ಪಿಸುವುದಾಗಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಭರವಸೆ ನೀಡಿದರು.

ತಾಲೂಕಿನ ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಮಂಗಳವಾರ 13.50 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಕಟ್ಟಡ ಉದ್ಘಾಟಿಸಿ ಮಾತನಾಡಿದ ಅವರು, ಒಕ್ಕೂಟದ ನೂತನ ಅಧ್ಯಕ್ಷರ ಪ್ರಸ್ತಾಪದಂತೆ ಕೆಎಂಎಫ್‌ನಲ್ಲಿ ಮೈಮುಲ್‌ನ ಯಾವುದೇ ಯೋಜನೆಯ ಅನುದಾನ ಬಾಕಿ ಉಳಿದಿದ್ದರೆ ಅದರೊಂದಿಗೆ ಹೆಚ್ಚುವರಿ ಅನುದಾನ ಕೊಡಿಸುತ್ತೇನೆ ಎಂದರು.

ಗುಜರಾತ್‌ನಲ್ಲಿ ರೈತರು ಒಗ್ಗೂಡಿ ಕಟ್ಟಿದ ಅಮುಲ್ ಹಾಲು ಒಕ್ಕೂಟದ ಉತ್ಪನ್ನಗಳು ದೇಶ ವಿದೇಶಗಳಲ್ಲಿ ಕೋಟಿಗಟ್ಟಲೆ ವಹಿವಾಟು ನಡೆಸುತ್ತಿವೆ. ಗುಜರಾತ್ ನಂತರ ರಾಜ್ಯದ ಹಾಲು ಒಕ್ಕೂಟದ ನಂದಿನಿ ಉತ್ಪನ್ನಗಳು 2ನೇ ಸ್ಥಾನದಲ್ಲಿ ವಹಿವಾಟು ನಡೆಸುತ್ತಿವೆ. ಹೈನುಗಾರಿಕೆ ಉಪಕಸುಬಿಗೆ ಹೆಚ್ಚಿನ ನೆರವು ನೀಡಲು ಹಾಲಿಗೆ ನೀಡುತ್ತಿದ್ದ 2 ರೂ. ಪ್ರೋತ್ಸಾಹ ಧನವನ್ನು ನಮ್ಮ ಸರ್ಕಾರವಿದ್ದಾಗ 5 ರೂ.ಗಳಿಗೆ ಏರಿಕೆ ಮಾಡಿ ನೀಡಲು ನಿರ್ಧರಿಸಲಾಗಿತ್ತು. ನಂತರ ಅಧಿಕಾರಕ್ಕೆ ಬಂದ ಜೆಡಿಎಸ್ ಮತ್ತು ಬಿಜೆಪಿ ಸರ್ಕಾರಗಳು ಪ್ರೋತ್ಸಾಹಧನ ಹೆಚ್ಚಿಸಲಿಲ್ಲ. ಶಾಸಕರ ಪ್ರದೇಶಾಭಿವೃದ್ಧಿ ಅನುದಾನ ಹಾಗೂ ಮೈಮುಲ್ ನೆರವಿನಡಿ ಗ್ರಾಮದಲ್ಲಿ ಹಾಲು ಉತ್ಪಾದಕರ ಸಂಘಕ್ಕೆ ಸ್ವಂತ ಕಟ್ಟಡ ನಿರ್ಮಾಣವಾಗಿದೆ ಎಂದರು.

ಯತೀಂದ್ರ ನೋಡಲು ನೂಕುನುಗ್ಗಲು: ಕಾರ್ಯಕ್ರಮದಲ್ಲಿ ಕಾಣಿಸಿ ಕೊಂಡ ಸಿಎಂ ಪುತ್ರ, ಎಂಎಲ್‌ಸಿ ಡಾ. ಯತೀಂದ್ರ ಅವರನ್ನು ಭೇಟಿಯಾಗಲು, ಅಹವಾಲು ಸಲ್ಲಿಸಲು ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಮುಗಿಬಿದ್ದಿದ್ದರಿಂದ ನೂಕು ನುಗ್ಗಲು ಉಂಟಾಯಿತು. ಕಟ್ಟಡ ಉದ್ಘಾಟನೆಗೆ ಆಗಮಿಸಿ, ವೇದಿಕೆ ಹತ್ತುವವರೆಗೂ ಮುಗಿ ಬೀಳುತ್ತಿದ್ದ ಕಾರ್ಯಕರ್ತರು ಕಾರ್ಯಕ್ರಮ ಮುಗಿದ ಬಳಿಕ ಹಿಂಬಾಲಿಸಿದರು. ಮುಖಂಡರೊಬ್ಬರ ನಿವಾಸದಲ್ಲಿ ಊಟ ಮಾಡಲು ಕೆಲ ನಿಮಿಷ ಬಿಡುವು ಕೊಟ್ಟು, ಕಾರನ್ನೇರಿ ಹೊರಡುವಾಗಲೂ ಮುತ್ತಿಗೆ ಹಾಕುವುದನ್ನು ಮರೆಯಲಿಲ್ಲ.

ಕಾರ್ಯಕ್ರಮದಲ್ಲಿ ಹಾಲು ಒಕ್ಕೂಟದ ನಿರ್ದೇಶಕರಾದ ಸಿ.ಓಂ.ಪ್ರಕಾಶ್, ಕೆ.ಜಿ. ಮಹೇಶ್, ಕೆ.ಉಮಾಶಂಕರ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆ.ಎಂ.ಮಹದೇವಣ್ಣ, ಜಿಪಂ ಮಾಜಿ ಸದಸ್ಯರಾದ ಕೆ.ಮಹದೇವ, ಎಂ.ಸುಧಾ ಮಹದೇವಯ್ಯ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಮುದ್ದೇಗೌಡ, ಗ್ರಾಪಂ ಅಧ್ಯಕ್ಷೆ ನಂದಿನಿ, ಮಾಜಿ ಅಧ್ಯಕ್ಷ ಆನಂದ, ವಿಸ್ತರಣಾಧಿಕಾರಿ ಆರ್. ಪ್ರಮೋದ್, ಉಪಾಧ್ಯಕ್ಷ ಎಸ್.ಕುಮಾರ್, ನಿರ್ದೇಶಕರಾದ ಕೆ.ಎಂ.ನಾಗೇಶ್, ಕೆ.ರಘು, ರಾಚನಾಯಕ, ಶಾರದಮ್ಮ, ಕೆ.ಪಿ.ಸುರೇಶ್, ಹೊಂಬಾಳಮ್ಮ, ಪುಟ್ಟಮ್ಮ, ಸಿದ್ದಪ್ಪ, ಕೆ.ಕೃಷ್ಣೇಗೌಡ, ಶಿವಮೂರ್ತಿ, ಡೈರಿ ಕಾರ್ಯದರ್ಶಿ ಕೆ.ಮಂಜುಳಾ, ಹಾಲು ಪರೀಕ್ಷಕ ವಿನೋದ್, ತಾಲೂಕು ಕುರುಬ ಸಂಘದ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ತುಂಬಲ ಬಾಬು, ಎಪಿಎಂಸಿ ಮಾಜಿ ಅಧ್ಯಕ್ಷ ಎನ್.ಅನಿಲ್ ಕುಮಾರ್, ಪುರಸಭಾ ಮಾಜಿ ಅಧ್ಯಕ್ಷ ಎನ್.ಸೋಮು, ಸದಸ್ಯ ಬಾದಾಮಿ ಮಂಜು, ತುಂಬಲ ಪ್ರಕಾಶ್, ವಸಂತ ಶ್ರೀಕಂಠ, ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಎಂ.ರಮೇಶ್, ಪುರಸಭಾ ಮಾಜಿ ಸದಸ್ಯ ಕೆ.ಗಣೇಶ್, ಎಂ.ಮಿಥುನ್, ಕುರುಬರ ಸಂಘದ ನಿರ್ದೇಶಕ ಅರುಣ್ ಕುಮಾರ್, ಗುತ್ತಿಗೆದಾರ ಮಾಧು, ರಜತ್ ಸ್ವಾಮಿ, ಮುಖಂಡರಾದ ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಬಾಬು ಅಂದಾನಿ, ಕಾಂತ ರಾಜು, ಎಲೆಕ್ಟ್ರಿಕಲ್ ಮಲ್ಲೇಶ್, ಹಾಳೇ ಗೌಡ ಹಾಗೂ ಇನ್ನಿತರರಿದ್ದರು.

ಸೆ.5, ವಿಶಿಷ್ಟ ಶಿಕ್ಷಕರ ದಿನಾಚರಣೆಗೆ ತೀರ್ಮಾನ



ಸಭೆಯಲ್ಲಿ ಶಾಸಕ ಡಿ.ರವಿಶಂಕರ್ ಮಾತನಾಡಿದರು.

ಕೆ.ಆರ್.ನಗರ, ಆ.13– ಪಟ್ಟಣದ ಪುರಸಭೆ ಬಯಲು ರಂಗ ಮಂದಿರದಲ್ಲಿ ಸೆ.5ರಂದು ಶಿಕ್ಷಕರ ದಿನವನ್ನು ವಿಭಿನ್ನ ಮತ್ತು ವಿಶಿಷ್ಟವಾಗಿ ಆಚರಿಸಲು ನಿರ್ಧರಿಸಲಾಯಿತು.

ಪಟ್ಟಣದ ಬಿಆರ್‌ಸಿ ಕೇಂದ್ರದಲ್ಲಿ ಮಂಗಳವಾರ ಶಾಸಕ ಡಿ.ರವಿಶಂಕರ್ ಅಧ್ಯಕ್ಷತೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಪೂರ್ವಭಾವಿ ಸಭೆಯಲ್ಲಿ ಈ ತೀರ್ಮಾನ ಕೈಗೊಂಡು, ಈ ಬಾರಿ ವೇದಿಕೆ ಕಾರ್ಯಕ್ರಮ, ನಿವೃತ್ತರಿಗೆ ಸನ್ಮಾನ, ಸಂಜೆ ಸಾಂಸ್ಕೃತಿಕ ಹಾಗೂ ಬಹುಮಾನ ವಿತರಣೆ ಕಾರ್ಯಕ್ರಮ ನಡೆಸಲು ಒಕ್ಕೊರಲಿನಿಂದ ತೀರ್ಮಾನಿಸಲಾಯಿತು.

ಶಾಸಕ ಡಿ.ರವಿಶಂಕರ್ ಮಾತನಾಡಿ, ಪ್ರತಿವರ್ಷ ಒಂದೇ ರೀತಿ ಶಿಕ್ಷಕರ ದಿನಾಚರಣೆ ನಡೆಸುವ ಬದಲು ಈ ಬಾರಿ ಬೆಳಗ್ಗೆ ಮತ್ತು ಸಂಜೆ ಕಾರ್ಯಕ್ರಮ ನಡೆಸಿ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಿದ್ದೇನೆ. ಇದಕ್ಕೆ ಸರ್ವ ಶಿಕ್ಷಕರು ಸಹಕಾರ ನೀಡಬೇಕೆಂದಾಗ ಎಲ್ಲಾ ಶಿಕ್ಷಕರು ಸಂತಸದಿಂದ ಬೆಂಬಲ ವ್ಯಕ್ತಪಡಿಸಿದರು.

ಕಾರ್ಯಕ್ರಮದ ವೇದಿಕೆ ನಿರ್ಮಾಣ, ಸನ್ಮಾನದ ವೆಚ್ಚ ಮತ್ತು ಭೋಜನದ ವ್ಯವಸ್ಥೆಯನ್ನು ವೈಯಕ್ತಿಕವಾಗಿ ನಾನೇ ಮಾಡಲಿದ್ದು, ಎಲ್ಲಾ ಶಿಕ್ಷಕರು ಮತ್ತು ಇಲಾಖೆ ಅಧಿಕಾರಿಗಳು ಮತ್ತೊಮ್ಮೆ ಸಭೆ ಸೇರಿ ಶಿಕ್ಷಕರ ದಿನಾಚರಣೆ ಆಚರಣಾ ಸಮಿತಿ ರಚನೆ ಮಾಡಿಕೊಂಡು ಸಭೆ ನಡೆಸಿ ವರದಿ ನೀಡಬೇಕೆಂದು ಸೂಚನೆ ನೀಡಿದರು.

ಅಂದು ಬೆಳಗ್ಗೆ 8.30ಕ್ಕೆ ಪಟ್ಟಣದ ಹಾಸನ–ಮೈಸೂರು ರಸ್ತೆಯ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಬಳಿಯಿಂದ ಮೆರವಣಿಗೆ ಆರಂಭವಾಗಲಿದ್ದು , ನಂತರ ಗರುಡಗಂಭ ವೃತ್ತ, ಪುರಸಭೆ ವೃತ್ತದ ಮೂಲಕ ಸಿಎಂ ರಸ್ತೆಯಲ್ಲಿ ತೆರಳಿ ಬಜಾರ್ ರಸ್ತೆ ಮೂಲಕ ಕಾರ್ಯಕ್ರಮ ನಡೆಯುವ ವೇದಿಕೆ ಬಳಿ ತಲುಪಲಿದ್ದು ಪ್ರತಿಯೊಬ್ಬ ಶಿಕ್ಷಕರು ಕಡ್ಡಾಯವಾಗಿ ಹಾಜರಿರುವುದರ ಜೊತೆಗೆ ಆಕರ್ಷಕ ಸ್ಥಬ್ದಚಿತ್ರವನ್ನು ಪ್ರದರ್ಶನ ಮಾಡಬೇಕೆಂದು ತಿಳಿಸಿದರು.

ಸಂಜೆ ನಡೆಯುವ ಕಾರ್ಯಕ್ರಮದಲ್ಲಿ ಶಿಕ್ಷಕರು ತಮ್ಮ ಪ್ರತಿಭೆ ಪ್ರದರ್ಶಿಸಲು ಅವಕಾಶ ನೀಡಲಿದ್ದು ಆಸಕ್ತರು ನಾಳೆಯಿಂದಲೇ ತಂಡ ರಚಿಸಿಕೊಂಡು ಅಭ್ಯಾಸ ಮಾಡಿ ಉತ್ತಮ ಕಾರ್ಯಕ್ರಮ ನೀಡಬೇಕು. ಈ ವಿಚಾರದಲ್ಲಿ ನಾನು ಎಲ್ಲಾ ಸಹಕಾರ ನೀಡುತ್ತೇನೆ ಎಂದು ಘೋಷಿಸಿದರು.

ಇದೇ ವೇಳೆ ತಾಲೂಕು ಶಿಕ್ಷಕರ ಸಂಘದ ಅಧ್ಯಕ್ಷ ರಾಜಶೇಖರ್, ಪ್ರಧಾನ ಕಾರ್ಯದರ್ಶಿ ಸಿ.ಎನ್.ಸ್ವಾಮಿ, ತಹಸೀಲ್ದಾರ್ ಜಿ.ಸುರೇಂದ್ರಮೂರ್ತಿ, ಬಿಇಓ ಆರ್.ಕೃಷ್ಣಪ್ಪ, ಶಿಕ್ಷಕರಾದ ಸೈಯದ್ ರಿಜ್ವಾನ್, ನಾರಾಯಣಪ್ರಸಾದ್, ಡಿ.ವಿ.ಗುಡಿಪ್ರಸನ್ನ, ಡಿ.ಜೆ.ರಶ್ಮಿ ತ್ರಿವೇಣಿ, ರಾಮಕೃಷ್ಣ ಮತ್ತಿತರರು ಶಿಕ್ಷಕರ ದಿನಾಚರಣೆ ಸಂಬಂಧ ಹಲವು ಸಲಹೆ ನೀಡಿದರು. ಈ ಸಂದರ್ಭ ಪುರಸಭೆ ಮುಖ್ಯಾಧಿಕಾರಿ ಬಿ.ವಿ.ವೆಂಕಟೇಶ್, ಸಿಡಿಪಿಓ ಸಿ.ಎಂ.ಅಣ್ಣಯ್ಯ, ತಾಲೂಕು ಆರೋಗ್ಯಾಧಿಕಾರಿ ಡಾ.ಡಿ.ನಟರಾಜು, ಬಿಇಓ ಕಚೇರಿ ಅಧೀಕ್ಷಕ ಲಕ್ಷ್ಮಣೇಗೌಡ, ಶಿಕ್ಷಣ ಸಂಯೋಜಕ ದಾಸಪ್ಪ, ಶಿಕ್ಷಕರಾದ ಜ್ಯೋತಿ, ಬಿ.ವಿ.ಪ್ರಸನ್ನಕುಮಾರ್, ಭಾಸ್ಕರ್, ಸುಧಾಕರ್, ಚಂದ್ರು, ಕೃಷ್ಣ ನಾಯಕ, ಸುರೇಶ್ ಮತ್ತು ಇತರರಿದ್ದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗೆ ಕೆ.ಮಾರುತಿ ಅಧ್ಯಕ್ಷ



ನಂಜನಗೂಡು, ಆ.13– ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ ಅವರ ಸಲಹೆ ಮೇರೆಗೆ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿ ಕೆ.ಮಾರುತಿ ನೇಮಕ ಮಾಡಲಾಗಿದೆ. ಜಿಪಂ ಸದಸ್ಯರಾಗಿ, ಕಾಂಗ್ರೆಸ್ ಪಕ್ಷದ ಮೈಸೂರು ಜಿಲ್ಲಾ ಹಿಂದುಳಿದ ವರ್ಗದ ಅಧ್ಯಕ್ಷರಾಗಿ ಪಕ್ಷ ಸಂಘಟನೆ ಪರಿಗಣಿಸಿ ಸಚಿವ ಹೆಚ್.ಸಿ.ಮಹದೇವಪ್ಪ ಕೆ.ಮಾರುತಿ ಅವರನ್ನು ತಾಲೂಕು ಮಟ್ಟದ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷರಾಗಿ ನೇಮಕ ಮಾಡಿದ್ದಾರೆ. ಸದಸ್ಯರಾಗಿ ಸೋಮಣ್ಣ, ಮೂರ್ತಿ, ಪ್ರಭು ಸ್ವಾಮಿ, ಸತೀಶ್, ಅಶೋಕ್, ಮಹೇಂದ್ರ, ವೆಂಕಟೇಶ್, ನಂಜನಗೂಡು ಪಟ್ಟಣದ ಪರ್ವೀಜ್, ಜಮುನಾ, ವಿನಯ್ ಕುಮಾರ್ ಅವರನ್ನು ನೇಮಕ ಮಾಡಲಾಗಿದೆ.

ಕೆ.ಆರ್.ನಗರ: ಇಂದು ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

ಕೆ.ಆರ್.ನಗರ, ಆ.13– ಪಟ್ಟಣದ ತಾಪಂ ಸಭಾಂಗಣದಲ್ಲಿ ಆ.14 ರಂದು ಲೋಕಾಯುಕ್ತ ಅಧಿಕಾರಿಗಳು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲಿದ್ದಾರೆ.

ಬೆಳಗ್ಗೆ 11ರಿಂದ ಮಧ್ಯಾಹ್ನ 1 ಗಂಟೆವರೆಗೆ ಅಹವಾಲು ಸ್ವೀಕರಿಸಲಿದ್ದು, ಸಾರ್ವಜನಿಕರು ಸರ್ಕಾರಿ ಕಚೇರಿಗಳಲ್ಲಿ ಕೆಲಸ ಅಗತ್ಯ ವಿಳಂಬ, ಲಂಚದ ಬೇಡಿಕೆ ಸೇರಿದಂತೆ ಇತರ ಸಮಸ್ಯೆಗಳಿದ್ದಲ್ಲಿ ಕ್ರಮ ಬದ್ಧವಾಗಿ ಭರ್ತಿ ಮಾಡಿದ ಅರ್ಜಿಗಳ ಮೂಲಕ ದೂರು ನೀಡಬಹುದು ಎಂದು ಜಿಲ್ಲಾ ಲೋಕಾಯುಕ್ತ ಪೊಲೀಸ್ ಅಧೀಕ್ಷಕರ ಪ್ರಕಟಣೆ ತಿಳಿಸಿದೆ.

ಹಿರಿಯ ಪ್ರಾಥಮಿಕ ಶಾಲಾ ಕ್ರೀಡಾಕೂಟಕ್ಕೆ ಚಾಲನೆ



ಕ್ರೀಡಾಕೂಟಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ್ ಚಾಲನೆ ನೀಡಿದರು.

ಹಿರೀಕ್ಯಾತನಹಳ್ಳಿ, ಆ.13– ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿ ಮಟ್ಟದ ಹಿರಿಯ ಪ್ರಾಥಮಿಕ ಶಾಲಾ ಕ್ರೀಡಾಕೂಟಕ್ಕೆ ಕ್ಷೇತ್ರ ಶಿಕ್ಷಣಾಧಿಕಾರಿ ಮಹದೇವ್ ಚಾಲನೆ ನೀಡಿದರು.

ಹಿರೀಕ್ಯಾತನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾವರಣದಲ್ಲಿ ನಡೆದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಆರೋಗ್ಯದ ಪರಿಪೂರ್ಣತೆಗೆ ಕ್ರೀಡೆ ಅವಶ್ಯಕ. ವಿದ್ಯಾರ್ಜನೆ ಹೆಚ್ಚಳಕ್ಕೆ ಕ್ರೀಡೆ ಸಹಕಾರಿಯಾಗುವುದರ ಜೊತೆಗೆ ಕ್ರೀಡಾ ಸಾಧನೆ ಮಾಡಿದವರಿಗೆ ಮೀಸಲಾತಿಯಲ್ಲಿ ಉದ್ಯೋಗ ಪಡೆಯುವ ಅವಕಾಶವಿರುವುದರಿಂದ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ಸಾಧನೆ ಮಾಡಿ ಉದ್ಯೋಗ ಪಡೆಯಲು ಮುಂದಾಗಬೇಕು ಎಂದರು.

ಕ್ರೀಡೆಯಲ್ಲಿ ಸೋಲು, ಗೆಲುವು ಸಾಮಾನ್ಯ. ಹೀಗಾಗಿ ಪ್ರತಿಯೊಬ್ಬರೂ ಕ್ರೀಡೆಯಲ್ಲಿ ಭಾಗವಹಿಸುವ ಗುಣ ಬೆಳೆಸಿಕೊಳ್ಳಬೇಕು. ಅಲ್ಲದೇ ಸೋಲನ್ನು ಪ್ರೀತಿಸಿ ಗೆದ್ದವರು ಮುಂದೆ ಸಾಧನೆ ಮಾಡಲು ಸಹಕಾರಿಯಾಗಲಿದೆ ಎಂದರು.

ತಾಲೂಕು ದೈಹಿಕ ಶಿಕ್ಷಣ ಪರೀಕ್ಷಕ ಲೋಕೇಶ್ ಮಾತನಾಡಿ, ವಿದ್ಯಾರ್ಥಿಗಳನ್ನು ಕ್ರೀಡಾಕೂಟಕ್ಕೆ ಇಲಾಖೆ ನಿಯಮಗಳಿಗೆ ಅನುಸಾರವಾಗಿ ಮೇಲ್ವಿಚಾರಕರು ಹಾಗೂ ಆ ಸಂಸ್ಥೆಯ ದೈಹಿಕ ಶಿಕ್ಷಣ ಶಿಕ್ಷಕರು ಕರೆದುಕೊಂಡು ಬರಬೇಕು. ಕ್ರೀಡಾಕೂಟ ನಡೆಯುವ ಸಮಯದಲ್ಲಿ ತಂಡದ ಮೇಲ್ವಿಚಾರಕರು, ದೈಹಿಕ ಶಿಕ್ಷಣ ಶಿಕ್ಷಕರು ನೀಡುವ ತೀರ್ಪಿಗೆ ವಿರುದ್ಧವಾಗಿ ಮಾತನಾಡದೆ ಮೊದಲು ತಂಡಗಳ ನಿಯಮ ತಿಳಿದು ಮಾತನಾಡುವುದು ಒಳಿತು ಎಂದರು. ಇದೇ ವೇಳೆ ಕ್ರೀಡಾಕೂಟದ ಬಹುಮಾನ ದಾನಿಗಳಾದ ಇಂಜಿನಿಯರ್ ಲೋಕೇಶ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಸುರೇಂದ್ರ, ಶಿಕ್ಷಣ ಇಲಾಖೆ ಸಂಪನ್ಮೂಲ ವ್ಯಕ್ತಿ ತೀರ್ಥಕುಮಾರ್, ಪ್ರೌಢಶಾಲಾ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಜಗದೀಶ್, ರೈತ ವ್ಯವಸಾಯ ಸಹಕಾರ ಸಂಘದ ನಿರ್ದೇಶಕ ಪುಟ್ಟರಾಜು, ಮುಖ್ಯಶಿಕ್ಷಕ ಮಹೇಶ್, ಸಹ ಶಿಕ್ಷಕರಾದ ರಮೇಶ್, ಕವಿತ, ತಾಲೂಕು ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷ ಜಗದೀಶ್ ಸೇರಿದಂತೆ ಇನ್ನಿತರರಿದ್ದರು.

ಕೆ.ಸಿ.ರವಿಗೆ ಆರಕ್ಷಕ ಕಲಾರತ್ನ ಪ್ರಶಸ್ತಿ



ಹೆಡ್‌ಕಾನ್‌ಸ್ಟೇಬಲ್ ಕೆ.ಸಿ.ರವಿ ಅವರಿಗೆ ಆರಕ್ಷಕ ಕಲಾರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಂಜನಗೂಡು, ಆ.13– ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯ ನಂಜನಗೂಡು ತಾಲೂಕಿನ ಕಳಲೆ ಗ್ರಾಮದ ಹೆಡ್‌ಕಾನ್‌ಸ್ಟೇಬಲ್ ಕೆ.ಸಿ.ರವಿ ಅವರಿಗೆ ಆರಕ್ಷಕ ಕಲಾರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಬೆಂಗಳೂರಿನ ಪೊಲೀಸ್ ಕಲಾ ಸಂಗಮ ಹಾಗೂ ನಬಿರೋಷನ್ ಬೋರಗಿ ಸಂಸ್ಥೆ ವತಿಯಿಂದ ಬೆಂಗಳೂರಿನ ಕೆಎಸ್‌ಆರ್‌ಪಿ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿ ಹೆಡ್‌ಕಾನ್‌ಸ್ಟೇಬಲ್ ಕೆ.ಸಿ.ರವಿ ಅವರಿಗೆ ಆರಕ್ಷಕ ಕಲಾರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ವೇಳೆ ಹಿರಿಯ ಸಂಗೀತ ನಿರ್ದೇಶಕ ಹಂಸಲೇಖ, ಎಸಿಪಿ ಎನ್. ಉಮಾರಾಣಿ, ಕಮಾಂಡೆಂಟ್ ಹಂಜಾ ಹುಸೇನ್, ಪೊಲೀಸ್ ಇನ್‌ಸ್ಪೆಕ್ಟರ್ ಕೆ.ವಿಶ್ವನಾಥ್, ನಬಿರೋಷನ್ ಸಂಸ್ಥೆ ಸಂಸ್ಥಾಪಕ ಮೌಲಾಲಿ ಹಾಜರಿದ್ದರು.

ಶಿಕ್ಷಕರ ಸಂಘದ ನೂತನ ಅಧ್ಯಕ್ಷರಿಗೆ ಸನ್ಮಾನ



ಶಿಕ್ಷಕರ ಸಂಘದ ನೂತನ ಅಧ್ಯಕ್ಷ ಕೆ.ಎಸ್.ಮಹದೇವಪ್ಪ ಅವರನ್ನು ಸನ್ಮಾನಿಸಲಾಯಿತು.

ಬೆಟ್ಟದಪುರ, ಆ.13– ಪಿರಿಯಾಪಟ್ಟಣ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ಅಧ್ಯಕ್ಷ ಕೆ.ಎಸ್. ಮಹದೇವಪ್ಪ ಅವರನ್ನು ಪಿರಿಯಾಪಟ್ಟಣ ತಾಲೂಕು ವೀರಶೈವ ಲಿಂಗಾಯತ ಸಮಾಜದಿಂದ ಸನ್ಮಾನಿಸಲಾಯಿತು.

ನೂತನ ಅಧ್ಯಕ್ಷ ಕೆ.ಎಸ್.ಮಹದೇವಪ್ಪ ಮಾತನಾಡಿ, ಸಮಾಜದ ಎಲ್ಲಾ ಶಿಕ್ಷಕರ ಬೆಂಬಲದಿಂದ ನಾನು ಇಂದು ಅಧ್ಯಕ್ಷನಾಗಿ ಆಯ್ಕೆಯಾಗಿದ್ದು, ಶಿಕ್ಷಕರ ಸಮಸ್ಯೆಗಳನ್ನು ಆಲಿಸಿ ಅವುಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತೇನೆ ಎಂದರು. ಈ ವೇಳೆ ತಾಲೂಕು ಶಿವಕುಮಾರಸ್ವಾಮಿ ಸಂಘದ ಅಧ್ಯಕ್ಷ ಕೂರಗಲ್ ಕುಮಾರಸ್ವಾಮಿ, ತಾಲೂಕು ನಿರ್ದೇಶಕ ಮಲ್ಲೇಶ್, ಬೆಟ್ಟದಪುರ ಗ್ರಾಮದ ಮುಖಂಡರಾದ ಶಿವದೇವ್, ರಾಜೇಂದ್ರ, ಶಿವು, ಮಲ್ಲೇಶ್, ಮಂಜುನಾಥ್, ನಂದಕುಮಾರ್, ಮಹದೇವಪ್ಪ ಸೇರಿದಂತೆ ಇನ್ನಿತರರಿದ್ದರು.

ಭಾರಿ ಮಳೆಗೆ ಮನೆ ಕುಸಿತ

ಹಂಪಾಪುರ, ಆ.13– ಭಾರಿ ಮಳೆಗೆ ಮನೆ ಕುಸಿದಿರುವ ಘಟನೆ ನಂಜನಗೂಡು ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಮಂಜುಳ, ದೊಡ್ಡಮುದ್ದಯ್ಯ ಅವರಿಗೆ ಸೇರಿದ ಮನೆ ಕುಸಿದಿರುವುದು. ಭಾರಿ ಮಳೆಗೆ ಮನೆ ಕುಸಿದಿದ್ದರೂ, ದೊಡ್ಡಮುದ್ದಯ್ಯನವರು ಶೆಡ್ ನಿರ್ಮಿಸಿಕೊಂಡು ವಾಸ ಮಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸರ್ಕಾರದಿಂದ ಸೂಕ್ತ ಪರಿಹಾರ ಕಲ್ಪಿಸಿಕೊಡಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ತಾಲೂಕು ಅಧ್ಯಕ್ಷರು ರಾಜೇಶ್ ಒತ್ತಾಯಿಸಿದ್ದಾರೆ.



ಮಳೆಯಿಂದ ಮನೆ ಕುಸಿದಿರುವುದು.

ನಾಗರಹೊಳೆ ಉಪ ಸಂರಕ್ಷಣಾಧಿಕಾರಿ ಅಧಿಕಾರ ಸ್ವೀಕಾರ



ನಾಗರಹೊಳೆ ಹುಲಿ ಸಂರಕ್ಷಣೆ ಯೋಜನೆ ಉಪ ಸಂರಕ್ಷಣಾಧಿಕಾರಿಯಾಗಿ ಸೀಮಾ ಅವರು ಅಧಿಕಾರ ವಹಿಸಿಕೊಂಡರು. ಈ ವೇಳೆ ಮಾತನಾಡಿದ ಅವರು, ನನ್ನ ಅಧೀನ ಅಧಿಕಾರಿಗಳು ಮತ್ತು ಇಲಾಖಾ ಸಿಬ್ಬಂದಿ ನನ್ನೊಂದಿಗೆ ಸಹಕರಿಸಿದರೆ ನಾನು ಉತ್ತಮವಾಗಿ ಕೆಲಸ ಮಾಡಲು ಸಾಧ್ಯ. ಈ ನಿಟ್ಟಿನಲ್ಲಿ ತಾವು ಸಹಕರಿಸಿ ಕೆಲಸ ಮಾಡಿ ಎಂದರು.

ನಾಳೆ ಸಂಗೊಳ್ಳಿರಾಯಣ್ಣ ಜಯಂತಿ



ಸುದ್ದಿಗೋಷ್ಠಿಯಲ್ಲಿ ಕುನ್ನೇಗೌಡ ಮಾತನಾಡಿದರು.

ಹುಣಸೂರು, ಆ.13– ತಾಲೂಕು ಕುರುಬರ ಅಭಿವೃದ್ಧಿ ಸಮಿತಿಯಿಂದ ಆ.15 ರಂದು ಸಂಗೊಳ್ಳಿರಾಯಣ್ಣ ಜಯಂತಿ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಗಣ್ಯರಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಅಧ್ಯಕ್ಷ ಡಿ.ಕೆ.ಕುನ್ನೇಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಮಧ್ಯಾಹ್ನ 2 ಗಂಟೆಗೆ ನಗರದ ಕನಕ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕೆ.ಆರ್.ನಗರ ಕನಕ ಗುರುಪೀಠ ಶಾಖಾ ಮಠದ ಶ್ರೀಶಿವಾ ನಂದಪುರಿ ಸ್ವಾಮೀಜಿ, ಎಂಎಲ್‌ಸಿ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಶಾಸಕರಾದ ಡಾ. ಯತೀಂದ್ರ, ಜಿ.ಡಿ. ಹರೀಶ್‌ಗೌಡ, ರವಿಶಂಕರ್, ಅನಿಲ್, ಮಾಜಿ ಶಾಸಕರಾದ ಹೆಚ್.ಪಿ.ಮಂಜುನಾಥ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿ ಪ್ರಧಾನ ಕಾರ್ಯದರ್ಶಿ ವಾಸೇಗೌಡ, ಜಿಲ್ಲಾ ಉಪಾಧ್ಯಕ್ಷ ಬಸವರಾಜೇಗೌಡ, ನಿರ್ದೇಶಕರಾದ ಎ.ಪಿ.ಸ್ವಾಮಿ, ರಮೇಶ್ ಇದ್ದರು.

ಗರ್ಭಿಣಿಯರನ್ನು ಆರೋಗ್ಯ ತಪಾಸಣೆಗೆ ಒಳಪಡಿಸಿ

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್



ಕಾರ್ಯಕ್ರಮದಲ್ಲಿ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿದರು.

ಹೆಚ್.ಡಿ.ಕೋಟೆ, ಆ.13– ಪ್ರಾಥಮಿಕ ಆರೋಗ್ಯ ವೈದ್ಯಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರು ಗರ್ಭಿಣಿಯರನ್ನು ಆರೋಗ್ಯ ತಪಾಸಣೆಗೆ ಒಳಪಡಿಸಬೇಕು ಎಂದು ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ನಡೆದ ಪ್ರಧಾನಮಂತ್ರಿ ಸುರಕ್ಷತಾ ಮಾತೃತ್ವ ಅಭಿಯಾನ ಪಿಎಂಎಸ್‌ಎಂಎ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಗರ್ಭಿಣಿಯರನ್ನು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಿಂದ ಪರೀಕ್ಷಿಸಿ ಉಚಿತವಾಗಿ ರಕ್ತದ ಒತ್ತಡ, ಹೆಚಿ ಪರೀಕ್ಷೆ, ತೂಕ ಪರೀಕ್ಷೆ ಮಾಡಿಸುವುದು, ಗರ್ಭಿಣಿಯರಲ್ಲಿ ತೊಂದರೆಗಳು ಕಂಡು ಬಂದಲ್ಲಿ ಸೂಕ್ತ ಸಲಹೆ, ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗೆ ಮೇಲ್ಪಟ್ಟದ ಆಸ್ಪತ್ರೆಗೆ ಕರೆದೊಯ್ಯುವಂತೆ ತಿಳಿಸಿದರು.

ಪೌಷ್ಟಿಕ ಆಹಾರ ಸೇವನೆ, ಸುರಕ್ಷಿತ ಹೆರಿಗೆ, ಸುರಕ್ಷಿತ ತಾಯ್ತನ, ಸುರಕ್ಷಿತ ಶಿಶು ಆರೈಕೆ ಬಗ್ಗೆ ಅರಿವು ಮೂಡಿಸುವುದು. ಪ್ರತಿ ತಿಂಗಳು 9 ಹಾಗೂ 24ರಂದು ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ತಾಯಿ, ಮಕ್ಕಳ ಆಸ್ಪತ್ರೆಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ ಎಂದರು.

ತಾಯಿ, ಶಿಶು ಮರಣ ತಪ್ಪಿಸುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ. ಇತ್ತೀಚೆಗೆ ಬಾಲ್ಯ ವಿವಾಹವಾಗಿ ಹದಿಹರೆಯದವರು ಗರ್ಭಿಣಿಯಾಗುತ್ತಿದ್ದಾರೆ. ಹೆಣ್ಣಿಗೆ 18, ಗಂಡಿಗೆ 21 ವರ್ಷ ತುಂಬಿರಬೇಕು. ಇಲ್ಲದಿದ್ದರೇ ಪೋಕ್ಸೋ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಂಧಿಸಲಾಗುವುದು ಎಂದರು.

ಸಾರ್ವಜನಿಕ ಆಸ್ಪತ್ರೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ.ಪೂರ್ಣಿಮಾ ಮಾತನಾಡಿ, ಪ್ರಧಾನಮಂತ್ರಿ ಸುರಕ್ಷಿತಾ ಮಾತೃತ್ವ ಅಭಿಯಾನದ ಬಗ್ಗೆ ಮತ್ತು ಗರ್ಭಿಣಿಯರ ಆರೈಕೆ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ರವಿರಾಜ್, ಅರ್ಚನಾ, ರಾಜು, ಶಿವಕುಮಾರ್, ವಿದ್ಯಾ, ನಾಗಮ್ಮ, ರೀನಾ, ದೇವಿಂದ್ರಮ್ಮ, ಆಶಾ ಕಾರ್ಯಕರ್ತೆಯರು, ಗರ್ಭಿಣಿಯರು, ತಾಯಂದಿರು, ಇನ್ನಿತರರಿದ್ದರು.

ಸದಾಶಿವ ಆಯೋಗದ ವರದಿ ಜಾರಿಗೆ ಒತ್ತಾಯಿಸಿ

ಬೆಂಗಳೂರಿನ ಪ್ರತಿಭಟನೆಗೆ ತೆರಳಿದ ಮುಖಂಡರು



ಮೀಸಲಾತಿ ಜಾರಿಗೆ ಒತ್ತಾಯಿಸಿ ಬೆಂಗಳೂರಿನ ಪ್ರತಿಭಟನೆಗೆ ತೆರಳಿದ ಪ್ರತಿಭಟನಾಕಾರರು.

ತಿ.ನರಸೀಪುರ, ಆ.13– ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ರಾಜ್ಯ ಸರ್ಕಾರವೇ ಒಳ ಮೀಸಲಾತಿ ಕಲ್ಪಿಸುವ ಅವಕಾಶ ಹೊಂದಿರುವುದರಿಂದ ಸದಾಶಿವ ಆಯೋಗದ ವರದಿ ಜಾರಿಗೊಳಿಸುವಂತೆ ಒತ್ತಾಯಿಸಿ ಬೆಂಗಳೂರಿನ ಫ್ರೀಡಂಪಾರ್ಕ್‌ನಲ್ಲಿ ನಡೆಯಲಿರುವ ಪ್ರತಿಭಟನೆಯಲ್ಲಿ ಭಾಗವಹಿಸಲು ತಾಲೂಕಿನಿಂದ ತೆರಳುತ್ತಿರುವುದಾಗಿ ಡಾ.ಬಾಬು ಜಗಜೀವನ್ ರಾಂ ಜನಕಲ್ಯಾಣ ಸಂಘದ ತಾಲೂಕು ಅಧ್ಯಕ್ಷ ಮಲಿಯೂರು ಡಿ.ಶಂಕರ್ ತಿಳಿಸಿದರು.

ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಬೆಂಗಳೂರಿಗೆ ತೆರಳುವ ಮುನ್ನ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುಪ್ರೀಂ ಕೋರ್ಟ್‌ತೀರ್ಪಿನ ಅನ್ವಯ ನಮ್ಮ ಸಮುದಾಯಕ್ಕೆ ಒಳ ಮೀಸಲಾತಿ ನೀಡಬೇಕು ಎಂದು ಮುಖ್ಯಮಂತ್ರಿಗಳನ್ನು ಆಗ್ರಹಿಸಲಾಗುವುದು ಎಂದರು.

ಮೀಸಲಾತಿಗಾಗಿ ಹಲವು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ತಾಲೂಕಿನಿಂದ ಜಿಲ್ಲಾ, ರಾಜ್ಯ ಮಟ್ಟಗಳಲ್ಲಿ ಹೋರಾಟ ಮಾಡಿದ್ದೇವೆ. ಸಮಾವೇಶಗಳನ್ನು ನಡೆಸಿದ್ದೇವೆ. ಒಳಮೀಸಲಾತಿಕಲ್ಪಿಸಿದರೆ ನಮ್ಮ ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ ಎಂದರು.

ಈಗ ಸುಪ್ರೀಂಕೋರ್ಟ್ ತೀರ್ಪಿನ ಪ್ರಕಾರ ರಾಜ್ಯ ಸರ್ಕಾರವೇ ಒಳ ಮೀಸಲಾತಿ ಕಲ್ಪಿಸುವ ಅವಕಾಶ ಹೊಂದಿರುವುದರಿಂದ ರಾಜ್ಯ ಸರ್ಕಾರ ಸದಾಶಿವ ಆಯೋಗದ ವರದಿ ಜಾರಿಗೊಳಿಸಬಹುದಾಗಿದೆ. ಅದರನ್ವಯ ನಮ್ಮ ಸಮುದಾಯಕ್ಕೆ ಒಳಮೀಸಲಾತಿ ನೀಡಬೇಕು ಎಂದು ಮುಖ್ಯಮಂತ್ರಿಗಳನ್ನು ಒತ್ತಾಯಿಸಲು ರಾಜ್ಯದ 31 ಜಿಲ್ಲೆಗಳಿಂದಲೂ ನಮ್ಮ ಮಾದಿಗ ಸಮಾಜದ ಮುಖಂಡರು ಬೆಂಗಳೂರಿನ ಫ್ರೀಡಂಪಾರ್ಕ್ ಬಳಿ ಸೇರಿ ಬೃಹತ್ ಪ್ರತಿಭಟನೆ ನಡೆಸಲು ಉದ್ದೇಶಿಸಲಾಗಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಹಿಂದುಳಿದ ವರ್ಗಗಳ ಪರ ಇರುವುದರಿಂದ ರಾಜ್ಯದಲ್ಲೇ ಪ್ರಥಮವಾಗಿ ಸುಪ್ರೀಂಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿ ಜಾರಿಗೆ ಆದೇಶಿಸಬೇಕಾಗಿತ್ತು. ಆದರೆ ಇದುವರೆಗೂ ಆದೇಶ ಮಾಡದಿರುವುದು ವಿಷಾದನೀಯ ಎಂದರು.

ಸುಪ್ರೀಂ ತೀರ್ಪಿನಂತೆ ದೇಶದಲ್ಲಿ ಮೊದಲ ಬಾರಿಗೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಒಳ ಮೀಸಲಾತಿ ಜಾರಿಗೊಳಿಸಿದ್ದಾರೆ. ಅದೇ ರೀತಿ ರಾಜ್ಯದಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಮೀಸಲಾತಿ ಜಾರಿಗೊಳಿಸಲು ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ತಾಲೂಕು ಡಾ.ಬಾಬು ಜಗಜೀವನ್ ರಾಂ ಜನಕಲ್ಯಾಣ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಎನ್. ಪುಟ್ಟಸ್ವಾಮಿ, ಕಾರ್ಯದರ್ಶಿ ಮಾದೇಶ್, ಸುರೇಶ್, ನಟರಾಜು, ರಾಜೇಶ್, ಮಹದೇವಣ್ಣ, ರಜಿನಿ, ಲಿಂಗರಾಜು, ಹುಣಸೂರು ಲಿಂಗರಾಜು, ಕೇತಹಳ್ಳಿ ರೇವಣ್ಣ, ಲಿಂಗರಾಜು, ದಿಲೀಪ್, ಮರಿಸ್ವಾಮಿ, ಕಳ್ಳಿಪುರ ಸಿದ್ದರಾಜು, ತಾಲೂಕಿನ ವಿವಿಧ ಗ್ರಾಮದ ಮುಖಂಡರು ಭಾಗವಹಿಸಿದ್ದರು.

ವಯನಾಡು ಭೂ ಕುಸಿತ: ಅಂತಃಕರಣ ತೆರೆಸಿದ ಪ್ರಕೃತಿ ವಿಕೋಪ

• ಸರ್ವಧರ್ಮಗಳ ಜನರ ಕಣ್ಣೀರಿಗೆ ಸಾಕ್ಷಿಯಾದ ಪ್ರಕರಣ • ಪರಸ್ಪರ ಸಹಾಯಕ್ಕೆ ಬಂದು ಕೋಮು ಸೌಹಾರ್ದತೆ ಪ್ರದರ್ಶನ • ನೊಂದವರ ಪರವಾಗಿ ಬಡ ಕುಟುಂಬದವರ ಹೃದಯವೂ ಮಿಡಿದಿದೆ

● ಎಂ.ಟಿ.ಯೋಗೇಶ್ ಕುಮಾರ್

ವಯನಾಡು,ಆ.13– ಕೇರಳದ ವಯನಾಡು ಜಿಲ್ಲೆಯ ಮುಂಡಕ್ಕೈ, ಚೂರನ್ಮಲಾದಲ್ಲಿ ಸಂಭವಿಸಿದ ಭೂ ಕುಸಿತ ಮನುಕುಲದ ಅಂಧಕಾರದ ಅಂಧತ್ವ ತೆರೆಸುವ ಸಂದೇಶ ನೀಡಿದ್ದು, ಭೂಕುಸಿತದಿಂದ ಉಂಟಾದ ಅಪಾರ ಸಂಖ್ಯೆ ಸಾವು–ನೋವಿಗೆ ಒಳಗಾದ ಜನರ ಸಂಕಷ್ಟಕ್ಕೆ ಸರ್ವಧರ್ಮದ ಜನರು ಮಿಡಿದಿದ್ದು, ಮಾನವೀಯತೆಯನ್ನು ಎತ್ತಿ ಹಿಡಿದಿದ್ದಾರೆ.

ದಕ್ಷಿಣ ಭಾರತದ ಇತಿಹಾಸದಲ್ಲಿಯೇ ಅತ್ಯಂತ ಘೋರ ಪ್ರಕೃತಿ ವಿಕೋಪ ಎಂಬ ಅಪಖ್ಯಾತಿಗೆ ಒಳಗಾದ ಕೇರಳದ ಭೂಕುಸಿತ ಪ್ರಕರಣದಲ್ಲಿ ಇದುವರೆಗೂ 418ಕ್ಕೂ ಹೆಚ್ಚು ಮೃತದೇಹ ಹಾಗೂ ಅಂಗಾಂಗಗಳು ದೊರೆತಿದ್ದು, ಇನ್ನೂ 150ಕ್ಕೂ ಹೆಚ್ಚು ಜನರ ಸುಳಿವು ಸಿಕ್ಕಿಲ್ಲ. ಆದರೂ ಶೋಧ ಕಾರ್ಯಾಚರಣೆ ಮುಂದುವರೆದಿದ್ದು, ಜು.30ರಿಂದಲೂ ನಿರಂತರವಾಗಿ ನಡೆಯುತ್ತಿರುವ ಶೋಧ ಕಾರ್ಯಾಚರಣೆಗೆ ಸರ್ವಧರ್ಮಗಳ ಜನರು ಮಿಡಿಯುವ ಮೂಲಕ 'ಮಾನವ ತಾನೊಂದೆ ವಲಂ' ಎಂಬ ಸಂದೇಶ ಸಾರುತ್ತಿದ್ದಾರೆ.

ಮಿಡಿದ ಮನಸ್ಸುಗಳು: ಮುಂಡಕ್ಕೈ, ಚೂರನ್ಮಲಾ (ಚೂರ್ಮಾಲಾ) ಭೂ ಕುಸಿತ ಪ್ರಕರಣದ ಸಂತ್ರಸ್ತರ ನೆರವಿಗಾಗಿ ಭಾರತೀಯ ಸೇನೆ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಸ್ಥಳೀಯ ಪೊಲೀಸ್, ಅರಣ್ಯ ಇಲಾಖೆ, ಅಗ್ನಿಶಾಮಕ ಇಲಾಖೆ ಹಾಗೂ ವಿವಿಧ ಸಂಘಸಂಸ್ಥೆಗಳ ಕಾರ್ಯಕರ್ತರು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಒಂದೆಡೆ ನೋವಿಗೆ ಸ್ಪಂದಿಸುವ ಅನೇಕ ಮನಸ್ಸುಗಳು ಪ್ರಾಣ ಪಣಕ್ಕಿಟ್ಟು ಸೇವೆ ಸಲ್ಲಿಸುತ್ತಿದ್ದರೆ, ಮತ್ತೊಂದೆಡೆ ನೋವಿಗೆ ಸ್ಪಂದಿಸುತ್ತಿರುವವರ ನೆರವಿಗೆ ನೂರಾರು ಸ್ಥಳೀಯ ಕುಟುಂಬಗಳು ಧಾವಿಸಿದೆ. ಅಲ್ಲಿ ಜಾತಿ,ಧರ್ಮದ ಭೇದವಿಲ್ಲದೆ ಸೇವಾ ಮನೋಭಾವದಿಂದ ನೆರವಿನ ಹಸ್ತ ಚಾಚಿದ್ದು, ಚಿಕ್ಕ ಹಾಗೂ ಬಡ ಕುಟುಂಬದ ಜನರು ಕೂಡ ತಮ್ಮ ಮನೆಯಿಂದಲೇ ಟೀ, ಕಾಫಿ, ಹಾಲು, ಬಿಸ್ಕೇಟ್ ಸೇರಿದಂತೆ ಇನ್ನಿತರ ತಿನಿಸನ್ನು ತಂದು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿರುವವರಿಗೆ ವಿತರಿಸುತ್ತಿದ್ದಾರೆ.



ಕೇರಳದ ವಯನಾಡು ಜಿಲ್ಲೆಯ ಮುಂಡಕ್ಕೈ ಗ್ರಾಮದಲ್ಲಿ ಉಂಟಾದ ಭೂ ಕುಸಿತದ ಪ್ರದೇಶದಲ್ಲಿ ಕಾರ್ಯಾಚರಣೆಯಲ್ಲಿ ತೊಡಗಿರುವ ಜನ. ಚಿತ್ರಗಳು: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

ಕಾಲ್ನಡಿಗೆಯಲ್ಲಿ ಸಾಗಬೇಕು: ಭೂ ಕುಸಿತದ ಮೂಲ ಸ್ಥಳ ಪುಂಜರಿ ಮಟ್ಟಂ(ಊರು) ಆಗಿದ್ದು, ಆ ದುರಂತ ಆಹುತಿ ಪಡೆದದ್ದು ಮುಂಡಕ್ಕೈ ಹಾಗೂ ಚೂರನ್ಮಲಾ ಗ್ರಾಮ. ರಕ್ಷಣಾ ಕಾರ್ಯಾಚರಣೆಗಾಗಿ ಭಾರತೀಯ ಸೇನೆ 48 ಗಂಟೆಯಲ್ಲಿ ನಿರ್ಮಿಸಿದ ಸೇತುವೆ ಮೂಲಕ ಲಘು ವಾಹನ ತೆರಳಬಹುದಾಗಿದ್ದು, ರಕ್ಷಣಾ ಕಾರ್ಯದಲ್ಲಿ ತೊಡಗಿರುವ ಸೇವಕರು ಹಾಗೂ ಸಿಬ್ಬಂದಿಗಳು ಬಹುತೇಕರು ಕಾಲ್ನಡಿಗೆಯಲ್ಲಿ ತೆರಳಬೇಕಾಗಿದೆ. ಚೂರನ್ಮಲಾ ಶಾಲೆಯಿಂದ ಸುಮಾರು 1–2 ಕಿ.ಮೀ ದೂರದಲ್ಲೇ ವಾಹನ ನಿಲ್ಲಿಸಿ ನಡೆದುಕೊಂಡು ಹೋಗಬೇಕಾಗಿದ್ದು, ಮಾರ್ಗ ಮಧ್ಯೆ ಸುಸ್ತಾದವರಿಗೆ ಸ್ಥಳೀಯರೇ ಕಾಫಿ, ಟಿ ಹಾಗೂ ತಿನಿಸು ನೀಡಿ ಉಪಚರಿಸುತ್ತಿದ್ದಾರೆ. ಅದರಲ್ಲೂ ಸೇನೆ ನಿರ್ಮಿಸಿದ ಕಬ್ಬಿಣದ ಸೇತುವೆ ಬಳಿ ಹಲವು ಮಂದಿ ಊಟ, ತಿಂಡಿ, ಕಾಫಿ, ಟೀ ಸೇರಿದಂತೆ ಅಗತ್ಯ ತಿನಿಸನ್ನು ಸರಬರಾಜು ಮಾಡಲು ಕಾತರದಿಂದ ಕಾಯುವ ಮೂಲಕ ಮಾನವೀಯತೆ ಇನ್ನು ಜೀವಂತವಾಗಿದೆ ಎಂದು ತೋರ್ಪಡಿಸುತ್ತಿದ್ದಾರೆ.

ಜಾತಿ, ಧರ್ಮದ ಎಲ್ಲೆ ಮೀರಿ: ಭೂ ಕುಸಿತದ ಪ್ರಕರಣ ಅನೇಕರ ಕಣ್ತೆರೆಸುವ ಕೆಲಸ ಮಾಡಿದೆ. ಬಾಳಿ ಬದುಕಿದ್ದವರು, ಬಾಳ ಬೇಕಾದವರು ಭೂ ಗರ್ಭದಲ್ಲಿ ಜೀವಂತ ಸಮಾಧಿಯಾಗಿದ್ದಾರೆ. ಇದರಿಂದ ನೆರೆ ಹೊರೆಯ ಗ್ರಾಮದ ಜನ, ಮಪ್ಪಾಡಿ, ಸುಲ್ತಾನ್ ಬತೇರಿ, ಕಲ್ಪೆಟ್ಟ ಸೇರಿದಂತೆ ವಿವಿಧೆಡೆಯಿಂದ ಹಿಂದೂ, ಮುಸ್ಲಿಂ, ಕ್ರೈಸ್ತ ಸಮುದಾಯದ ಪ್ರಮುಖರು, ಸಂಘ ಸಂಸ್ಥೆಗಳ ಮುಖಂಡರು, ಕಾರ್ಯಕರ್ತರು ಯಾವುದೇ ಭೇದ ಭಾವದ ಹಂಗಿಲ್ಲದೆ ಸೇವಾ ಕಾರ್ಯದಲ್ಲಿ ತೊಡಗುವ ಮೂಲಕ ನೊಂದ ಮನಸ್ಸುಗಳಿಗೆ ಸ್ಪಂದಿಸುತ್ತಿದ್ದಾರೆ. ರಾಜಕೀಯ ಕಾರಣದಿಂದ ಧರ್ಮದ ವಿಚಾರದಲ್ಲಿ ಬಡಿದಾಡುವ ಜನ ವಯನಾಡು ಭೂ ಕುಸಿತದ ಸ್ಥಳದಲ್ಲಿ ಮೂರು ಧರ್ಮಗಳ ಜನ ಸಲ್ಲಿಸುತ್ತಿರುವ ಸೇವೆ ಗಮನಿಸಿದರೆ ಅಂಧಕಾರ ನಿವಾರಣೆಯಾಗುತ್ತದೆ.

ಮೂರು ಧರ್ಮಗಳ ಜನರೂ ಸಾವಿಗೀಡಾಗಿದ್ದಾರೆ

ಮುಂಡಕ್ಕೈ, ಚೂರನ್ಮಲಾ ಗ್ರಾಮ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳು ಈ ಹಿಂದಿನಿಂದಲೂ ಸೌಹಾರ್ದತೆಯ ಸಂಕೇತವಾಗಿವೆ. ಈ ಗ್ರಾಮಗಳು ಪ್ರವಾಸಿಗರ ಆಕರ್ಷಣೀಯ ಕೇಂದ್ರಬಿಂದುವಾಗಿದ್ದು, ಅನೇಕ ಸಣ್ಣ ಸಣ್ಣ ಜಲಪಾತಗಳನ್ನು ಹೊಂದಿವೆ. ಬೆಟ್ಟ, ಗುಡ್ಡಗಳ ಕಣಿವೆಯಲ್ಲಿ ಹರಿವ ಸಣ್ಣ ಜಲಪಾತಗಳು ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಅದಕ್ಕೆ ಪೂರಕವಾಗಿ ಅನೇಕ ರೆಸಾರ್ಟ್, ಹೋಮ್ ಸ್ಟೇಗಳಿವೆ. ಟೀ ಎಸ್ಟೇಟ್‌ಗಳಲ್ಲಿ ರೋಪ್‌ವೇ, ಕೇಬಲ್ ಕಾರ್ ವ್ಯವಸ್ಥೆ ಮಾಡಲಾಗಿದ್ದು, ವಿವಿಧೆಡೆಯಿಂದ ಪ್ರವಾಸಿಗರು ಆಗಮಿಸುತ್ತಿದ್ದರು. ಇಂತಹ ಸುಂದರ, ನಯನ ಮನೋಹರ ತಾಣವಾಗಿದ್ದ ಮುಂಡಕ್ಕೈ, ಚೂರನ್ಮಲಾ ಗ್ರಾಮದಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತರು ನೆಲೆಸಿದ್ದರು. ಪ್ರಕೃತಿ ವಿಕೋಪದಲ್ಲಿ ಮೂರು ಧರ್ಮಗಳ ಜನರು ಮೃತಪಟ್ಟಿದ್ದು, ಸೇವಾ ಕಾರ್ಯ, ರಕ್ಷಣಾ ಕಾರ್ಯದಲ್ಲೂ ಮೂರು ಧರ್ಮಗಳ ಜನ ಸಕ್ರಿಯವಾಗಿ ಪಾಲ್ಗೊಂಡು ಗಮನ ಸೆಳೆದಿದ್ದಾರೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಪಾರ್ಕ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ರಾಯನ್ (ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಬ್ಯಾಡ್ ನ್ಯೂಸ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕಬಂಧ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ಅಂಧಗನ್ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಜೀನಿಯಸ್ ಮುತ್ತ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಕೇಸ್ ನಂ.15 (ತೆ)	4 ಪ್ರದರ್ಶನಗಳು
ಪ್ರಭಾ	
ಕಬಂಧ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡೆಡ್‌ಪೂಲ್ ಅಂಡ್ ವೊಲ್ವೆರಿನ್ (3ಡಿ)(ಇಂ): ಬೆ.10.55ಕ್ಕೆ, ಮ.1.35ಕ್ಕೆ, ಸಂ.4.20ಕ್ಕೆ, ರಾ.7.10ಕ್ಕೆ, ಕಮಿಟಿ ಕುರ್ರೋಳು (ತೆ): ರಾ.9.55ಕ್ಕೆ.
ಸ್ಕ್ರೀನ್ 2	ಭೀಮಾ (ಕ): ಬೆ.10.05ಕ್ಕೆ, ಮಿನ್‌ಮಿನಿ (ತ): ಮ.1ಕ್ಕೆ, ಕಲ್ಕಿ 2898 ಎಡಿ(3ಡಿ) (ತೆ): ಮ.3.50ಕ್ಕೆ, ರಾಯನ್ (ತ): ರಾ.7.15ಕ್ಕೆ, ಅಡಿಯೋಸ್ ಅಮಿಗೋ (ಮ): ಬೆ.10.05ಕ್ಕೆ.
ಸ್ಕ್ರೀನ್ 3	ಕಬಂಧ (ಕ): ಬೆ.10.35ಕ್ಕೆ, ಜೀನಿಯಸ್ ಮುತ್ತ (ಕ): ಮ.1.20ಕ್ಕೆ, ಅಂಧಗನ್ ದಿ ಪೇನಿಸ್ಟ್ (ತ): ಸಂ.4ಕ್ಕೆ, ಇಟ್ ಎಂಡ್ಸ್ ವಿಥ್ ಅಸ್ (ಇಂ): ರಾ.7ಕ್ಕೆ, ರಾ.9.40ಕ್ಕೆ.
ಸ್ಕ್ರೀನ್ 4	ಭೀಮಾ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಅಂಧಗನ್ (ತ): ಮ.1.30ಕ್ಕೆ, ಸಂ.6.30ಕ್ಕೆ, ಪೇಚಿ (ತ): ಸಂ.4.15ಕ್ಕೆ, ಸೂಪರ್ ಜಿಂದಗಿ (ಮ): ರಾ.9.15ಕ್ಕೆ.
ಸ್ಕ್ರೀನ್ 2	ಭೀಮಾ (ಕ): ಬೆ.9.30ಕ್ಕೆ, ಮ.12.30ಕ್ಕೆ, ಮ.3.30ಕ್ಕೆ, ಸಂ.6.30ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 3	ಭೀಮಾ (ಕ): ಸಂ.4.45ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ರಾಯನ್ (ತ): ಮ.1.15ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅನುಸ್ಥಾಪನಾ ದಿನಾಚರಣೆ



ಮೈಸೂರಿನ ಇನ್ನರ್‌ವ್ಹೀಲ್ ಕ್ಲಬ್ ಐಸಿರಿ(AISIRI) ವತಿಯಿಂದ ಇತ್ತೀಚೆಗೆ ಅನುಸ್ಥಾಪನಾ ದಿನ ಆಚರಿಸಲಾಯಿತು. ಶ್ವೇತಾ, ದಿವ್ಯಾ ರಾಜ್‌ಗುರು, ರಾಧಾ ವಿನಯ್, ಗೀತಾ ಮೊಂಟಡ್ಕ, ನೈನಾ ಅಚ್ಚಪ್ಪ, ಅನಿತಾ ವೆಂಕಟೇಶ್, ಸುಧಾಮಣಿ, ಸೌಂಧರಿ ಹರ್ಷ, ಸುಮಾ, ರಾಜೇಶ್ವರಿ ನಂದ್ಯಾಲ್, ಪದ್ಮಶ್ರೀ ಚೇತನ್, ರಶ್ಮಿ ನಾಗೇಂದ್ರ, ಕೀರ್ತಿ ಕುಂಬಾರ್, ಶೋಭಾರಾಣಿ ಮತ್ತಿತರರು ಭಾಗವಹಿಸಿದ್ದರು.

ಅಖಿಲ ಭಾರತ ವೀರಶೈವ ಮಹಾಸಭಾ ಕಾರ್ಯಕಾರಿ ಸಮಿತಿ ಸದಸ್ಯ ಯು.ಎಸ್.ಬಸವರಾಜುಗೆ ಅಭಿನಂದನೆ

ಮೈಸೂರು, ಆ.13(ಎಸ್‌ಬಿಡಿ)– ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರಾಗಿ ಅವಿರೋಧವಾಗಿ ಆಯ್ಕೆಯಾದ ಹುಣಸೂರು ತಾಲೂಕು ಘಟಕದ ಮಾಜಿ ಅಧ್ಯಕ್ಷ ಯು.ಎಸ್.ಬಸವರಾಜು ಅವರನ್ನು ಅಭಿನಂದಿಸಲಾಯಿತು.

ಮೈಸೂರಿನ ಬಸವೇಶ್ವರ ಪ್ರತಿಮೆ ಬಳಿ ಮಂಗಳವಾರ ರಾಜ್ಯ ಘಟಕದ ಮಾಜಿ ಕೋಶಾಧ್ಯಕ್ಷ ವರುಣ ಮಹೇಶ್ ನೇತೃತ್ವದಲ್ಲಿ ಬಸವರಾಜು ಅವರನ್ನು ಅಭಿನಂದಿಸಿ, ಶುಭಕೋರಲಾಯಿತು.

ಈ ವೇಳೆ ವರುಣ ಮಹೇಶ್ ಮಾತನಾಡಿ, ಹಿರಿಯರು, ಅನುಭವಿಗಳು ಹಾಗೂ ಸಮಾಜದ ಬಗ್ಗೆ ಕಾಳಜಿ ಹೊಂದಿರುವ ಬಸವರಾಜು ಅವರನ್ನು ರಾಷ್ಟ್ರೀಯ ಕಾರ್ಯಕಾರಿ ಸಮಿತಿಗೆ ಆಯ್ಕೆ ಮಾಡಿರುವುದು ಸಂತಸ ತಂದಿದೆ. ಶೀಘ್ರ ಜಿಲ್ಲೆಯ ಸಮಾಜದ ಮುಖಂಡರನ್ನು ಭೇಟಿ ಮಾಡಿ, ಜಿಲ್ಲಾ ವೀರಶೈವ ಭವನ ಕಟ್ಟಡ ಕಾಮಗಾರಿ ಆರಂಭಿಸಲು ಕ್ರಮ ವಹಿಸಬೇಕು ಎಂದು ಮನವಿ ಮಾಡಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಬಸವರಾಜು, ನಾನು ಅವಿರೋಧವಾಗಿ ಆಯ್ಕೆಯಾಗಲು ವರುಣ ಮಹೇಶ್ ಸೇರಿದಂತೆ ಜಿಲ್ಲೆಯ ಹಲವು ಮುಖಂಡರು ಕಾರಣರಾಗಿದ್ದಾರೆ. ಹಿರಿಯರಾದ ಶಾಮನೂರು ಶಿವಶಂಕರಪ್ಪ, ಈಶ್ವರ ಖಂಡ್ರೆ, ಶಂಕರ್ ಬಿದರಿ ಸೇರಿದಂತೆ ಹಲವರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲಿಸಿದ್ದಾರೆ. ಎಲ್ಲರಿಗೂ ಕೃತಜ್ಞತೆ ಸಲ್ಲಿಸುವುದರ ಜೊತೆಗೆ ಸಮಾಜದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ ಹೆಚ್.ಡಿ.ಕೋಟೆ ತಾಲೂಕು ಘಟಕದ ಅಧ್ಯಕ್ಷ ರುದ್ರಪ್ಪ, ಮುಖಂಡ ವೊತ್ತ ಬಸವರಾಜು, ಹುಣಸೂರು ತಾಲೂಕು ನಿರ್ದೇಶಕರಾದ ಶೇಖರ್ ರಾಜ್, ಪರಮೇಶ್, ಲೋಕೇಶ್, ರಾಣಿ, ಸುಮಿತ್ರ, ಜಿಲ್ಲಾ ನಿರ್ದೇಶಕರಾದ ಬಿ.ಪಿ.ಮಲ್ಲೇಶ್ ಬೀರಿಹುಂಡಿ, ಪ್ರಭಾಕರ್ ಆಲನಹಳ್ಳಿ, ನಾಗರಾಜು ಯಡಳ್ಳಿ, ಶಿವಪಾದು, ಗೊರೂರು ಮಲ್ಲೇಶ್, ಮಾರ್ಬಳ್ಳಿ ರಾಜಶೇಖರ್, ನಂಜುಂಡಸ್ವಾಮಿ ಮಾದಳ್ಳಿ, ಸಿ.ಎಸ್.ಆನಂದ್, ನಂಜುಂಡ, ಲೋಕೇಶ್ ಈರಪ್ಪನಕೊಪ್ಪಲು, ದೂರ ಶೇಖರ್, ವೃಷಭೇಂದ್ರ ದೂರ, ಮನಗನಹಳ್ಳಿ ಮಂಜುನಾಥ್, ಗುರುಸ್ವಾಮಿ, ಪುರ ವೃಷಭೇಂದ್ರ, ಕಾಡಸೂರು ರಾಜಣ್ಣ, ಕಂಚಮಳ್ಳಿ ನಟರಾಜು, ಮಾದಾಪುರ ಜಗದೀಶ್, ಎಲ್‌ಐಸಿ ಲಿಂಗರಾಜು, ಹಳ್ಳಿಕೆರೆ ಶಿವಕುಮಾರ್, ಭದ್ರಮ್ಮ, ಬಸಳ್ಳಿಹುಂಡಿ ಮೂರ್ತಿ, ಚಿಕ್ಕಳ್ಳಿ ಸ್ವಾಮಿ, ತೇಜಸ್ ಮತ್ತು ಯೋಗೇಶ್, ಕುಮಾರ್ ಮೇಗಳಾಪುರ, ಬೆಟ್ಟನಾಯಕನಹಳ್ಳಿ ರಾಜು, ಲೋಕೇಶ್, ಹಳ್ಳಿಕೆರೆ ಹುಂಡಿ ಜಗದೀಶ್ ಮತ್ತಿತರರು ಉಪಸ್ಥಿತರಿದ್ದರು.



ಅಖಿಲ ಭಾರತ ವೀರಶೈವ ಮಹಾಸಭಾ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ನೂತನ ಸದಸ್ಯ ಯು.ಎಸ್.ಬಸವರಾಜು ಅವರನ್ನು ಮುಖಂಡ ವರುಣ ಮಹೇಶ್ ನೇತೃತ್ವದಲ್ಲಿ ಅಭಿನಂದಿಸಲಾಯಿತು.

ಶುಲ್ಕ ಕಡಿತ, ಶಿಷ್ಯವೇತನ ಹೆಚ್ಚಳಕ್ಕೆ ಆಗ್ರಹಿಸಿ

ಮೈಸೂರು ಮೆಡಿಕಲ್ ಕಾಲೇಜು ಸ್ನಾತಕೋತ್ತರ ವಿದ್ಯಾರ್ಥಿಗಳ ಪ್ರತಿಭಟನೆ



ಮೈಸೂರು, ಆ. 13(ಆರ್‌ಕೆ)– ಬೋಧನಾ ಶುಲ್ಕ ಕಡಿಮೆ ಮಾಡಿ ಶಿಷ್ಯವೇತನ ಹೆಚ್ಚಿಸಬೇಕೆಂದು ಆಗ್ರಹಿಸಿ ರಾಜ್ಯಾದ್ಯಂತ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ಇಂದು ಪ್ರತಿಭಟನೆ ನಡೆಸಿದರು.

ಮೈಸೂರು ಮೆಡಿಕಲ್ ಕಾಲೇಜು ರೆಸಿಡೆಂಟ್ ಡಾಕ್ಟರ್ಸ್ ಅಸೋಸಿಯೇಷನ್ ವತಿಯಿಂದ ಕೆಆರ್. ಆಸ್ಪತ್ರೆ ಆವರಣದಲ್ಲಿ ತೋಳಿಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಕರ್ತವ್ಯ ನಿರ್ವಹಿಸಿ ಮೌನ ಪ್ರತಿಭಟನೆ ನಡೆಸಿದ ಎಂಡಿ, ಎಂಎಸ್ ಸ್ನಾತಕೋತ್ತರ ವಿದ್ಯಾರ್ಥಿಗಳು, ತಮಗೆ ಬೋಧನಾ ಶುಲ್ಕ ಕಡಿತಗೊಳಿಸಬೇಕು, ಶಿಷ್ಯವೇತನವನ್ನು ಬೇರೆ ರಾಜ್ಯಗಳಲ್ಲಿ ನೀಡುತ್ತಿರುವಂತೆ ಪಾವತಿಸಬೇಕು ಎಂದು ಒತ್ತಾಯಿಸಿದರು.

ಆಸ್ಪತ್ರೆಯಲ್ಲಿ ಹಗಲು–ರಾತ್ರಿ ಪಾಳಿ ನಿರಂತರವಾಗಿ ಕೆಲಸ ಮಾಡುತ್ತಿರುವ ತಮಗೆ ಶ್ರಮಕ್ಕೆ ತಕ್ಕ ಶಿಷ್ಯವೇತನ ನೀಡುವ ಜೊತೆಗೆ ಸೇವಾ ರಕ್ಷಣೆ ಒದಗಿಸಬೇಕೆಂದೂ ಆಗ್ರಹಿಸಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಮತ್ತು ಡೈರೆಕ್ಟರ್ ಡಾ. ಕೆ.ಆರ್. ದಾಕ್ಷಾಯಿಣಿ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಕೊಲ್ಕತ್ತಾ ಮೆಡಿಕಲ್ ಕಾಲೇಜು ಸ್ನಾತಕೋತ್ತರ ಪದವಿ ವಿದ್ಯಾರ್ಥಿನಿ ಮೇಲೆ ನಡೆದ ಲೈಂಗಿಕ ಕಿರುಕುಳ ಪ್ರಕರಣವನ್ನು ತೀವ್ರವಾಗಿ ಖಂಡಿಸಿದ ಪ್ರತಿಭಟನಾ ನಿರತ ವೈದ್ಯ ವಿದ್ಯಾರ್ಥಿಗಳು, ಸರ್ಕಾರ ಕರ್ತವ್ಯನಿರತ ವೈದ್ಯರು ಹಾಗೂ ಸಿಬ್ಬಂದಿಗಳಿಗೆ ಸೂಕ್ತ ರಕ್ಷಣೆ ನೀಡುವಂತೆಯೂ ಒತ್ತಾಯಿಸಿದರು.

ಅನ್ನ ಸಂತರ್ಪಣೆ



ಮೈಸೂರು ಸರ್ಕಾರಿ ಉತ್ತನಹಳ್ಳಿಯ ಶ್ರೀ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದಲ್ಲಿ ಮಂಗಳವಾರ ರ್‍ಯಾಪರ್ ಚಂದನ್ ಶೆಟ್ಟಿ ಕುಟುಂಬದವರಿಂದ ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ದೇವಸ್ಥಾನದ ಪಾರುಪತ್ತೆದಾರಾದ ಹೆಚ್.ಆರ್.ಸಂಜೀವ, ಅರ್ಚಕರಾದ ಮಲ್ಲಿಕಾರ್ಜುನ್ ಮತ್ತಿತರರಿದ್ದರು.

ಎನ್‌ಇಪಿ ಅಳವಡಿಸಿಕೊಳ್ಳದಿದ್ದರೆ ವಿದ್ಯಾರ್ಥಿಗಳಿಗೆ ತೊಂದರೆ

ಶಿವಾನಂದ ಸಿಂದನಕೇರಾ ಅಭಿಮತ



ಗುರುವಂದನಾ ಕಾರ್ಯಕ್ರಮವನ್ನು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂದನಕೇರಾ ಉದ್ಘಾಟಿಸಿದರು.

ಮೈಸೂರು, ಆ.13(ಎಸ್‌ಪಿಎನ್)– ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ)ಯನ್ನು ಕರ್ನಾಟಕ ಸರ್ಕಾರ ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಿಕೊಳ್ಳದಿದ್ದರೆ, ಭವಿಷ್ಯದಲ್ಲಿ ನಮ್ಮ ರಾಜ್ಯದ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾಗಲಿದೆ ಎಂದು ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ಪ್ರಧಾನ ಕಾರ್ಯದರ್ಶಿ ಶಿವಾನಂದ ಸಿಂದನಕೇರಾ ಅಭಿಪ್ರಾಯಪಟ್ಟರು.

ಮೈಸೂರು ಲಕ್ಷ್ಮೀಪುರಂ ಶ್ರೀ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ ಆವರಣದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಹಾಗೂ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ್ ಮಹಾಸಂಘದ ಸಹಯೋಗದೊಂದಿಗೆ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ದೇಶದಲ್ಲಿ ಕರ್ನಾಟಕ, ತಮಿಳುನಾಡು, ಪಶ್ಚಿಮ ಬಂಗಾಳ, ದೆಹಲಿ ಸೇರಿದಂತೆ ಐದು ರಾಜ್ಯಗಳು ಅಳವಡಿಸಿಕೊಂಡಿಲ್ಲ. ಕರ್ನಾಟಕದಲ್ಲಿ ಎನ್‌ಇಪಿ ಅಳವಡಿಕೆಯಾಗುವುದರಲ್ಲಿತ್ತು. ಅಷ್ಟರಲ್ಲಿ ಹೊಸ ಸರ್ಕಾರ ಅದನ್ನು ತೆಗೆದು ಹಾಕಿದೆ. ಮುಂದಿನ ದಿನಗಳಲ್ಲಿ ರಾಷ್ಟ್ರಿಯ ಸ್ಪರ್ಧಾತ್ಮಕ ಪರೀಕ್ಷೆಗಳು ಎನ್‌ಇಪಿ ಶಿಕ್ಷಣ ಪದ್ಧತಿಯಡಿ ಆಯೋಜನೆಗೊಳ್ಳಲಿವೆ ಎಂದರು.

ಭಾರತದಲ್ಲಿ ಗುರು–ಶಿಷ್ಯ ಪರಂಪರೆಗೆ ಇತಿಹಾಸವಿದೆ. ವ್ಯಾಸ ಮಹರ್ಷಿ ಗುರು ಪರಂಪರೆಯಲ್ಲಿ ಮಹತ್ವ ಸ್ಥಾನ ಪಡೆದಿದ್ದಾರೆ. ಅವರನ್ನು ಆದಿಗುರು ಎಂದು ಕರೆಯುತ್ತಾರೆ. ಗುರು–ಶಿಷ್ಯ ಪರಂಪರೆ ಇಂದಿನ ಪೀಳಿಗೆಯಲ್ಲಿ ಉಳಿಸಿಕೊಳ್ಳಬೇಕಾದರೆ, ಹಾದಿ ತಪ್ಪಿರುವ ಶಿಷ್ಯರನ್ನು ಸರಿದಾರಿಗೆ ತರುವ ಜವಾಬ್ದಾರಿ ಗುರುಗಳ ಮೇಲಿದೆ ಎಂದರು.

ಈ ವೇಳೆ ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆಯ ಪ್ರಾಂಶುಪಾಲ ಆರ್.ಮಂಜುನಾಥ್, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಉಪಾಧ್ಯಕ್ಷ ಕೆ.ಆರ್.ಉದಯರವಿ ಪ್ರಕಾಶ್, ಮಾಧ್ಯಮಿಕ ಶಿಕ್ಷಕ ಸಂಘ ಮೈಸೂರು ಜಿಲ್ಲಾಧ್ಯಕ್ಷ ಪಿ.ಕೆಂಪಯ್ಯ, ಎನ್.ಪಿ.ವಿಜಯ್ ಕುಮಾರ್, ಅರುಣ್‌ಕುಮಾರ್ ಉಪಸ್ಥಿತರಿದ್ದರು.

ಸರ್ಕಾರ ಗ್ರೀನ್ ಸಿಗ್ನಲ್ ನೀಡಿದರೂ

ಆರಂಭವಾಗದ ಮುಡಾ ಕಚೇರಿ ದೈನಂದಿನ ಕೆಲಸಗಳು

ಅಧಿಕಾರಿಗಳೂ ಸೇರಿ ಸುಮಾರು 200 ಮಂದಿ ನೌಕರರು ಒಂದೂವರೆ ತಿಂಗಳಿಂದ ಸುಖಾಸುಮ್ಮನೆ ಕಾಲ ಕಳೆಯುವಂತಾಗಿದ್ದು, ಸಾರ್ವಜನಿಕರಿಗೆ ತೀವ್ರ ತೊಂದರೆ

ಮೈಸೂರು, ಆ.13(ಆರ್‌ಕೆ)–ಕಾನೂನು ಬಾಹಿರವಾಗಿ ನಿವೇಶನ ಹಂಚಿಕೆ ಹಗರಣದ ತನಿಖೆ ನಡೆಯುತ್ತಿರುವುದರಿಂದ ಸ್ಥಗಿತಗೊಂಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಕಚೇರಿ ದೈನಂದಿನ ಕೆಲಸ ಕಾರ್ಯಗಳು ಸರ್ಕಾರ ಗ್ರೀನ್ ಸಿಗ್ನಲ್ ನೀಡಿ 10 ದಿನ ಕಳೆದರೂ ಇನ್ನೂ ಆರಂಭವಾಗಿಲ್ಲ.



ಆಗಸ್ಟ್ 3ರಂದು ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಕೆ.ಲತಾ ಅವರು ಪ್ರಾಧಿಕಾರದ ಕಚೇರಿ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ವಿನಾಯಿತಿ ನೀಡಲಾಗಿದೆ ಎಂದು ಕಮಿಷ್ನರ್‌ಗೆ ಪತ್ರ ಬರೆದು ಸೂಚನೆ ನೀಡಿದ್ದರು. ಕಂದಾಯ ಪಾವತಿ, ಕಟ್ಟಡ ವಿನ್ಯಾಸ, ನಕ್ಷೆ ಅನುಮೋದನೆ, ನ್ಯಾಯಾಲಯದ ಪ್ರಕರಣಗಳು, ಅನ್ಯಕ್ರಾಂತ ಅಭಿಪ್ರಾಯ ನೀಡುವ ಕಡತಗಳು ಸೇರಿದಂತೆ ಇನ್ನಿತರ ಕೆಲಸಗಳನ್ನು ನಿರ್ವಹಿಸುವಂತೆ ಅಧೀನ ಕಾರ್ಯದರ್ಶಿಗಳು ಪತ್ರದಲ್ಲಿ ತಿಳಿಸಿದ್ದರು.

ಮುಡಾದಲ್ಲಿ ನಿವೇಶನ ಹಂಚಿಕೆ ಸಂಬಂಧ ನಡೆದಿರುವ ಅವ್ಯವಹಾರದ ತನಿಖೆ ನಡೆಸಲು ಜುಲೈ 1ರಂದು ಸರ್ಕಾರ ತಂಡ ರಚಿಸಿದ ಹಿನ್ನೆಲೆಯಲ್ಲಿ ತನಿಖೆ ಪೂರ್ಣಗೊಂಡು ವರದಿ ನೀಡುವವರೆಗೆ ಸಭೆ, ಕಡತಗಳಿಗೆ ಸಹಿ, ತೀರ್ಮಾನ, ನಿವೇಶನ ವಿಲೇವಾರಿ ಮುಂತಾದ ಕಾರ್ಯಗಳನ್ನು ನಡೆಸದಂತೆ ಈ ಹಿಂದೆ ಸರ್ಕಾರ ಆದೇಶ ಹೊರಡಿಸಿತ್ತು

ಇದೀಗ ವಿನಾಯಿತಿ ನೀಡಿದ್ದರೂ ಸಹ ಮುಡಾ ಅಧಿಕಾರಿಗಳು ಯಾವುದೇ ಕೆಲಸ ಕಾರ್ಯ ಮಾಡುವ ಸಾಹಸ ಮಾಡದಿರುವುದರಿಂದ ಸಾರ್ವಜನಿಕರು ಪರದಾಡುವಂತಾಗಿದೆ. ಅಧ್ಯಕ್ಷರು, ಓರ್ವ ಆಪ್ತ ಸಹಾಯಕ, ಕಮೀಷ್ನರ್ ಹಾಗೂ ಇಬ್ಬರು ಆಪ್ತ ಸಹಾಯಕರು, ಕಾನೂನು ಅಧಿಕಾರಿ ಮತ್ತು ಪೂರಕ ಸಿಬ್ಬಂದಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಕಾರ್ಯದರ್ಶಿ, ಮುಖ್ಯ ಲೆಕ್ಕಾಧಿಕಾರಿ, ಇಬ್ಬರು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು, ನಗರ ಯೋಜಕ ಸದಸ್ಯ, ವಿಶೇಷ ಭೂ ಸ್ವಾಧೀನಾಧಿಕಾರಿ ಹಾಗೂ ಅವರಿಗೆ ತಲಾ ಒಬ್ಬೊಬ್ಬ ಆಪ್ತ ಸಹಾಯಕರುಗಳಿದ್ದಾರೆ.

ಅಲ್ಲದೆ, 13 ಮಂದಿ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು, 20 ಮಂದಿ ಎಇ ಮತ್ತು ಜೆಇಗಳು, ಮೂವರು ನಗರ ಯೋಜನಾ ಸಹಾಯಕ ನಿರ್ದೇಶಕರು, ಮೂವರು ವಿಶೇಷ ತಹಶೀಲ್ದಾರ್‌ಗಳು, ಐವರು ಕಚೇರಿ ಅಧೀಕ್ಷಕರು, 11 ಕಚೇರಿ ವ್ಯವಸ್ಥಾಪಕರು, 10 ಪ್ರಥಮ ದರ್ಜೆ ಸಹಾಯಕರು, 20 ದ್ವಿತೀಯ ದರ್ಜೆ ಸಹಾಯಕರು, 40 ಕ್ಲಾಸ್–4 ಮತ್ತು 'ಡಿ' ಗ್ರೂಪ್ ನೌಕರರು, 45 ಹೊರಗುತ್ತಿಗೆ ನೌಕರರು, 30 ಮಂದಿ ವಾಹನ ಚಾಲಕರುಗಳೂ ಸೇರಿ ಸುಮಾರು 200 ಮಂದಿ ಮುಡಾದಲ್ಲಿದ್ದಾರೆ.

ಜೊತೆಗೆ 30 ವಾಹನಗಳನ್ನು ಅಧಿಕಾರಿಗಳಿಗೆ ಒದಗಿಸಲಾಗಿದೆ. ಸಂಬಳ, ವಾಹನಗಳಿಗೆ ಇಂಧನ, ಕಚೇರಿ ನಿರ್ವಹಣೆ, ಲೇಖನ ಸಾಮಗ್ರಿ, ವಿದ್ಯುತ್, ಇಂಟರ್‌ನೆಟ್, ಟೆಲಿಫೋನ್ ಬಿಲ್, ಪಿಂಚಣಿ ಸೇರಿದಂತೆ ತಿಂಗಳಿಗೆ ಸರಿ ಸುಮಾರು 5 ರಿಂದ 6 ಕೋಟಿ ರೂ. ಖರ್ಚಾಗುತ್ತದೆ ಎಂದು ಅಂದಾಜಿಸಲಾಗಿದೆ.

ಆದರೆ, ಕಳೆದ ಒಂದೂವರೆ ತಿಂಗಳಿಂದ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಚೇರಿಗೆ ಬಂದು ಹಾಜರಾತಿ ಹಾಕಿ ಕಾಲ ಕಳೆದು ಹೋಗುತ್ತಿದ್ದಾರೆ.

ಮೊದಲೇ ನಿವೇಶನಗಳನ್ನು ಮನಸೋ ಇಚ್ಛೆ ಪರಭಾರೆ ಮಾಡಿ ಸಂಪನ್ಮೂಲದ ಗರ್ಭವನ್ನೇ ಬಗೆದು ಖಾಲಿ ಮಾಡಿರುವ ಜೊತೆಗೆ ಇದೀಗ ಸುಖಾಸುಮ್ಮನೆ ಸಂಬಳ ಕೊಡುತ್ತಿರುವ ಬಗ್ಗೆ ತೆರಿಗೆ ಪಾವತಿಸುತ್ತಿರುವ ನಾಗರಿಕರು ಆತಂಕ ವ್ಯಕ್ತಪಡಿಸುತ್ತಿದ್ದಾರೆ.

RMS HOSPITALS
Krishnamurthy Puram, Mysuru
REQUIRED
RECEPTIONIST
with computer knowledge
& good communication skills
NURSING STAFF
ANM/GNM with minimum
1 year experience
For immediate placement
Contact: 9611554441

Aquaguard & Kent Sales and Service
Service charge :300/-
9901200444



Venue In Mysore
JLB Road | The Institution Of Engineers
Jhansi Lakshmibai Road
Mysore - 570005

ನಿಸರ್ಗ ಇಕೋ ಪ್ಯಾರಡೈಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
DTCP APPROVAL
ನಿಮ್ಮ ಕನಸಿನ ನಿವೇಶನ ಮೈಸೂರಿನಲ್ಲಿ
ಸುಲಭ 4 ಕಂತುಗಳ ಸೌಲಭ್ಯವಿದೆ
ಕೇವಲ ₹650/ ಪ್ರತಿ ಚದರ ಅಡಿ
30x40 | 30x50
40x60 | 50x80
ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಕೆಲವೇ ಸೈಟ್‌ಗಳು ಮಾತ್ರ ಲಭ್ಯ
ಹೈಲ್ಯಾಂಡ್ ಪ್ರಾಪರ್ಟೀಸ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
90713 86615
74060 01386

Dollar Estate Properties Pvt. Ltd. Mysuru
WE ARE HIRING FOR
- Team Leader
- Sales Executives
- Tele Calling

Any Degree with property relevant experience
20,000 + Salary

- Sales Manager 25,000 + Salary

with Attractive salary + Incentives
Call : 95383 85049, 91486 90763
0821 - 4247004

WE ARE HIRING
BE A PART OF KHUSHI TEAM
- Service Advisor
- Technician
- Helpers
- Sales Manager
- Sales Consultant
- Tele Callers

WALK IN :
From 14th to 17th August,
Between 10 AM to 5 PM
KHUSHI MOTORS
Authorised Service Dealer for Bajaj 2 Wheeler
76/2 Ring Road, Bogadi Village,
Kasaba Hobli, Mysuru-570 026
Call : 87626 60638

HOUSE FOR SALE
Duplex 3 BHK with Garage
North - East corner
Measuring 42x40, Vastu
home 6 Km from Mysore
Palace, Bank Colony, Bogadi
Close to Ring Road. Contact
9964759076
(Broker Excuse)

Baithack ಬೈಠಕ್
TASTE OF KULHAD
Tea / Coffee & Snacks
141, Pachche Road, 'I' Block,
Kuvempunagar, Mysuru-23 Mob : 76760 33865

INAUGURATION
on 14th August 2024 at 4.00pm by
Mr. T.S. SRIVATSA, MLA, Krishnaraja Constituency



Discover the rich flavours of our signature chai, brewed to perfection in traditional KULHADS

But that's not all — our menu is packed with delights like aromatic coffee, crispy fries, Juicy burgers, and even our unique KULHAD PIZZA



With Best Compliments :
Mr. M.V. Ravishankar & Mr. M.A. Mohan, Sri Siddaraju, Ex-MLC

ಹೆಚ್.ಡಿ.ಕೋಟೆ ರಸ್ತೆಯಲ್ಲಿ ನಿವೇಶನಗಳು ಮಾರಾಟಕ್ಕಿವೆ

ಸಾನ್ವಿ ಎನ್‌ಕ್ಲೇವ್
Saanvi Enclave
ಜಯಪುರ ಬಸ್ ನಿಲ್ದಾಣದ ಹಿಂದೆ
ಬ್ಯಾಂಕ್ ಸಾಲ ಸೌಲಭ್ಯವಿದೆ
ಅಳತೆ 30/50, 30/40
9972602543

APPROVED DTCP APPROVED
A ಖಾತೆ
ARKA PROPERTIES
Let's Grow Together
www.arkaproperties.in

ಮಹಿಮ ಎನ್‌ಕ್ಲೇವ್
MAHIMA ENCLAVE
An Artist Town
ಬ್ರಾಹ್ಮಿನ್ಸ್ ಲೇಔಟ್ ಸಮೀಪ, ದೇವಗಳ್ಳಿ
ಬ್ಯಾಂಕ್ ಸಾಲ ಸೌಲಭ್ಯವಿದೆ
ಅಳತೆ 30/40
RERA REGISTERED: PRM/KA/RERA/1268/378/AG/180430/000879

ಹಸಿರು ನಮ್ಮ ಉಸಿರು

neem
BOND PLATINUM
PLY / DOORS
@ FACTORY RATES
10 YEARS WARRANTY
9901291267 / 9845426862

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

CHANGE OF NAME
CHAITRA MAHESH GANGAPUR D/o Mahesh. G, Aged about 23 years, resident of # 150, Shivoham, 2nd Main, 6th Cross, New Parle Factory, Manjula Enclavem Doddabidarakallu, Nagasandra, Bangaluru,-560073. do hereby declare that I have changed my name from CHAITHRA M G to CHAITRA MAHESH GANGAPUR, henceforth I shall be known and called as CHAITRA MAHESH GANGAPUR only, vide affidavit dated 14/08/2024, sworn before Advocate.

NEW HOUSE FOR SALE
in the heart of city
East facing, G/F, F/F & S/F,
3 bedrooms, all attached,
as per vasthu, 13x30,
behind city X Ray,
New Sayyaji Rao Road, Mysore-1.
Call: 9108955552

3ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು:
ಪತ್ನಿ ಎಂ.ಸಿ.ವನಜಾಕ್ಷಿ, ಮಗಳು ಮೊಮ್ಮಕ್ಕಳು ಮತ್ತು ಸಹೋದರರು, ಗೌರಿಶಂಕರ ನಗರ, ಮೈಸೂರು
ಶ್ರೀ ವಿ.ನಾಗರಾಜುರವರು (ನಾಗಣ್ಣ)

WANTED for IMMEDIATE Recruitment
Required the following personnel for a reputed Company located just 4 kms away from Manipal Hospital, Mysuru.
▸PERSONAL SECRETARY
to the Managing Director - Female Candidate
A graduate with minimum 2 years of experience and at least 30WPM of typing speed is must for the above position. Salary may not be a constraint for the deserving candidate. Apply immediately
Send your resumes to email:
gm@nectarfreshfoods.com /
through WhatsApp on Ph: 9448283983

Sarada Vilas Educational Institutions®
Sarada Vilas College Road, Krishnamurthypuram,
Mysuru – 570 004
150 YEARS
Annual General Body Meeting and Elections to the Governing Council of Sarada Vilas Educational Institutions, Mysuru were held on 11-08-2024 and the following members were elected.



Dr. G. L. Shekhar, S.L. Ramachandra, Anuradha Nandakumar, C.A. Sharath S. Bharadwaj, R. Narasimha, Dr. B.M. Subraya, C.N. Yadhunandan, R. Dinesha, Dr. Narayana Hegde, Dr. T.K. Umesh, N. Chandrashekar, R.S. Mohan Murthy, Nagesh R. Hansoge, Prasad, K. Nagaraja

Congratulations !
—Management

4ನೇ ವರ್ಷದ ಸವಿನೆನಪು



ಜನನ: 11/7/1977 ನಿಧನ: 14/08/2020
ಶ್ರೀ ಪ್ರಸನ್ನಕುಮಾರ್
ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ಸದಾ ನಿಮ್ಮ ನೆನಪು ನಮ್ಮ ಮನದಲ್ಲಿ ಅಚ್ಚ ಹಸಿರಾಗಿದೆ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವವರು
ದುಃಖತಪ್ತರು: ತಂದೆ–ನಾಗರಾಜು, ತಾಯಿ-ಲಕ್ಷ್ಮಮ್ಮ, ಪತ್ನಿ : ರತ್ನಕುಮಾರಿ ಮಕ್ಕಳಾದ: ಅಭಿಷೇಕ್ ಮತ್ತು ಅಮೂಲ್ಯ ಹಾಗೂ ತಮ್ಮ: ಶ್ರೀಮತಿ ರಶ್ಮಿ ಮತ್ತು ಆದರ್ಶ್ ಮತ್ತು ಅಕ್ಕ ರಮಾಮಣಿ ಹಾಗೂ ಕುಟುಂಬ ವರ್ಗದವರು

Mysore's Reputed 3★ Hotel is Looking for candidates for the following positions:
WANTED

Housekeeping supervisor (well Experienced)	:	3 Nos
House Man & Women	:	3 Nos Each
Restaurants Steward	:	5 Nos

Walk in with resume & passport size photo
between 10.00am - 5.00pm
E-mail : presidentsales@gmail.com
9008099512, 0821- 4008900

(ಕರ್ನಾಟಕ ಸರ್ಕಾರ)
ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ,
(ವಿಭಾಗೀಯ ಮಟ್ಟದ 150 ಹಾಸಿಗೆಗಳ ಆಸ್ಪತ್ರೆ)
email:crawfordhospital@gmail.com phone:08173-243098
ಕ್ರಸಂ.ಕ್ರಾಸಾಆಸ/ಎಬಿ.ಎ.ಆರ್.ಕೆ/ಔಷಧಿ/06/2024–25
ದಿನಾಂಕ: 07.08.2024

ಇ ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024–25ನೇ ಸಾಲಿಗೆ ಔಷಧಿಗಳ ಸರಬರಾಜಿಗಾಗಿ ಅರ್ಹ ಟೆಂಡರ್‌ದಾರರಿಂದ/ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಪಾರದರ್ಶಕ ಅಧಿನಿಯಮ 1999–2000 ವೇರೆಗೆ ದ್ವಿಲಕೋಟೆ ಪದ್ಧತಿಯನ್ವಯ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ವಾರ್ಷಿಕ ಅಂದಾಜು ಮೊತ್ತ 40.00 ಲಕ್ಷ/– ಆಸಕ್ತ ಸರಬರಾಜುದಾರರು ವೆಬ್‌ಸೈಟ್ www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವ ಮೂಲಕ ಇ– ಪ್ರಕ್ಯೂರ್ ಮೆಂಟ್ ನಲ್ಲಿ ಭಾಗವಹಿಸಬಹುದು. ರೂ. 100000/–ಗಳ ಇ.ಎಂ.ಡಿ ಯನ್ನು ಇ– ಪಾವತಿ ಮೂಲಕ ಸಕಾಲದಲ್ಲಿ ಭರ್ತಿಮಾಡಿದ ಟೆಂಡರ್‌ಗಳನ್ನು ದಿ:23/08/2024 ರ ಸಂಜೆ 4.30 ಗಂಟೆಯೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ. ಅಥವಾ ವೆಬ್‌ಸೈಟ್‌ನಲ್ಲಿ ನೋಡಬಹುದು.

ಸಹಿ/–ಆಡಳಿತ ವೈದ್ಯಾಧಿಕಾರಿಗಳು, ಕ್ರಾಫರ್ಡ್ ಸಾರ್ವಜನಿಕ ಆಸ್ಪತ್ರೆ, ಸಕಲೇಶಪುರ,
ವಾಸಾಸಂಇ/ಜಿಮಾವಿ/ಹಾಸನ/296/ಕೆಎಸ್‌ಎಂಸಿಎ/2024–25

ಧಾರ್ಮಿಕ ದತ್ತಿ ಇಲಾಖೆ
ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ
ಶ್ರೀ ಚಿಕ್ಕದೇವಮ್ಮ ದೇವಾಲಯ
ಶ್ರೀ ಕ್ಷೇತ್ರ ಕುಂದೂರು ಚಿಕ್ಕದೇವಮ್ಮನ ಬೆಟ್ಟ
ಸರಗೂರು ತಾಲ್ಲೂಕು, ಮೈಸೂರು ಜಿಲ್ಲೆ – 571121
Email: eochikkadevammatemple@gmail.com
ಸಂಖ್ಯೆ:ಶ್ರೀ.ಚಿ.ದೇ.ದೇ:ಜಿಆರ್:06ಎ/2023–24 ದಿನಾಂಕ: 09.08.2024

ಹರಾಜು ಪ್ರಕಟಣೆ

ಮೈಸೂರು ಜಿಲ್ಲೆ ಸರಗೂರು ತಾಲ್ಲೂಕು ಕುಂದೂರು ಚಿಕ್ಕದೇವಮ್ಮ ಬೆಟ್ಟದ ಮೇಲಿರುವ ಶ್ರೀ ಚಿಕ್ಕದೇವಮ್ಮ ದೇವಸ್ಥಾನದ ವಿವಿಧ ಬಾಬ್ತುಗಳ ಬಹಿರಂಗ ಹರಾಜನ್ನು ದಿ: 30.08.2024 ರಂದು ಶ್ರೀ ಚಿಕ್ಕದೇವಮ್ಮ ಬೆಟ್ಟದಲ್ಲಿರುವ ಸಮುದಾಯ ಭವನದಲ್ಲಿ ಬೆಳಿಗ್ಗೆ 11.00 ಗಂಟೆಗೆ ಮಾನ್ಯ ತಹಶೀಲ್ದಾರ್, ಸರಗೂರು ತಾಲ್ಲೂಕು ಹಾಗೂ ಮಾನ್ಯ ಜಿಲ್ಲಾಧಿಕಾರಿಯವರ ಕಛೇರಿಯ ಧಾರ್ಮಿಕ ದತ್ತಿ ತಹಶೀಲ್ದಾರ್ ರವರ ಸಮಕ್ಷಮದಲ್ಲಿ ಹರಾಜು ಪ್ರಕ್ರಿಯೆ ನಡೆಸಲಾಗುವುದು, ಸದರಿ ಹರಾಜಿನಲ್ಲಿ ಭಾಗವಹಿಸುವವರು ಸಂಬಂಧಿಸಿದ ದಾಖಲೆಗಳೊಂದಿಗೆ ನಿಗಧಿತ ಸಮಯಕ್ಕೆ ಸರಿಯಾಗಿ ಹಾಜರಾಗಲು ಕೋರಿದೆ.

ಕ್ರ.ಸಂ	ಬಾಬ್ತುಗಳ ವಿವರ	ಇ.ಎಂ.ಡಿ
1	ಲಾಡು ಪ್ರಸಾದ ಮತ್ತು ಕಲ್ಲು ಸಕ್ಕರೆ ಪ್ರಸಾದ ಮಾರಾಟ ಮಾಡುವ ಹಕ್ಕು	50,000/–
2	ವಾಹನ ನಿಲುಗಡೆ ಶುಲ್ಕ ವಸೂಲಾತಿ ಮಾಡುವ ಹಕ್ಕು	50,000/–
3	ಕ್ಷಣ ಮಾತ್ರದಲ್ಲಿ ಪೋಟೋ ತೆಗೆಯುವ ಹಕ್ಕು	10,000/–
4	ಮೆಟ್ಟಿಲುಗಳ ಮುಂಭಾಗ ಧೂಪ ಹಾಕುವುದು ಮತ್ತು ಮೆಟ್ಟಿಲು ಪಕ್ಕದಲ್ಲಿ ಭಕ್ತಾದಿಗಳು ಒಡೆಯುವ ಇಡುಗಾಯಿಯನ್ನು ತೆಗೆದುಕೊಂಡು ಸ್ಥಳವನ್ನು ಸ್ವಚ್ಛ ಮಾಡುವ ಹಕ್ಕು	5,000/–
5	ಹರಕೆ ಮುಡಿ ತೆಗೆಯುವ ಹಕ್ಕು	10,000/–

ನಿಬಂಧನೆಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಕಛೇರಿ ದೂರವಾಣಿ ಸಂಖ್ಯೆ: 8228200221
ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು, ಶ್ರೀ ಚಿಕ್ಕದೇವಮ್ಮ ದೇವಸ್ಥಾನ, ಚಿಕ್ಕದೇವಮ್ಮನಬೆಟ್ಟ, ಸರಗೂರು ತಾಲ್ಲೂಕು.
DIPR/DDMYS-399/KSMCA-276/2024-25

ಮೈಸೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ
ನೀಸ&ಒಚ (ಪೂರ್ವ) ವಿಭಾಗ, ವಾವಿನೀಸ ಆವರಣ, ಯಾದವಗಿರಿ, ಮೈಸೂರು
ಟೆಂಡರ್ ಪ್ರಕಟಣೆ ಸಂಖ್ಯೆ : ಮೈಮಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್–4/291/2024–25 ದಿನಾಂಕ: 12–08–2024

ಅಲ್ಪಾವಧಿ/ ಪೂರ್ಣಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ

ಪಾಲಿಕೆ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡಂತಿರುತ್ತದೆ.

ಕ್ರ. ಸಂ.	ವಿವರ	ಕಾಮಗಾರಿ ಸಂಖ್ಯೆ	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 4:30 ಗಂಟೆ ನಂತರ: ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಸಂಜೆ 4:25 ಗಂಟೆ ಒಳಗೆ: ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 4:30 ಗಂಟೆಯ ನಂತರ: ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-2, & Kw-3	4	218.00	14-08-2024	28-08-2024	29.08.2024
2	Kc-8	3	140.10	14-08-2024	22-08-2024	23.08.2024

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.
ಸಹಿ/– ಕಾರ್ಯಪಾಲಕ ಅಭಿಯಂತರರು, ನೀಸ&ಒಚ(ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು